ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಮಾರ್ಚ್ 25 ಮಂಗಳವಾರ 2025


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 335 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೆಆರ್‌ಎಸ್‌ನಲ್ಲಿ ಯೋಜನೆಗೆ ಅಡ್ಡಿ–ಆತಂಕ ಸಾಧ್ಯತೆ

ಕಬಿನಿ ಹಿನ್ನೀರಿನಲ್ಲಿ ಜಲ ವಿಮಾನಯಾನ ಯೋಜನೆಗೆ ಚಿಂತನೆ



ಮೈಸೂರು, ಮಾ.24(ಆರ್‌ಕೆ)– ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲೂಕಿನ ಕಬಿನಿ ಜಲಾಶಯದ ಹಿನ್ನೀರಲ್ಲಿ ಜಲ ವಿಮಾನ ಯಾನ ಯೋಜನೆ ಅನುಷ್ಠಾನಕ್ಕೆ ಸರ್ಕಾರ ಮುಂದಾಗಿದೆ.

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಲ್ಲೊಂದಾದ ಸೀ ಪ್ಲೇನ್ (ಜಲ ವಿಮಾನ ಯಾನ) ಅನ್ನು ಕೇಂದ್ರ ಸರ್ಕಾರದ ಪ್ರಾದೇಶಿಕ ಸಂಪರ್ಕ ಯೋಜನೆ ಉಡಾನ್ (Ude Desh ka Aam Nagrik) ಅಡಿ ಮಂಡ್ಯ ಜಿಲ್ಲೆಯ ಕೃಷ್ಣರಾಜ ಸಾಗರ (ಕೆಆರ್‌ಎಸ್) ಹಿನ್ನೀರಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿದ್ದ ಜಲವಿಮಾನಯಾನ ಯೋಜನೆಯನ್ನು ಇದೀಗ ಕಬಿನಿ ಹಿನ್ನೀರಿನಲ್ಲೂ ಜಾರಿ ಮಾಡಲು ಚಿಂತನೆ ನಡೆಸಲಾಗಿದೆ.

ಕೆಆರ್‌ಎಸ್ ಹಿನ್ನೀರಲ್ಲಿ ಜಲ ವಿಮಾನಯಾನಕ್ಕೆ ಕೆಲ ತಾಂತ್ರಿಕ ತೊಡಕುಗಳು ಕಂಡುಬಂದ ಹಿನ್ನೆಲೆಯಲ್ಲಿ ಸರ್ಕಾರದ ಅಧಿಕಾರಿಗಳು ಕಬಿನಿ ಜಲಾಶಯವನ್ನು ಆಯ್ಕೆ

■ 6ನೇ ಪುಟಕ್ಕೆ

ಸರ್ಕಾರ ಮತ್ತು ನಮ್ಮ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಮಟ್ಟದಲ್ಲಿ ಏರೋಡ್ರೋಮ್ ಕುರಿತಂತೆ ಚರ್ಚೆಯಾಗಿರಬಹುದು. ಪ್ರವಾಸೋದ್ಯಮ ಇಲಾಖೆ ಮತ್ತು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧಿಕಾರಿಗಳು ಈ ಕುರಿತಂತೆ ಚಿಂತನೆ ನಡೆಸಿರಬಹುದು. ಆದರೆ ಈವರೆಗೆ ನಮಗೆ ಯಾವುದೇ ಅಧಿಕೃತ ಮಾಹಿತಿ ಲಭ್ಯವಾಗಿಲ್ಲ. ಒಂದು ವೇಳೆ ಕಬಿನಿ ಹಿನ್ನೀರಲ್ಲಿ ಸೀ ಪ್ಲೇನ್ ಯೋಜನೆ ಅನುಷ್ಠಾನ ಮಾಡುವುದಾದರೆ ಪ್ರವಾಸೋದ್ಯಮ ಅಭಿವೃದ್ಧಿ ದೃಷ್ಟಿಯಿಂದ, ಸರ್ಕಾರದ ನಿರ್ದೇಶನದಂತೆ ನಾವು ಅದಕ್ಕೆ ಸಂಪೂರ್ಣ ಸಹಕಾರ ನೀಡಬೇಕಾಗುತ್ತದೆ.

- ಚಂದ್ರಶೇಖರ್
ಎಗ್ಸಿಕ್ಯೂಟೀವ್ ಇಂಜಿನಿಯರ್, ಕಬಿನಿ ಉಪವಿಭಾಗ




ಸಂಗ್ರಹ ಚಿತ್ರ

ಮತ್ತೆ ಯೂನಿಟ್‌ಗೆ 15 ರಿಂದ 20 ಪೈಸೆ ವಿದ್ಯುತ್ ದರ ಏರಿಕೆಗೆ ನಿರ್ಧಾರ

ಇತ್ತೀಚೆಗಿನ ದರ ಏರಿಕೆ ಕೆಪಿಟಿಸಿಎಲ್ ಸಿಬ್ಬಂದಿ ಪಿಂಚಣಿ, ಗ್ರ್ಯಾಚುಟಿಗೆ; ಈಗ ಮತ್ತೆ ಮಾಡುವುದು ನಿಗಮಗಳ ಮೂಲಸೌಕರ್ಯ, ನಷ್ಟ ಭರಿಸಲು!

ಬೆಂಗಳೂರು, ಮಾ.24(ಕೆಎಂಶಿ)– ಮುಸ್ಲಿಮರಿಗಾಗಿ ಮೀಸಲಾತಿ ಕಲ್ಪಿಸಲು ಸಂವಿಧಾನ ಬದಲಾವಣೆ ಹಾಗೂ ಹನಿಟ್ರ್ಯಾಪ್ ವಿಚಾರಗಳು ಭಾರಿ ಚರ್ಚೆಯಲ್ಲಿರುವ ನಡುವೆಯೇ ರಾಜ್ಯ ಸರ್ಕಾರ ಮತ್ತೆ ವಿದ್ಯುತ್ ದರ ಹೆಚ್ಚಳಕ್ಕೆ ಮುಂದಾಗಿದೆ.



ಪ್ರತಿ ಯೂನಿಟ್‌ಗೆ 15 ರಿಂದ 20 ಪೈಸೆ ಏರಿಕೆ ಮಾಡಿ ಒಂದೆರಡು ದಿನದಲ್ಲೇ ಆದೇಶ ಹೊರಬೀಳಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ವಿದ್ಯುತ್ ಪ್ರಸರಣ ಮತ್ತು ಸರಬರಾಜು ಕಂಪನಿಗಳ ಸಿಬ್ಬಂದಿಯ ಪಿಂಚಣಿ ಹಾಗೂ ಗ್ರ್ಯಾಚುಟಿ ಹಣವನ್ನು ವಿದ್ಯುತ್ ಬಳಕೆದಾರರಿಂದಲೇ ಭರಿಸಲು ಪ್ರತಿ ಯೂನಿಟ್‌ಗೆ 36 ಪೈಸೆ ಹೆಚ್ಚಳ ಮಾಡಿ ಈಗಾಗಲೇ ಆದೇಶ ಹೊರಡಿಸಿದೆ. ಹೆಚ್ಚಳ ದರ ಕೇವಲ ನಿವೃತ್ತ ನೌಕರರ ಹಿತಕ್ಕಾಗಿ, ಇದೀಗ ಹೆಚ್ಚಳ ಮಾಡುತ್ತಿರುವ ದರ ನಿಗಮಗಳ ಮೂಲ ಸೌಕರ್ಯ ಮತ್ತು ನಷ್ಟ ಭರಿಸಲು. ಪ್ರತಿ ಯೂನಿಟ್‌ಗೆ 70 ರಿಂದ 90 ಪೈಸೆ ಹೆಚ್ಚಳ ಮಾಡುವಂತೆ ವಿದ್ಯುತ್ ನಿಗಮಗಳು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಮನವಿ ಮಾಡಿದ್ದವು. ದಿನದಿಂದ ದಿನಕ್ಕೆ ವಿದ್ಯುತ್ ಬೇಡಿಕೆ ಹೆಚ್ಚಿದೆ. ಅದಕ್ಕನುಗುಣವಾಗಿ ಉತ್ಪಾದನೆ ಮತ್ತು ಪ್ರಸರಣಕ್ಕೆ ಒತ್ತು ಕೊಡಬೇಕಿದೆ ಹಾಗೂ ಮೂಲಸೌಕರ್ಯಗಳಿಗೂ ಆದ್ಯತೆ ನೀಡ ಬೇಕಿರುವುದರಿಂದ ನಮ್ಮ ಕಂಪನಿಗಳ ವಿದ್ಯುತ್ ದರ ಏರಿಕೆ ಮಾಡಲೇಬೇಕೆಂದು ಮನವಿ ಮಾಡಿದ್ದವು. ಕಂಪನಿಗಳ ಕೋರಿಕೆ ಮತ್ತು ಸಾರ್ವಜನಿಕರ ಅಹವಾಲು ಆಲಿಸಿದ ಆಯೋಗ, ಪ್ರತಿ ಯೂನಿಟ್‌ಗೆ 15 ರಿಂದ 20 ಪೈಸೆ ಹೆಚ್ಚಿಸಲು ತೀರ್ಮಾನಿಸಿದೆ ಎನ್ನಲಾಗಿದೆ.

ಮುಸ್ಲಿಂರ ಮೀಸಲಾತಿಗೆ ಸಂವಿಧಾನ ಬದಲಾವಣೆ; ಡಿಕೆಶಿ ಹೇಳಿಕೆ ವಿವಾದ

ಸಂಸತ್‌ನಲ್ಲಿ ಕೋಲಾಹಲ

- ಬಿಜೆಪಿ ಉಭಯ ಸದನಗಳಲ್ಲೂ ಆಕ್ರೋಶ, ಚರ್ಚೆಗೆ ಅವಕಾಶ ನೀಡಲು ಆಗ್ರಹ
- ಚಿದಂಬರಂ ತಕ್ಷಣ ಡಿಕೆಶಿಯಿಂದ ಮಾಹಿತಿ ಸಂಗ್ರಹ; ನಂತರ ನಾನು ಹಾಗೆ ಹೇಳಿಯೇ ಇಲ್ಲ ಎಂದ ಡಿಸಿಎಂ !


ಬೆಂಗಳೂರು, ಮಾ.24(ಕೆಎಂಶಿ)– ಮುಸ್ಲಿಂರಿಗೆ ಮೀಸಲಾತಿ ಕಲ್ಪಿಸಲು ಸಂವಿಧಾನ ಬದಲಾವಣೆ ಮಾಡುವುದಾಗಿ ಕರ್ನಾಟಕದ ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆದ ಡಿ.ಕೆ.ಶಿವಕುಮಾರ್ ಹೇಳಿಕೆ ಸಂಸತ್‌ನ ಉಭಯ ಸದನಗಳಲ್ಲಿ ಭಾರಿ ಚರ್ಚೆಗೆ ಎಡೆಮಾಡಿ ಸದನದ ಇಂದಿನ ಕಲಾಪ ನುಂಗಿ ಹಾಕಿತು.



ಡಿ.ಕೆ.ಶಿವಕುಮಾರ್

ಬೆಳಗ್ಗೆ ಕಲಾಪ ಆರಂಭವಾಗುತ್ತಿದ್ದಂತೆ ಆಡಳಿತಾರೂಢ ಬಿಜೆಪಿ ಸದಸ್ಯರು ಕರ್ನಾಟಕದಲ್ಲಿ ಮುಸ್ಲಿಮರಿಗೆ ಶೇಕಡ 4ರಷ್ಟು ಮೀಸಲಾತಿ ಕಲ್ಪಿಸುವುದಾಗಿ ಸಂವಿಧಾನದ ಹುದ್ದೆಯಲ್ಲಿರುವವರೇ ಹೇಳಿಕೆ ನೀಡಿದ್ದಾರೆ. ಈ ಬಗ್ಗೆ ಚರ್ಚೆ ಆಗಬೇಕು ಎಂದು ಪಟ್ಟು ಹಿಡಿದರು. ಈಗಾಗಲೇ ಕರ್ನಾಟಕ ಸರ್ಕಾರ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇಕಡ 4ರಷ್ಟು ಮೀಸಲಾತಿ ಕಲ್ಪಿಸಿದೆ. ಈ ಸಮುದಾಯಕ್ಕೆ ಅನುಕೂಲ ಮಾಡಿಕೊಡಲು ಸಂವಿಧಾನವನ್ನೇ ಬದಲಾವಣೆ ಮಾಡುವುದಾಗಿ ಹೇಳುತ್ತಿದ್ದಾರೆ. ಇವರಿಗೆ ಈ ಅಧಿಕಾರ ಯಾರು ಕೊಟ್ಟರು ಎಂದು ಪ್ರಶ್ನಿಸಿದರು. ಈ ಸಂದರ್ಭದಲ್ಲಿ ಆಡಳಿತ ಮತ್ತು ಪ್ರತಿಪಕ್ಷ

■ 6ನೇ ಪುಟಕ್ಕೆ



ಕಿರಣ್ ರಿಜಿಜು, ನಡ್ಡಾ ವಿರುದ್ಧ ಹಕ್ಕುಚ್ಯುತಿ ನೋಟಿಸ್

ನವದೆಹಲಿ: ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಹೇಳಿಕೆ ಬಗ್ಗೆ ಸದನದಲ್ಲಿ ಸುಳ್ಳು ಮಾಹಿತಿ ನೀಡುವ ಮೂಲಕ ಸದನದ ದಾರಿ ತಪ್ಪಿಸಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಸೋಮವಾರ ಕೇಂದ್ರ ಸಚಿವರಾದ ಕಿರಣ್ ರಿಜಿಜು ಮತ್ತು ಜೆಪಿ ನಡ್ಡಾ ಅವರ ವಿರುದ್ಧ ಹಕ್ಕುಚ್ಯುತಿ ನೋಟಿಸ್ ನೀಡಿದೆ. ಕಾಂಗ್ರೆಸ್ ರಾಜ್ಯಸಭಾ ಮುಖ್ಯ ಸಚೇತಕ ಜೈರಾಮ್ ರಮೇಶ್, ಇಂದು ಕೇಂದ್ರ ಸಚಿವರಾದ ಜೆಪಿ ನಡ್ಡಾ ಮತ್ತು ಕಿರಣ್ ರಿಜಿಜು ಅವರ ವಿರುದ್ಧ ನಿಯಮ 188 ರಡಿ

■ 6ನೇ ಪುಟಕ್ಕೆ



ಜೆಪಿ ನಡ್ಡಾ



ಕಿರಣ್ ರಿಜಿಜು

ರಾಜ್ಯದ ಎಲ್ಲಾ ಗರ್ಭಿಣಿಯರಿಗೂ ಸಾಮೂಹಿಕ ಸೀಮಂತ

ಬೆಳಗಾವಿ, ಮಾ.24– ರಾಜ್ಯದ ಎಲ್ಲ ಗರ್ಭಿಣಿಯರಿಗೂ 2026ರ ಮಾರ್ಚ್‌ನಿಂದ ಜಿಲ್ಲಾವಾರು ಸಾಮೂಹಿಕ ಸೀಮಂತ ಮಾಡುವ ಬಗ್ಗೆ ಸರ್ಕಾರ ಆದೇಶ ಹೊರಡಿಸಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.



ನಗರದಲ್ಲಿ ಸೋಮವಾರ ಆಯೋಜಿಸಿದ್ದ 3,000 ಮಹಿಳೆಯರಿಗೆ ಸಾಮೂಹಿಕ ಸೀಮಂತ ನೆರವೇರಿಸಿ, ಸೀಮಂತ ಭಾರತೀಯ ಸಂಸ್ಕೃತಿಯ ಭಾಗ. ಗರ್ಭಿಣಿ ಆರೋಗ್ಯವಂತರಾಗಿದ್ದರೆ ಆರೋಗ್ಯವಂತ ಮಕ್ಕಳು ಜನಿಸುತ್ತವೆ. ಆಗ ಆರೋಗ್ಯವಂತ ದೇಶ ನಿರ್ಮಾಣವಾಗುತ್ತದೆ.

ಸಂಪುಟ ಸಭೆಯಲ್ಲಿ ಚರ್ಚೆ ಬಳಿಕ ಹಾಲಿನ ದರ ಏರಿಕೆ ನಿರ್ಧಾರ

ಹಾಲು ಒಕ್ಕೂಟಗಳ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಿಎಂ ಸಿದ್ದರಾಮಯ್ಯ ಸಭೆ; 5ರೂ.ದರ ಏರಿಕೆ ಪ್ರಸ್ತಾಪ

ಬೆಂಗಳೂರು, ಮಾ. 24– ನಂದಿನಿ ಹಾಲಿನ ದರ ಏರಿಕೆ ಸಂಬಂಧ ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಮಹತ್ವದ ಸಭೆ ನಡೆಸಿದ್ದಾರೆ. ಪ್ರತಿ ಲೀಟರ್ ಹಾಲಿಗೆ 5 ರೂ. ದರ ಹೆಚ್ಚಿಸುವಂತೆ ಒಕ್ಕೂಟದ ಒತ್ತಾಯಕ್ಕೆ ಮಣಿಯದ ಸಿಎಂ, ಹಾಲು ಒಕ್ಕೂಟಗಳು ಇರುವುದು ರೈತರಿಗೆ ಅನುಕೂಲ ಮಾಡುವುದಕ್ಕೆ ಮಾತ್ರ, ಲಾಭ ಮಾಡುವುದಕ್ಕಲ್ಲ. ದರ ಏರಿಕೆ ಮಾಡಿದರೂ ನೇರವಾಗಿ ರೈತರಿಗೆ ತಲುಪಬೇಕು. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿದ ಬಳಿಕ ದರ ಹೆಚ್ಚಳದ ಬಗ್ಗೆ ತೀರ್ಮಾನ ಮಾಡುವುದಾಗಿ ಹೇಳಿದ್ದಾರೆ.



ಈ ಬಗ್ಗೆ ಟ್ವೀಟ್ ಮಾಡಿರುವ ಸಿಎಂ ಸಿದ್ದರಾಮಯ್ಯ, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳದ ಅಧ್ಯಕ್ಷರು ಮತ್ತು ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಭೆ ನಡೆಸಿ, ಒಕ್ಕೂಟದ ಬೇಡಿಕೆಗಳನ್ನು ಆಲಿಸಿ, ಹಾಲಿನ ಬೆಲೆಯೇರಿಕೆಯ ಸಂಬಂಧ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಹನಿಟ್ರ್ಯಾಪ್ ವಿವಾದ: ದೂರು ದಾಖಲಿಸಲು ರಾಜಣ್ಣ ಮೀನಾಮೇಷ!

ವರಿಷ್ಠರ ಭೇಟಿಗೆ ಸಚಿವರು, ಶಾಸಕರ ಚಿಂತನೆ

ಬೆಂಗಳೂರು: ರಾಜ್ಯದಲ್ಲಿ ಹನಿಟ್ರ್ಯಾಪ್ ಯತ್ನ ಪ್ರಕರಣವು ತೀವ್ರ ವಿವಾದಕ್ಕೆ ಕಾರಣವಾಗಿದ್ದು, ರಾಜ್ಯ ಕಾಂಗ್ರೆಸ್‌ನಲ್ಲಿನ ಪ್ರಭಾವಿ ನಾಯಕನ ಪಾತ್ರದ ಬಗ್ಗೆ ಸಚಿವರು ಮತ್ತು ಶಾಸಕರ ಗುಂಪು ಹೈಕಮಾಂಡ್ ಅನ್ನು ಭೇಟಿ ಮಾಡಲು ಯೋಜಿಸುತ್ತಿದೆ ಎನ್ನಲಾಗಿದೆ

ಸಹಕಾರ ಸಚಿವ ಕೆಎನ್ ರಾಜಣ್ಣ ಅವರನ್ನು ರಾಜಕೀಯವಾಗಿ ಮುಗಿಸಲು ಪ್ರಭಾವಿ ನಾಯಕರೊಬ್ಬರು ಹನಿಟ್ರ್ಯಾಪ್‌ನಲ್ಲಿ ಸಿಲುಕಿಸಲು ಪ್ರಯತ್ನಿಸಿದ್ದಾರೆ ಎಂದು ಆರೋಪಿಸಲಾಗಿದೆ. ಈ ಮಧ್ಯೆ, ಸೂಕ್ತ ಸಮಯದಲ್ಲಿ ಗೃಹ ಸಚಿವರಿಗೆ ದೂರು ನೀಡುವುದಾಗಿ ಸಚಿವ ರಾಜಣ್ಣ ಸೋಮವಾರ ಹೇಳಿದ್ದಾರೆ. ಇದೀಗ ದೂರು ದಾಖಲಿಸಲು ವಿಳಂಬ ಮಾಡುತ್ತಿರುವುದು ಹಲವು ಪ್ರಶ್ನೆಗಳನ್ನು ಹುಟ್ಟುಹಾಕುತ್ತಿದೆ.

ಗುರುವಾರ ವಿಧಾನಸಭೆ ಅಧಿವೇಶನದಲ್ಲಿ ಸಹಕಾರ ಸಚಿವ ಕೆಎನ್ ರಾಜಣ್ಣ, ಪಕ್ಷಾತೀತವಾಗಿ ಕನಿಷ್ಠ 48 ಶಾಸಕರನ್ನು ಹನಿಟ್ರ್ಯಾಪ್ ಮಾಡಲಾಗಿದೆ. ಈ ಜಾಲ ದೇಶಾದ್ಯಂತ ಹರಡಿದೆ. ಅನೇಕ ಕೇಂದ್ರ ಸಚಿವರು ಸಹ ಇದರಲ್ಲಿ ಸಿಲುಕಿದ್ದಾರೆ. ಪ್ರತಿಸ್ಪರ್ಧಿಗಳು ತಮ್ಮನ್ನು ಹನಿಟ್ರ್ಯಾಪ್ ಮಾಡಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದ್ದರು.

ಇದಕ್ಕೆ ಪ್ರತಿಕ್ರಿಯೆಯಾಗಿ, ಗೃಹ ಸಚಿವ ಜಿ.ಪರಮೇಶ್ವರ ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗುವುದು ಎಂದು ಘೋಷಿಸಿದರು. ಆದಾಗ್ಯೂ, ಸಚಿವ ರಾಜಣ್ಣ ಇನ್ನೂ ದೂರು ದಾಖಲಿಸಿಲ್ಲ. ಈ ಆರೋಪಗಳ ಬಗ್ಗೆ ನ್ಯಾಯಾಂಗ ಅಥವಾ ಸಿಬಿಐ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಪ್ರತಿಪಕ್ಷಗಳು ವಿಧಾನಸಭೆಯಲ್ಲಿ ಗದ್ದಲ ಎಬ್ಬಿಸಿದವು. ಇದು ವಿಧಾನಸಭೆಯಲ್ಲಿ ಪ್ರತಿಭಟನೆಗಳಿಗೆ ಕಾರಣವಾಯಿತು. ಅಂತಿಮವಾಗಿ 18 ಬಿಜೆಪಿ ಶಾಸಕರನ್ನು ಆರು ತಿಂಗಳ ಕಾಲ ಅವಧಿಗೆ ಅಮಾನತು ಮಾಡಲಾಗಿದೆ. ಹನಿಟ್ರ್ಯಾಪ್ ಯತ್ನದ ಹಿಂದೆ ಉಪ ಮುಖ್ಯಮಂತ್ರಿ ಮತ್ತು ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷ ಡಿಕೆ ಶಿವಕುಮಾರ್ ಕೈವಾಡವಿದೆ ಎಂದು ಬಿಜೆಪಿ ಶಾಸಕ ಎನ್.ಮುನಿರತ್ನ

■ 6ನೇ ಪುಟಕ್ಕೆ

ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ ಹನಿಟ್ರ್ಯಾಪ್ ಪ್ರಕರಣ

ಇಂದು ವಿಚಾರಣೆ ಸಾಧ್ಯತೆ

ನವದೆಹಲಿ: ಕರ್ನಾಟಕ ಸರ್ಕಾರದ ಸಚಿವರ ಮೇಲೆ ನಡೆದಿದೆ ಎನ್ನಲಾದ ಹನಿಟ್ರ್ಯಾಪಿಂಗ್ ಪ್ರಕರಣ ಕುರಿತು ತನಿಖೆಗೆ ಆಗ್ರಹಿಸಿ ಸುಪ್ರೀಂಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ. ಪ್ರಕರಣದ ವಿಚಾರಣೆಯನ್ನು ಕೂಡಲೇ ಕೈಗೆತ್ತಿಕೊಳ್ಳಬೇಕೆಂದು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗೆ ಮನವಿ ಸಲ್ಲಿಸಿದ್ದಾರೆ. ಪ್ರಕರಣದಲ್ಲಿ ನ್ಯಾಯಮೂರ್ತಿ ಹೆಸರಿರುವುದನ್ನು ಅರ್ಜಿದಾರರು ಪತ್ತೆಹಚ್ಚಿದ್ದು, ಪ್ರಕರಣ ಕೈಗೆತ್ತಿಕೊಳ್ಳಲು ಒಪ್ಪಿಕೊಂಡಿದ್ದಾರೆ. ರಾಜ್ಯದಲ್ಲಿ ಹಿರಿಯ ಸಚಿವರು, ಶಾಸಕರು, ರಾಜಕೀಯ ಮುಖಂಡರು ಮತ್ತು ನ್ಯಾಯ ಮೂರ್ತಿಗಳು ಸೇರಿದಂತೆ 48 ಜನರನ್ನು ಗುರಿಯಾಗಿಟ್ಟುಕೊಂಡು

■ 6ನೇ ಪುಟಕ್ಕೆ

ಮೈಸೂರು ಮಹಾನಗರ ಪಾಲಿಕೆಗೆ ಶೀಘ್ರ ಚುನಾವಣೆ ಸಂಭವ

ಪಾಲಿಕೆ ಆಯುಕ್ತರೊಂದಿಗೆ ಚುನಾವಣಾ ಆಯುಕ್ತ ಸಂಗ್ರೇಶಿ ಚರ್ಚೆ; ಮಾಹಿತಿ ಸಂಗ್ರಹ

ಮೈಸೂರು, ಮಾ. 24(ಆರ್‌ಕೆ)– ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್. ಸಂಗ್ರೇಶಿ ಅವರು ಇಂದು ಮೈಸೂರು ಮಹಾನಗರ ಪಾಲಿಕೆ ಕಚೇರಿಗೆ ಭೇಟಿ ನೀಡಿದ್ದರು. ಇದರೊಂದಿಗೆ ಮೈಸೂರು ಪಾಲಿಕೆಗೆ ಶೀಘ್ರ ಚುನಾವಣೆ ನಡೆಸುವ ನಿರೀಕ್ಷೆ ಗರಿಗೆದರಿದೆ.



ಜಿ.ಎಸ್. ಸಂಗ್ರೇಶಿ

ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅವರು ಚುನಾವಣಾ ಆಯುಕ್ತರನ್ನು ಆತ್ಮೀಯವಾಗಿ ಬರಮಾಡಿಕೊಂಡರು. ನಂತರ ಆಯುಕ್ತರ ಕಚೇರಿಯಲ್ಲಿ ಕೆಲಕಾಲ ಚರ್ಚಿಸಿದ ಸಂಗ್ರೇಶಿ, ಮೈಸೂರು ಮಹಾನಗರ ಪಾಲಿಕೆ ಚುನಾವಣೆ ಸಂಬಂಧ ಕೆಲ ಮಾಹಿತಿ ಪಡೆದುಕೊಂಡರು. ಈ ಹಿಂದೆ ಚುನಾವಣೆ ನಡೆದ ದಿನಾಂಕ, ಅವಧಿ ಮುಕ್ತಾಯದ ದಿನಾಂಕ, 65 ವಾರ್ಡ್‌ಗಳಲ್ಲಿ ಇದ್ದ ಮೀಸಲಾತಿ, ಮೇಯರ್, ಉಪಮೇಯರ್‌ಗಳಿಗೆ 5 ವರ್ಷದಲ್ಲಿ ಲಭ್ಯವಾಗಿದ್ದ ಮೀಸಲಾತಿ, ವಾರ್ಡ್‌ವಾರು ಮತದಾರರ ಸಂಖ್ಯೆ, ಕಾಲ ಕಾಲಕ್ಕೆ ಮತದಾರರ ಪಟ್ಟಿ ಪರಿಷ್ಕರಣೆ, ಇತ್ತೀಚೆಗೆ ನಡೆದ ಪರಿಷ್ಕರಣೆಯ ಅಂತಿಮ ಪಟ್ಟಿ ಇತ್ಯಾದಿ ಮಾಹಿತಿಗಳನ್ನು ಸಂಗ್ರೇಶಿ, ಪಾಲಿಕೆ

■ 6ನೇ ಪುಟಕ್ಕೆ

ಮೈಸೂರಿನಲ್ಲಿ ಅರ್ಥಪೂರ್ಣ ವಿಶ್ವ ಕ್ಷಯರೋಗ ದಿನಾಚರಣೆ

ವರ್ಷಾಂತ್ಯಕ್ಕೆ ಮೈಸೂರು ಜಿಲ್ಲೆ ಕ್ಷಯ ಮುಕ್ತ

- ಜಾಡ್ಯ ನಿರ್ಮೂಲನೆಗೆ ಪಣ ತೊಟ್ಟ ಆರೋಗ್ಯ ಇಲಾಖೆ
- ಒಬ್ಬ ಕ್ಷಯರೋಗಿ 45 ಜನರಿಗೆ ಆ ರೋಗ ಹರಡುತ್ತಾನೆ
- ಆಟಂಬಾಂಬ್‌ನಂತೆ ವ್ಯಾಪಕವಾಗಿ ಹರಡುವ ಸೋಂಕು
- ರೋಗ ಇಳಿಕೆಯಲ್ಲಿ ಮೈಸೂರು 32 ರಿಂದ 13ನೇ ಸ್ಥಾನಕ್ಕೆ



ಮೈಸೂರು ಅರಮನೆಯ ಮುಂಭಾಗದಿಂದ ಕ್ಷಯ ರೋಗ ಜಾಗೃತಿ ಜಾಥಕ್ಕೆ ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ ಚಾಲನೆ ನೀಡಿದರು.

ಮೈಸೂರು, ಮಾ.24(ಬಿಎಲ್‌ಯು)– ಪರಿಣಾಮಕಾರಿ ಔಷಧಿ ಹಾಗೂ ಅರಿವಿನ ಮದ್ದಿನ ಮೂಲಕ 2025 ಕ್ಕೆ ಮೈಸೂರು ಜಿಲ್ಲೆಯನ್ನು ಕ್ಷಯರೋಗ ಮುಕ್ತ ಮಾಡುವ ಗುರಿ ಹೊಂದಲಾಗಿದೆ ಎಂದು ಆರೋಗ್ಯ ಇಲಾಖೆಯ ವಿಭಾಗೀಯ ಸಹ ನಿರ್ದೇಶಕ ಡಾ.ಕೆ.ಎಚ್. ಪ್ರಸಾದ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಜೆ.ಕೆ.ಮೈದಾನದ ಅಮೃತ ಮಹೋತ್ಸವ ಭವನದಲ್ಲಿ ಇಂದು ವಿಶ್ವ ಕ್ಷಯರೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ನಂತರ ಟಿಬಿ ಅಥವಾ ಕ್ಷಯ ರೋಗ ದೊಡ್ಡ ಸವಾಲಾಗಿತ್ತು. ಈ ರೋಗ ಗುಣಪಡಿಸಲು ಸಾಧ್ಯವಾಗದೆ ಬಹಳಷ್ಟು ಸಾವುಗಳಾಯಿತು ಎಂದು ಬೇಸರ ವ್ಯಕ್ತಪಡಿಸಿದರು. ಕ್ಷಯರೋಗ ಭಾರತ ಮಾತ್ರವಲ್ಲದೆ ಜಾಗತಿಕವಾಗಿ ಪ್ರತಿಯೊಂದು ರಾಷ್ಟ್ರವನ್ನು ಕಾಡುತ್ತಿರುವ ರೋಗವಾಗಿದೆ. ಆದರೆ ಈಗ ಸೂಕ್ತ ಚಿಕಿತ್ಸೆ ದೊರೆಯುವುದರಿಂದ ಸಾವುಗಳ ಸಂಖ್ಯೆ ಬಹಳ ಕಡಿಮೆಯಾಗಿದೆ. ಈ ಮೂಲಕ ಕ್ಷಯರೋಗವನ್ನು ನಿರ್ಮೂಲನೆ ಮಾಡುವ ಪರಿಣಾಮಕಾರಿ ಆಂದೋಲನಗಳು ನಡೆಯುತ್ತಿವೆ ಎಂದು ಡಾ.ಪ್ರಸಾದ್ ತಿಳಿಸಿದರು.

ಕ್ಷಯರೋಗ ಆಟಂಬಾಂಬ್‌ನಂತೆ ಕ್ಷಿಪ್ರ ವ್ಯಾಪಕವಾಗಿ ಹರಡುತ್ತದೆ. ಕ್ಷಯ ರೋಗ ವ್ಯಕ್ತಿಯೊಬ್ಬ ಕನಿಷ್ಠ 45 ಜನರಿಗೆ ಈ ರೋಗ ಹರಡುತ್ತಾನೆ. ಈ ಹಿನ್ನೆಲೆ ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗದರ್ಶನದಲ್ಲಿ ಕ್ಷಯರೋಗ ನಿರ್ಮೂಲನೆ ಮಾಡುವ ಕಾರ್ಯಗಳು ನಡೆಯುತ್ತಿವೆ. ಈ ವರ್ಷಾಂತ್ಯದಲ್ಲಿ ಮೈಸೂರನ್ನು ಕ್ಷಯರೋಗ ಮುಕ್ತ ಜಿಲ್ಲೆಯನ್ನಾಗಿ ಮಾಡುವ ಗುರಿ ಹೊಂದಲಾಗಿದೆ ಎಂದರು. ಆದರೆ, ಈ ಕಾರ್ಯಕ್ಕೆ ಸಮುದಾಯದ ಸಹಭಾಗಿತ್ವ ಬಹಳ ಮುಖ್ಯವಾಗಿದೆ. ಹಾಗಾದಾಗ ಮಾತ್ರ ಗುರಿ ತಲುಪಲು ಸಾಧ್ಯವಾಗುತ್ತದೆ.

■ 6ನೇ ಪುಟಕ್ಕೆ

ಕ್ಷಯಮುಕ್ತ ಗ್ರಾಮಗಳಿಗೆ ಪ್ರಶಸ್ತಿ

ಕ್ಷಯರೋಗ ಮುಕ್ತವಾಗಿರುವ ಭೀಮನಹಳ್ಳಿ, ಹೆಬ್ಬಲಗುಪ್ಪೆ, ಬಾಚೀಗೌಡನಹಳ್ಳಿ, ಹೊಮ್ಮರಗಳ್ಳಿ, ಕಂಚಮಳ್ಳಿ, ಇಟ್ನ, ಕೊತ್ತೇಗಾಲ, ಮುಳ್ಳೂರು, ಸಾಗರೆ, ಹೆಗ್ಗನೂರು, ಬೋಳನಹಳ್ಳಿ, ಗಾಗೇನಹಳ್ಳಿ, ಹಳೇಬೀಡು, ಕರ್ಣಕುಪ್ಪೆ, ಮೋದೂರು, ಮುಳ್ಳೂರು, ತಟ್ಟೆಕೆರೆ, ಉದ್ದೂರು ಕಾವಲ್, ಚಂದೇಗಾಲ, ಅಡಗೂರು, ಗಂಧನಹಳ್ಳಿ, ಹರದನಹಳ್ಳಿ, ತಿಪ್ಪೂರು, ಹಗ್ಗಿನವಾಳು, ಕಂಪಲಾಪುರ, ಕೋಮಲಾಪುರ, ಮುತ್ತೂರು, ಪುನ್ನಾಡಹಳ್ಳಿ, ಗರ್ಗೇಶ್ವರಿ, ಕಲಿಯೂರು, ಕುಪ್ಯ, ಮಾದಾಪುರ, ಮುತ್ತಲವಾಡಿ, ಸೋಸಲೆ, ತುರುಗನೂರು, ವಾಟಾಳು ಗ್ರಾಮ ಪಂಚಾಯಿತಿಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜಿಪಂ, ತಾಪಂ ಕಚೇರಿಗಳಲ್ಲಿ ಜಲಸೇವಾ ನಿಯಂತ್ರಣ ಕೊಠಡಿ



ಮೈಸೂರು, ಮಾ. 24(ಆರ್‌ಕೆ)– ಬೇಸಿಗೆ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿರುವುದರಿಂದ ಕುಡಿಯುವ ನೀರಿನ ಸಮಸ್ಯೆ ಕುರಿತು ದೂರು ದಾಖಲಿಸಲು ಮೈಸೂರು ಜಿಲ್ಲಾ ಪಂಚಾಯ್ತಿ ಹಾಗೂ ಎಲ್ಲಾ ತಾಲೂಕು ಪಂಚಾಯ್ತಿ ಕಚೇರಿಗಳಲ್ಲಿ 24x7 ಜಲ ಸೇವಾ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿದೆ. ಜಿಲ್ಲಾ ಪಂಚಾಯಿತಿ ಕಚೇರಿ, ಮೈಸೂರು: 0821 –2526355, ತಾಲೂಕು ಪಂಚಾಯಿತಿ, ಮೈಸೂರು: 0821–2414433, ತಾಲೂಕು ಪಂಚಾಯಿತಿ, ನಂಜನಗೂಡು: 08221–295523, ತಾಲೂಕು ಪಂಚಾಯಿತಿ, ಟಿ.ನರಸೀಪುರ: 08227–261668, ತಾಲೂಕು ಪಂಚಾಯಿತಿ, ಸರಗೂರು: 9945687 302, ತಾಲೂಕು ಪಂಚಾಯಿತಿ, ಹೆಚ್.ಡಿ.ಕೋಟೆ: 08228–296770, ತಾಲೂಕು ಪಂಚಾಯಿತಿ, ಕೆಆರ್.ನಗರ: 08223–262824, ತಾಲೂಕು ಪಂಚಾಯಿತಿ, ಹುಣಸೂರು: 08222–251029, ತಾಲೂಕು ಪಂಚಾಯಿತಿ, ಪಿರಿಯಾಪಟ್ಟಣ: 08223–274154, ತಾಲೂಕು ಪಂಚಾಯಿತಿ, ಸಾಲಿಗ್ರಾಮ: 9535890729.

ಮಹನೀಯರಿಗೆ ಪುಷ್ಪನಮನ



ಪಡುವಾರಹಳ್ಳಿಯಲ್ಲಿ ಅಪ್ರತಿಮ ದೇಶಭಕ್ತರಾದ ಭಗತ್‌ಸಿಂಗ್, ರಾಜಗುರು, ಸುಖ್‌ದೇವ್ ಅವರ ಬಲಿದಾನ ದಿನದ ಅಂಗವಾಗಿ ಮಹನೀಯರಿಗೆ ಪುಷ್ಪನಮನ ಸಲ್ಲಿಸಲಾಯಿತು. ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪಾಲಿಕೆ ಮಾಜಿ ಸದಸ್ಯ ಎಂ.ಚಿಕ್ಕವೆಂಕಟು, ಸಿ.ಡಿ.ಕುಮಾರ್, ಸಿ.ಸಂತೋಷ್, ರಾಮಚಂದ್ರಣ್ಣ, ಕೆ.ಕೃಷ್ಣ, ಸುರೇಂದ್ರ, ಬಾಬಣ್ಣ ಮತ್ತಿತರರಿದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಸಮಾಜಮುಖಿ ಪ್ರಶಸ್ತಿಗೆ ಆಯ್ಕೆ

ಮೈಸೂರು, ಮಾ.24– ಸ್ಪಂದನಾ ಸಾಂಸ್ಕೃತಿಕ ಪರಿಷತ್ ವತಿಯಿಂದ ನೀಡಲಾಗುವ 2ನೇ ವರ್ಷದ ರಾಜ್ಯ ಮಟ್ಟದ 'ನಾಲ್ವಡಿ ಕೃಷ್ಣರಾಜ ಒಡೆಯರ್ ಸಮಾಜಮುಖಿ ಪ್ರಶಸ್ತಿ'ಗೆ ನಾಡಿನ ವಿವಿಧ ಕ್ಷೇತ್ರದ ಆರು ಮಂದಿ ಗಣ್ಯ ಸಾಧಕರು ಆಯ್ಕೆಯಾಗಿದ್ದಾರೆ.

ಗಡಿ ಜಿಲ್ಲೆ ಚಾಮರಾಜನಗರದ ಕನ್ನಡ ಪರ ಹೋರಾಟಗಾರ ಹಾಗೂ ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ರಾಜ್ಯಾಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ (ಕನ್ನಡ ಹೋರಾಟ ಮತ್ತು ಸಂಘಟನಾ), ಮೈಸೂರಿನ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ (ಸಾಹಿತ್ಯ ಮತ್ತು ಪತ್ರಿಕಾ), ಮಂಡ್ಯದ ಮಹಿಳಾ ಮತ್ತು ಮಕ್ಕಳ ಧ್ವನಿ ಸಂಸ್ಥೆಯ ಅಧ್ಯಕ್ಷೆ ರಜನಿರಾಜ್ (ಮಹಿಳಾ ಮತ್ತು ಮಕ್ಕಳ ಸೇವಾ) ಮೈಸೂರಿನ ದಕ್ಷ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ಪಿ. ಜಯಚಂದ್ರರಾಜು(ಉನ್ನತ ಶಿಕ್ಷಣ), ಬೆಂಗಳೂರಿನ ಹಿರಿಯ ನ್ಯಾಯವಾದಿ ಎಲ್.ಪುರುಷೋತ್ತಮ (ನ್ಯಾಯಾಂಗ ಮತ್ತು ಸಾಹಿತ್ಯ), ಮೈಸೂರಿನ ಕಾವೇರಿ ಕನ್ನಿಕಾ ಶಾಲೆಯ ಸಂಸ್ಥಾಪಕ ಅಧ್ಯಕ್ಷೆ ಕೊಡಗಿನ ಮೂಲದ ಎಂ.ಸಿ. ಚೋಂದಮ್ಮ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಏ.6ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿರುವ ಸಮಾರಂಭದಲ್ಲಿ ಸಾಧಕರಿಗೆ ಕವಯತ್ರಿ ಡಾ.ಲತಾ ರಾಜಶೇಖರ್ ಅವರು 'ನಾಲ್ವಡಿ ಕೃಷ್ಣರಾಜ ಒಡೆಯರ್ ಸಮಾಜ ಮುಖಿ ಪ್ರಶಸ್ತಿ' ಪ್ರದಾನ ಮಾಡುವರು ಎಂದು ಸತೀಶ್ ಜವರೇಗೌಡ ತಿಳಿಸಿದ್ದಾರೆ.

ಸಂಸದ ಯದುವೀರ್ ಹುಟ್ಟುಹಬ್ಬ



ಮೈಸೂರಿನ ಬಿಜೆಪಿ ಚಾಮುಂಡೇಶ್ವರಿ ನಗರ ಮಂಡಲದ ವತಿಯಿಂದ ರಾಮಕೃಷ್ಣ ನಗರದ ಹೆಚ್ ಬ್ಲಾಕ್‌ನ ಆರೋಗ್ಯನಗರದ ಉದ್ಯಾನವನದಲ್ಲಿ ಗಿಡ ನೆಡುವ ಮೂಲಕ ಸಂಸದ ಯದುವೀರ್ ಅವರ ಹುಟ್ಟುಹಬ್ಬ ಆಚರಿಸಲಾಯಿತು. ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಚಾಮುಂಡೇಶ್ವರಿ ನಗರ ಮಂಡಲ ಅಧ್ಯಕ್ಷ ರಾಕೇಶ್ ಭಟ್, ಉಪಾಧ್ಯಕ್ಷ ಬಿ.ಸಿ.ಶಶಿಕಾಂತ್, ಶಿವಕುಮಾರ್, ಕಾರ್ಯದರ್ಶಿ ಶ್ರೀನಿವಾಸ್ ಪ್ರಸಾದ್, ಸೋಮಣ್ಣ, ಮಹಿಳಾ ಮೋರ್ಚಾ ನಗರ ಕಾರ್ಯದರ್ಶಿ ವಿಜಯ ಮಂಜುನಾಥ್, ಎಸ್‌ಟಿ ಮೋರ್ಚಾ ನಗರ ಉಪಾಧ್ಯಕ್ಷ ತ್ಯಾಗರಾಜ್, ಮಂಡಲದ ರೈತ ಮೋರ್ಚಾ ಅಧ್ಯಕ್ಷ ಚಂದ್ರಶೇಖರಸ್ವಾಮಿ, ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ಯುವ ಮೋರ್ಚಾ ಉಪಾಧ್ಯಕ್ಷ ರಾಘವೇಂದ್ರ, ಸಂಜಯ್, ಮಂಡಲ ಪ್ರಧಾನ ಕಾರ್ಯದರ್ಶಿ ಪುಟ್ಟಮ್ಮಣ್ಣಿ, ಮಂಜುಳಾ, ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಂಗೇಶ್ ಮತ್ತಿತರರಿದ್ದರು.



ಮೈಸೂರು ಬೋಗಾದಿಯ ರವಿಶಂಕರ್ ಲೇಔಟ್‌ನಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಜನ್ಮದಿನ ಆಚರಿಸಲಾಯಿತು. ರಾಘವೇಂದ್ರ, ಕಿರಣ್, ಚೆಲುವರಾಜ, ಮಂಜುನಾಥ್, ಶ್ರೀಕಾಂತ್, ಎಲೆಕ್ಟ್ರಿಕಲ್ ರವಿ, ಬಸವರಾಜು, ರಾಜಣ್ಣ ಹಾಗೂ ಇನ್ನಿತರರು ಈ ವೇಳೆ ಹಾಜರಿದ್ದರು.

ಆಹಾರದ ಕಿಟ್ ವಿತರಣೆ



ಮೈಸೂರಿನ ಏಕಲವ್ಯನಗರದಲ್ಲಿ ವಾಸವಿರುವ ಅಂಗವಿಕಲರಿಗೆ ದಸಂಸ ವತಿಯಿಂದ ಆಹಾರದ ಕಿಟ್ ವಿತರಿಸಲಾಯಿತು. ಈ ವೇಳೆ ದಸಂಸ ಜಿಲ್ಲಾ ಸಂಚಾಲಕ ನಿಂಗರಾಜ್ ಮಲ್ಲಾಡಿ, ಚಾಮುಂಡೇಶ್ವರಿ ಬಡಾವಣೆಯ ಮುಖಂಡರಾದ ಸಿಂಗೇಗೌಡ, ನಿವೃತ್ತ ಪೊಲೀಸ್ ಅಧಿಕಾರಿ ಸಣ್ಣಪ್ಪ, ಪರಮೇಶ್, ಏಕಲವ್ಯನಗರ ಗ್ರಾಪಂ ಸದಸ್ಯೆ ತೇಜಸ್ವಿನಿ ಶ್ರೀಧರ್, ಮುಖಂಡರಾದ ನಂದನ್‌ಕುಮಾರ್, ನವೀನ, ಕಿರಣ, ಸತೀಶ, ರಮೇಶ, ಪುತ್ರ, ಅಂಗವಿಕಲರ ಸಂಘದ ಅಧ್ಯಕ್ಷ ಶಿವಶೆಟ್ಟಿ, ತಿಮ್ಮರಾಯಪ್ಪ, ಕುಮಾರ, ಹರೀಶ, ಮಹಿಳೆಯರಾದ ರಂಗಮ್ಮ, ನಾಗರತ್ನಮ್ಮ, ಜಮುನಾ ಅಂಬಿಕಾ, ಕಾವ್ಯ ಮತ್ತಿತರರಿದ್ದರು.

ಕಾಮಗಾರಿಯಲ್ಲಿ ಮುಸ್ಲಿಂರಿಗೆ ಶೇಕಡ 4ರಷ್ಟು ಮೀಸಲಾತಿ

ಸರ್ಕಾರದ ನಿರ್ಧಾರ ಖಂಡಿಸಿ ಮೈಸೂರಲ್ಲಿ ಬಿಜೆಪಿ ಪ್ರತಿಭಟನೆ

ಮೈಸೂರು, ಮಾ.24(ಬಿಎಲ್‌ಯು)– ಗುತ್ತಿಗೆಯಲ್ಲಿ ಮುಸ್ಲಿಂರಿಗೆ ಮೀಸಲಾತಿ ನೀಡುವ ಮೂಲಕ ರಾಜ್ಯ ಕಾಂಗ್ರೆಸ್ ಸರ್ಕಾರ ತುಷ್ಟೀಕರಣ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಮೈಸೂರು ನ್ಯಾಯಾಲಯದ ಮುಂಭಾಗದ ಗಾಂಧಿ ಪುತ್ಥಳಿ ಮುಂದೆ ಸೋಮವಾರ ಪ್ರತಿಭಟನೆ ನಡೆಸಿದರು.

'ಮುಸ್ಲಿಮರಿಗೆ ಬಹುಮಾನ, ಹಿಂದೂಗಳಿಗೆ ಪಂಗನಾಮ', 'ಹಿಂದೂಗಳಿಗೆ ಆತ್ಮಹತ್ಯೆ ಭಾಗ್ಯ, ಮುಸ್ಲಿಂರಿಗೆ ಶಾದಿ ಭಾಗ್ಯ', 'ಬಡವರಿಗೆ ಬೆಲೆ ಏರಿಕೆ ಘೋಷಣೆ, ಮುಸ್ಲಿಂರಿಗೆ ಯೋಜನೆಗಳ ಘೋಷಣೆ', 'ಹನಿಟ್ರ್ಯಾಪ್ ಗ್ಯಾರಂಟಿ, ಓಲೈಕೆ ಪಿತಾಮಹ ಸಿದ್ದರಾಮಯ್ಯಗೆ ಧಿಕ್ಕಾರ' ಘೋಷಣಾ ಫಲಕ ಹಿಡಿದಿದ್ದ ಬಿಜೆಪಿ ಕಾರ್ಯಕರ್ತರು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಸರ್ಕಾರದ ಕಾಮಗಾರಿಗಳಲ್ಲಿ ಮುಸ್ಲಿಂರಿಗೆ ಶೇಕಡ 4ರಷ್ಟು ಮೀಸಲಾತಿ ನೀಡುವುದು, ವಿದ್ಯಾಭ್ಯಾಸಕ್ಕಾಗಿ ಹೊರದೇಶಕ್ಕೆ ಹೋಗುವ ಮುಸ್ಲಿಂ ವಿದ್ಯಾರ್ಥಿಗಳಿಗೆ ನೀಡುವ ಸಹಾಯಧನವನ್ನು 20 ಲಕ್ಷದಿಂದ 30 ಲಕ್ಷಕ್ಕೆ ಹೆಚ್ಚಳ ಮಾಡಿರುವುದು ಸೇರಿದಂತೆ ಹಲವು ರೀತಿಯ ಯೋಜನೆಗಳನ್ನು ಕಾಂಗ್ರೆಸ್ ಸರ್ಕಾರ ನೀಡುತ್ತಿದೆ ಎಂದು ಆರೋಪಿಸಿದರು.

ಡಾ.ಅಂಬೇಡ್ಕರ್ ನೀಡಿರುವ ಸಂವಿಧಾನದಲ್ಲಿ ಧರ್ಮ ಆಧಾರಿತ ಮೀಸಲಾತಿ ನೀಡಲು ಅವಕಾಶ ವಿಲ್ಲ. ಸುಪ್ರೀಂಕೋರ್ಟ್ ಸೇರಿದಂತೆ ಹಲವು ಕೋರ್ಟ್ ಈ ಬಗ್ಗೆ ತೀರ್ಪು ನೀಡಿವೆ ಎಂದರು.

ಸಂವಿಧಾನ ವಿರೋಧಿ ನಡೆ ಅನುಸರಿಸುತ್ತಿರುವ ಕಾಂಗ್ರೆಸ್ ಸರ್ಕಾರ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ದ್ರೋಹ ಎಸಗಿದೆ ಎಂದು ದೂರಿದರು. ಇದಲ್ಲದೆ ಪರಿಶಿಷ್ಟ ಸಮುದಾಯದ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿಕೊಳ್ಳಲಾಗಿದೆ. ಮೂರು ವರ್ಷದಲ್ಲಿ 39 ಸಾವಿರ ಕೋಟಿ ಹಣ ಅನ್ಯ ಉದ್ದೇಶಕ್ಕೆ ಬಳಕೆಯಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಕಾಮಗಾರಿಯಲ್ಲಿ ಮುಸ್ಲಿಂರಿಗೆ ಶೇಕಡ 4ರಷ್ಟು ಮೀಸಲಾತಿ ಕಲ್ಪಿಸುವ ರಾಜ್ಯ ಕಾಂಗ್ರೆಸ್ ಸರ್ಕಾರದ ನಿರ್ಧಾರ ಖಂಡಿಸಿ ಬಿಜೆಪಿ ಕಾರ್ಯಕರ್ತರು ಮೈಸೂರಿನಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ರೈತರು ತಮ್ಮ ಟ್ರಾನ್ಸ್‌ಫಾರ್ಮರ್ ಅಳವಡಿಸಿಕೊಳ್ಳುವ ವೆಚ್ಚವನ್ನು 2 ಲಕ್ಷಕ್ಕೆ ಹೆಚ್ಚಳ ಮಾಡಲಾಗಿದೆ. ಇದಲ್ಲದೆ ಹಾಲಿನ ದರ ಏರಿಕೆ, ವಿದ್ಯುತ್ ದರ ಏರಿಕೆ, ಬಸ್ ಪ್ರಯಾಣ ದರ ಏರಿಕೆ, ಸ್ಟ್ಯಾಂಪ್ ಶುಲ್ಕ ಏರಿಕೆ, ಮದ್ಯದ ದರ ಏರಿಕೆ ಹೀಗೆ ಹಲವು ವಸ್ತುಗಳ ಬೆಲೆ ಏರಿಕೆ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರ ಆರ್ಥಿಕವಾಗಿ ಈಗಾಗಲೇ ತತ್ತರಿಸಿರುವ ಜನರ ಗಾಯದ ಮೇಲೆ ಬರೆ ಎಳೆಯುತ್ತಿದೆ ಎಂದು ಆಪಾದಿಸಿದರು.

ಯಾವುದೇ ತಪ್ಪು ಮಾಡದ 18 ಶಾಸಕರನ್ನು ಅಮಾನತು ಮಾಡಲಾಗಿದೆ. ಈ ಮೂಲಕ ಶಾಸಕರನ್ನು ಆಯ್ಕೆ ಮಾಡಿದ ಮತದಾರರಿಗೆ ಅಗೌರವ ತೋರಿದ್ದಾರೆ ಎಂದರು. ಸರ್ಕಾರ ಈಗಲಾದರೂ ತನ್ನ ತಪ್ಪು ತಿದ್ದಿಕೊಂಡು ಜನಪರ ಆಡಳಿತ ನೀಡಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಹರ್ಷವರ್ಧನ್, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ರಾಜ್ಯ ಬಿಜೆಪಿ ವಕ್ತಾರ ಎಂ.ಜಿ.ಮಹೇಶ್, ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಇಬ್ಬರು ಮಹಿಳೆಯರ ಕೊಂದವನಿಗೆ ಜೀವಾವಧಿ ಶಿಕ್ಷೆ

ಮೈಸೂರು, ಮಾ. 24(ಆರ್‌ಕೆ)– ಮಚ್ಚಿನಿಂದ ಕೊಚ್ಚಿ ಮಹಿಳೆಯರಿಬ್ಬರನ್ನು ಹತ್ಯೆಗೈದಿದ್ದ ಹಂತಕನಿಗೆ ಮೈಸೂರು ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿದೆ. ನಂಜನಗೂಡು ತಾಲೂಕು, ಬಿಳುಗಲಿ ಗ್ರಾಮದ ರಂಗಸ್ವಾಮಿ ಅಲಿಯಾಸ್ ಕರಿಯ ಶಿಕ್ಷೆಗೆ ಗುರಿಯಾದ ಹಂತಕನಾಗಿದ್ದು, ಈತ ತನ್ನ ಪತ್ನಿಯೊಂದಿಗೆ ಸಂಪರ್ಕವಿರಿಸಿಕೊಂಡಿದ್ದ ಪಕ್ಕದ ಮನೆಯ ರಾಜೇಶನ ಜೊತೆ ಗಲಾಟೆ ಮಾಡಲು ತೆರಳಿದ್ದಾಗ ಅವಾಚ್ಯ ಶಬ್ದಗಳಿಂದ ನಿಂದಿಸಿ ಅಪಮಾನ ಮಾಡಿದರೆಂದು ಕೋಪಗೊಂಡ ರಂಗಸ್ವಾಮಿಯು ರಾಜೇಶನ ತಾಯಿ ಮತ್ತು ಸಹೋದರಿ ಮಣಿ ಅವರನ್ನು 2022ರ ಜೂನ್ 15ರಂದು ಮಧ್ಯಾಹ್ನ 1.30 ಗಂಟೆ ವೇಳೆಯಲ್ಲಿ ಮಚ್ಚಿನಿಂದ ಹಲ್ಲೆ ಮಾಡಿ ಹತ್ಯೆಗೈದಿದ್ದ. ಅಲ್ಲದೇ, ಸಾಕ್ಷ್ಯ ನಾಶ ಮಾಡಲು ಮೃತದೇಹಗಳನ್ನು ಅಡ್ಡಹಳ್ಳದ ನೀರಿಗೆ ತಳ್ಳಿದ್ದ ಹಾಗೂ ಮೃತರ ದೇಹದಿಂದ ಚಿನ್ನಾಭರಣ ಬಿಚ್ಚಿಕೊಂಡು ತಿ.ನರಸೀಪುರದ ಮಹೇಂದ್ರ ಕುಮಾರ್ ಜೈನ್ ಎಂಬುವರ ಅಂಗಡಿಯಲ್ಲಿ ಗಿರವಿ ಇಟ್ಟಿದ್ದ. ಪ್ರಕರಣ ದಾಖಲಿಸಿಕೊಂಡಿದ್ದ ನಂಜನಗೂಡು ವೃತ್ತದ ಅಂದಿನ ಇನ್‌ಸ್ಪೆಕ್ಟರ್ ಲಕ್ಷ್ಮೀಕಾಂತ ತಳವಾರ್, ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ ಏಳನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಎಂ.ರಮೇಶ್ ಅವರು, ಹಂತಕನಿಗೆ ಜೀವಾವಧಿ ಶಿಕ್ಷೆ ಮತ್ತು 15 ಸಾವಿರ ರೂ. ದಂಡ ವಿಧಿಸಿ ಸೋಮವಾರ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಕೆ.ನಾಗರಾಜ ವಾದ ಮಂಡಿಸಿದ್ದರು.

ಸಂತ ಫಿಲೋಮಿನಾ ಕಾಲೇಜಿನ 11ನೇ ಘಟಿಕೋತ್ಸವ



ಮೈಸೂರು ಸಂತ ಫಿಲೋಮಿನಾ ಕಾಲೇಜಿನ 11ನೇ ಘಟಿಕೋತ್ಸವ ಸಮಾರಂಭವು ಗಣ್ಯರ ಸಮ್ಮುಖದಲ್ಲಿ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಿತು.

ಮೈಸೂರು,ಮಾ.24–ಮೈಸೂರು ಸಂತ ಫಿಲೋಮಿನಾ ಕಾಲೇಜಿನ 11ನೇ ಘಟಿಕೋತ್ಸವ ಸಮಾರಂಭ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಿತು.

ಚಂಡೀಗಢ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಮನ್‌ಪ್ರೀತ್ ಸಿಂಗ್ ಮನ್ನಾ ಘಟಿಕೋತ್ಸವದ ಭಾಷಣ ಮಾಡಿದರು. ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮುಖ್ಯ ಅತಿಥಿಗಳಾಗಿದ್ದರು. ಮೈಸೂರು ಧರ್ಮಕ್ಷೇತ್ರದ ಅಪೋಸ್ಟೋಲಿಕ್ ಅಡ್ಮಿನಿಸ್ಟ್ರೇಟರ್ ಡಾ.ಬರ್ನಾರ್ಡ್ ಮೊರಾಸ್ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಮನ್‌ಪ್ರೀತ್ ಸಿಂಗ್ ಮನ್ನಾ ತಮ್ಮ ಸ್ಫೂರ್ತಿದಾಯಕ ಭಾಷಣದಲ್ಲಿ ವೃತ್ತಿಯ ಮಹತ್ವ, ಮೂಲಭೂತ ಮೌಲ್ಯಗಳನ್ನು ಒತ್ತಿ ಹೇಳಿದರು. ನೀವು ಸಹಪಾಠಿಗಳನ್ನು ಮತ್ತು ಶಿಕ್ಷಕರನ್ನು ಮರೆತರೂ, ಇಲ್ಲಿ ಕಲಿತ ಮೌಲ್ಯಗಳು ಯಾವತ್ತಿಗೂ ನಿಮ್ಮ ಜೊತೆಗೆ ಇರುತ್ತವೆ ಎಂದು ಉಲ್ಲೇಖಿಸಿದರು.

ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಮಾತನಾಡಿ, ವಿದ್ಯಾರ್ಥಿಗಳ ಸಾಧನೆಗೆ ಶ್ಲಾಘನೆ ವ್ಯಕ್ತಪಡಿಸಿದರು. ಉನ್ನತ ಶಿಕ್ಷಣ ಜ್ಞಾನವನ್ನು ಪ್ರಜ್ಞೆಯಾಗಿ ಪರಿವರ್ತಿಸುವ ಸಾಧನವಾಗಿದೆ ಎಂದರು. ಅಪೋಸ್ಟೋಲಿಕ್ ಅಡ್ಮಿನಿಸ್ಟ್ರೇಟರ್ ಡಾ.ಬರ್ನಾರ್ಡ್ ಮೊರಾಸ್ ಅಧ್ಯಕ್ಷತೆ ವಹಿಸಿದ್ದರು.

ಉದ್ಯೋಗಾಧಾರಿತ ಕೌಶಲ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು,ಮಾ.24– ಕೇಂದ್ರ ಸರ್ಕಾರದ 2024–25ನೇ ಸಾಲಿನ ಆಯವ್ಯಯದಲ್ಲಿ The prime minister internship scheme in top companies, ಯೋಜನೆಯಡಿಯಲ್ಲಿ ಉನ್ನತ ಮಟ್ಟದ 500 ಕಂಪನಿಗಳ ಮೂಲಕ ಯುವಕ ಯುವತಿಯರಿಗೆ ಪಡೆಯುವ ಅವಕಾಶವನ್ನು ಕಲ್ಪಿಸಲಾಗಿದೆ.

ಈ ಯೋಜನೆಯಡಿ ಮೈಸೂರು ಜಿಲ್ಲೆಗೆ 335 ಅಭ್ಯರ್ಥಿಗಳ ಗುರಿ ನಿಗದಿಪಡಿಸಿರುತ್ತಾರೆ. ಅವಧಿ 12 ತಿಂಗಳು ಆಗಿರುತ್ತದೆ. 21 ರಿಂದ 24 ವಯಸ್ಸಿನ ಯುವಕ, ಯುವತಿಯರು ಅಂದರೆ SSLC, PUC, ITI, DIPLOMA ಹಾಗೂ ತಾಂತ್ರಿಕ ಹಾಗೂ ತಾಂತ್ರಿಕೇತರ ಎಲ್ಲಾ ಪದವಿಧರರು ಮಾರ್ಚ್ 31 ರೊಳಗೆ PM INTERNSHIP https://pminternship.mca.gov.in/login/ ಮೂಲಕ ನೋಂದಾಯಿಸಿಕೊಂಡು ಯೋಜನೆಯ ಸದುಪಯೋಗವನ್ನು ಪಡೆಯ ಬಹುದು ಎಂದು ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.03.2025 ಮಂಗಳವಾರ, ಮಳೆ ನಕ್ಷತ್ರ: ಉತ್ತರಭಾದ್ರಾ 17.03.2025 ರಿಂದ 30.03.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಶ್ರವಣ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಒಬೆಸಿಟಿ (ತೂಕ ಇಳಿಸುವಿಕೆ) ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9 ರಿಂದ ಮೂಲವ್ಯಾಧಿ/ಪೈಲ್ಸ್ ರೋಗ ಚಿಕಿತ್ಸಾ ಶಿಬಿರ, ವಸಂತ ವೇಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್–ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಶ್ರೀ ಕಾವೇರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಆಸ್ಪತ್ರೆ ರಕ್ತನಿಧಿ ಘಟಕ :** ರಕ್ತದಾನ ಶಿಬಿರ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಕಾಲೇಜು ಅಭಿವೃದ್ಧಿ ಮಂಡಳಿ, ಆಂತರಿಕ ಗುಣಮಟ್ಟ ಖಾತರಿ ಘಟಕ:** ಎನ್‌ಐಆರ್‌ಎಫ್ ರ್‍ಯಾಂಕಿಂಗ್ : ಎ ಟೂಲ್ ಫಾರ್ ಸೆಲ್ಫ್ ಅಸೆಸ್‌ಮೆಂಟ್ ಅಂಡ್ ಕ್ವಾಲಿಟಿ ಇಂಪ್ರೂವ್‌ಮೆಂಟ್ ಕುರಿತು ಕಾರ್ಯಾಗಾರ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉದ್ಘಾಟನೆ : ಕಾಲೇಜು ಶಿಕ್ಷಣ ವಿಭಾಗದ ಪ್ರಾದೇಶಿಕ ಜಂಟಿ ನಿರ್ದೇಶಕ ಡಾ.ಬಿ. ಚಂದ್ರಶೇಖರ್, ಪ್ರಾಸ್ತಾವಿಕ ನುಡಿ : ಹಿರಿಯ ಪ್ರಾಧ್ಯಾಪಕ ಡಾ. ಎನ್.ಎಸ್. ಹರಿನಾರಾಯಣ, ಉಪಸ್ಥಿತರು : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎನ್.ಕೆ. ಸವಿತಾ, ಪ್ರೊ.ಎನ್. ನಾಗರಾಜ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಕಲಾಸೌರಭ :** ವಿದುಷಿ ಡಾ. ಸುಕನ್ಯಾ ಪ್ರಭಾಕರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಅಧ್ಯಯನ ಶಿಬಿರ, ಸ್ಥಳ: ಕಲಾಸೌರಭ, ಇ ಅಂಡ್ ಎಫ್ ಬ್ಲಾಕ್, ರಾಮಕೃಷ್ಣನಗರ, ಸಂಜೆ 4ಕ್ಕೆ.

■ **ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಟ್ರಸ್ಟ್, ಕನ್ನಡ ಸಾಹಿತ್ಯ ಕಲಾಕೂಟ:** ಕೈಲಾಸ ಮತ್ತು ಮಾನಸ ಸರೋವರ ದರ್ಶನ, ಶ್ರವ್ಯ ದೃಶ್ಯ ಪ್ರದರ್ಶನ ಕಾರ್ಯಕ್ರಮ, ಪರಿಕಲ್ಪನೆ ಮತ್ತು ಪ್ರಸ್ತುತಿ: ಭಾರತ ಸರ್ಕಾರದ ವಿಶ್ರಾಂತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷ ಡಾ. ಎಚ್.ವಿ. ನಾಗರಾಜರಾವ್, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಉಪಸ್ಥಿತರು : ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಎಸ್.ರಾಮಪ್ರಸಾದ್, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಕಿರಣ್ ಸಿಡ್ಲೇಹಳ್ಳಿ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.

■ **ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್ :** ಸೇವ್ ಎ ಚೈಲ್ಡ್ ಪ್ರಾಜೆಕ್ಟ್ ಎಕ್ಸ್‌ಪ್ಯಾನ್ಷನ್ ಪ್ರೋಗ್ರಾಮ್, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಸಿಎಫ್‌ಟಿಆರ್‌ಐ ನಿರ್ದೇಶಕ ಶ್ರೀಮತಿ ಶ್ರೀದೇವಿ ಅನ್ನಪೂರ್ಣ ಸಿಂಗ್, ಸ್ಥಳ: ರೋಟರಿ ಮೈಸೂರು ವೆಸ್ಟ್ ಸ್ಕೂಲ್, ಕಾಮಾಕ್ಷಿ ಆಸ್ಪತ್ರೆ ಹತ್ತಿರ, ಸರಸ್ವತಿಪುರಂ, ಸಂಜೆ 6.30ಕ್ಕೆ.

ದೇವಲಾಪುರದಲ್ಲಿಂದು, ಮೈಸೂರು ತಾಲೂಕು

■ **ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ:** ಶ್ರೀ ಮಠದ ಸುವರ್ಣ ಮಹೋತ್ಸವ ಮತ್ತು ಗುರು ಮಲ್ಲೇಶ್ವರ ಪ್ರಾರ್ಥನಾ ಮಂದಿರ ಉದ್ಘಾಟನೆ, ಬಸವ ಪುತ್ಥಳಿ ಅನಾವರಣ ಹಾಗೂ ಲಿಂಗೈಕ್ಯ ಶಿವಪ್ಪಸ್ವಾಮಿಗಳ 33ನೇ ವರ್ಷದ ಪುಣ್ಯಾರಾಧನೆ, ರಾತ್ರಿ 8 ಗಂಟೆಗೆ ಶ್ರೀಮಠದಿಂದ ಮಂಗಳವಾದ್ಯ, ವೀರಗಾಸೆ, ಭಜನೆ, ಹಾಗೂ ವಿವಿಧ ಕಲಾತಂಡಗಳೊಂದಿಗೆ ಶ್ರೀಗಳ ಪುಷ್ಪಾಂದೋಳಿಕೋತ್ಸವ, ಸಾನ್ನಿಧ್ಯ: ಮಲ್ಲನಮೂಲೆ ಗುರು ಕಂಬಳೀಶ್ವರ ಮಠದ ಇಮ್ಮಡಿ ಸಿದ್ದಲಿಂಗಸ್ವಾಮಿ, ಬೇಬಿ ಬೆಟ್ಟದ ಶ್ರೀರಾಮ ಯೋಗೀಶ್ವರ ಮಠದ ಶಿವಬಸವಸ್ವಾಮಿ, ಬರಡನಪುರ ಮಹಾಂತೇಶ್ವರ ಮಠದ ಚನ್ನಬಸವಸ್ವಾಮಿ, ರಾತ್ರಿ 9.30ಕ್ಕೆ ಗುರು ಮಲ್ಲೇಶ್ವರ ಭಜನಾ ತಂಡದಿಂದ ಭಜನೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಟಿ.ಎಸ್.ಸ್ನೇಹಾ, ಹಂಸಿನಿ ಎಸ್.ಕುಮಾರ್, ಎನ್.ಹೇಮಾ, ವ್ಯಾಖ್ಯಾನ–ಡಾ.ಜಿ.ಆರ್.ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ.ಆರ್.ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 –ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕಾರ್ತಿಕ್. ಎಂ.ಎಸ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿಪಥ –ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು: ಶ್ರುತಿ. ಜಿ.ರಾವ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಕಥಾಕಾಲಕ್ಷೇಪ–ಪಂಡರಿ ಮಹಾತ್ಮೆ, ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸಮಗ್ರ ಸಾವಯವ ಕೃಷಿಯ ಪ್ರಾಮುಖ್ಯತೆ ಕುರಿತು ಹನೂರು ತಾಲೂಕು ಚಿಂಚಳ್ಳಿ ಗ್ರಾಮದ ಪಿ.ದಯಾನಂದ ಅವ ರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 8.00 ಸಂಸತ್ ಸಮೀಕ್ಷಾ, 8.15 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

ಹಾಸನ ಮಿತ್ರ

ರಾಜ್ಯದ ಅಭಿವೃದ್ಧಿಗೆ ಮೈಸೂರು ಅರಸರ ಕೊಡುಗೆ ಅಪಾರ

ಸಹಾಯಕ ಪ್ರಾಧ್ಯಾಪಕ ಪುರುಷೋತ್ತಮ್ ಅಭಿಮತ



ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಪುರುಷೋತ್ತಮ್ ಉದ್ಘಾಟಿಸಿದರು.

ಹಾಸನ, ಮಾ.24– ಮೈಸೂರು ಸಂಸ್ಥಾನದಲ್ಲಿ ಆಳ್ವಿಕೆ ಮಾಡಿದ ರಾಜರು ಹಾಗೂ ಕಮಿಷನರ್‌ಗಳು ರಾಜ್ಯಕ್ಕೆ ಆಪಾರ ಕೊಡುಗೆ ನೀಡಿದ್ದಾರೆ ಎಂದು ಎಂ.ಜಿ.ರಸ್ತೆ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಎಚ್.ವಿ.ಪುರುಷೋತ್ತಮ್ ಹೇಳಿದರು.

ನಗರದ ಆರ್.ಸಿ. ರಸ್ತೆಯ ಗಂಧದ ಕೋಠಿ ಆವರಣದ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದಿಂದ ಸೋಮವಾರ ಹಮ್ಮಿಕೊಂಡಿದ್ದ 'ಮೈಸೂರು ಸಂಸ್ಥಾನದ ಅಭಿವೃದ್ಧಿಯಲ್ಲಿ ಕಮಿಷನರ್ ಆಳ್ವಿಕೆ' ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮೊದಲಿನಿಂದಲೂ ಮೈಸೂರು ಸಂಸ್ಥಾನದ ಅಭಿವೃದ್ಧಿಯಲ್ಲಿ ಕಮಿಷನರ್ ಆಳ್ವಿಕೆ ಮತ್ತು ಪ್ರಾಮಾಣಿಕತೆ ಪ್ರಮುಖವಾದ ಪಾತ್ರ ವಹಿಸುತ್ತದೆ. ಈ ಅವಧಿಯಲ್ಲಿ ರೈತವಾರಿ ಪದ್ಧತಿ, ಸಹಾಯಕ ಸೈನ್ಯ ಪದ್ಧತಿ, ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಗಳ ಬಗ್ಗೆ ಮೈಸೂರು ಸಂಸ್ಥಾನ ಮತ್ತು ಕಮಿಷನರ್ ಪಾತ್ರ ಪ್ರಚಲಿತವಾದುದು ಎಂದರು.

ಮೈಸೂರು ಸಂಸ್ಥಾನದ ಅವಧಿಯಲ್ಲಿ ಕಮೀಷನರ್ ಆಗಿ ಸೇವೆ ಸಲ್ಲಿಸಿದ ಪ್ರತಿಯೊಬ್ಬರೂ ಒಂದಿಲ್ಲೊಂದು ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಕಾನೂನು–ಸುವ್ಯವಸ್ಥೆ, ನ್ಯಾಯಾಲಯಗಳ ಸ್ಥಾಪನೆ, ಶಿಕ್ಷಣ ಕ್ರಾಂತಿ ಸೇರಿದಂತೆ ಅನೇಕ ಕಾರ್ಯ ಮಾಡಿದ್ದಾರೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಿ.ಕೆ.ಮಂಜಯ್ಯ ಮಾತನಾಡಿ, ವಿದ್ಯಾರ್ಥಿಗಳು ಸಂಸ್ಕೃತಿ, ಸಾಹಿತ್ಯದ ಬಗ್ಗೆ ಅಪಾರ ಗೌರವ ವಹಿಸುವುದರ ಜೊತೆಗೆ ಇತಿಹಾಸವನ್ನು ಆಳವಾಗಿ ಓದಬೇಕು. ಹಲವಾರು ವಿಚಾರಗಳನ್ನು ತಿಳಿದುಕೊಳ್ಳುವುದರ ಜೊತೆಗೆ ಮೈಸೂರಿನ ಸಂಸ್ಥಾನದ ಕಲಾಕೃತಿ ಮತ್ತು ವಾಸ್ತುಶಿಲ್ಪದ ಬಗ್ಗೆ ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು ಎಂದರು. ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಸಿ.ಎಲ್. ಶಿವಕುಮಾರ್, ಐ.ಕ್ಯೂ.ಎ.ಸಿ. ಸಂಚಾಲಕ ಜಿ.ಆರ್.ಮೋಹನ್‌ಕುಮಾರ್, ಉಪನ್ಯಾಸಕ ತಿಮ್ಮಶೆಟ್ಟಿ ಇತರರಿದ್ದರು.

ಬೂವನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಜೆಡಿಎಸ್ ಮೇಲುಗೈ



ಹಾಸನ, ಮಾ.24– ನಗರದ ಹೊರವಲಯದ ಬೂವನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿಗರು 6 ಹಾಗೂ ಬಿಜೆಪಿ ಬೆಂಬಲಿತರು 5 ಸ್ಥಾನಗಳಲ್ಲಿ ಜಯ ಗಳಿಸಿದ್ದು, ಜೆಡಿಎಸ್ ಮತ್ತೊಮ್ಮೆ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದೆ.

ಸಾಲಗಾರರ ಕ್ಷೇತ್ರದ ಒಟ್ಟು 11 ಸ್ಥಾನಗಳ ಪೈಕಿ, 5 ಸಾಮಾನ್ಯ, 2 ಮಹಿಳಾ, ಪರಿಶಿಷ್ಟ ಜಾತಿ ಮತ್ತು ಪಂಗಡ ತಲಾ 1, ಹಿಂದುಳಿದ ವರ್ಗ ಎ ಮತ್ತು ಬಿ ತಲಾ 1 ಹಾಗೂ ಸಾಲಗಾರರಲ್ಲದ ಕ್ಷೇತ್ರದ 1 ಸ್ಥಾನ ಸೇರಿ ಒಟ್ಟು 12 ಸ್ಥಾನಗಳಿದ್ದು, ಪರಿಶಿಷ್ಟ ವರ್ಗದ 1 ಸ್ಥಾನಕ್ಕೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ 11 ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಡೆಯಿತು.

ಸಾಲಗಾರರ ಕ್ಷೇತ್ರದಿಂದ ಗಣೇಶ್ ಬಿ.ಕೆ. (386), ಬಿ.ಜೆ.ರವಿಕುಮಾರ್ (384), ಬಿ.ಎನ್.ದುರ್ಗಾಪ್ರಸಾದ್ (367), ಚರಣ್ ಬಿ.ಪಿ.(348), ಸೋಮೇಶ್ ಬಿ.ಡಿ. (347), ಇಂದ್ರಮ್ಮ (379), ವಿಜಯಲಕ್ಷ್ಮಿ (321), ನಾಗರಾಜು (299), ಎಚ್.ಕೆ.ಶಿವಸ್ವಾಮಿ, ಬಿ.ಡಿ. ಕರಿಯಯ್ಯ (345) ಆಯ್ಕೆಯಾದರು. ಸಾಲಗಾರರಲ್ಲದ 1 ಸ್ಥಾನಕ್ಕೆ ಬಿ.ಆರ್. ಬೊಮ್ಮೇಗೌಡ 1 ಮತದ ಅಂತರದಲ್ಲಿ ಜಯ ಸಾಧಿಸಿದರು. ಚುನಾವಣೆಯಲ್ಲಿ ಬೂವನಹಳ್ಳಿ, ಸಂಕೇನಹಳ್ಳಿ, ಬಿ.ಟಿ. ಕೊಪ್ಪಲು, ಕಾಟೀಹಳ್ಳಿ, ಕಾಟೀಹಳ್ಳಿ ಕೊಪ್ಪಲು, ಸತ್ಯಮಂಗಲ, ವರಲಿ ಕೊಪ್ಪಲು, ಗೇಕರವಳ್ಳಿ, ಕೆಂಕಟ್ಟಹಳ್ಳಿ, ಲಕ್ಷ್ಮಿಸಾಗರ, ಗೌರಿಕೊಪ್ಪಲು ಕ್ಷೇತ್ರದ ಮತದಾರರು ಹಕ್ಕು ಚಲಾಯಿಸಿದರು.

ಕಾರ್ಯಕರ್ತರ ಜಟಾಪಟಿ: ಜೆಡಿಎಸ್ ಬೆಂಬಲಿತ ವ್ಯಕ್ತಿಯೊಬ್ಬರು ಚುನಾವಣೆಯಲ್ಲಿ ನಕಲಿ ಮತದಾನ ಮಾಡಿದ್ದಾರೆ ಎಂದು ಬಿಜೆಪಿ ಬೆಂಬಲಿಗರು ಗಲಾಟೆ ಆರಂಭಿಸಿದರು. ಈ ವೇಳೆ ಕೂಗಾಟ ನಡೆದು ಪರಿಸ್ಥಿತಿ ಕೈ ಕೈ ಮಿಲಾಯಿಸುವ ಹಂತಕ್ಕೆ ಹೋಗಿತ್ತು. ಎರಡೂ ಪಕ್ಷಗಳ ಕಾರ್ಯಕರ್ತರನ್ನು ಪೊಲೀಸರು ಚದುರಿಸುವ ಮೂಲಕ ಗಲಾಟೆ ತಹಬದಿಗೆ ತಂದರು.

ಹೆಣ್ಣು ಮಕ್ಕಳ ಬಗ್ಗೆ ತಾತ್ಸಾರ ಸಲ್ಲದು: ಶಾಸಕ ಸ್ವರೂಪ್ ಪ್ರಕಾಶ್



ಹಾಸನ, ಮಾ.24– ಇಂದು ಕೌಟುಂಬಿಕ ಜೀವನ ಹಾಗೂ ನಾನಾ ಕ್ಷೇತ್ರದಲ್ಲಿ ಮಹಿಳೆಯರು ಉನ್ನತ ಸ್ಥಾನ ಅಲಂಕರಿಸಿದ್ದಾರೆ. ಹೆಣ್ಣು ಮಕ್ಕಳ ಬಗ್ಗೆ ಯಾರೂ ತಾತ್ಸಾರ ಮಾಡಬಾರದು ಎಂದು ಶಾಸಕ ಸ್ವರೂಪ್ ಪ್ರಕಾಶ್ ಹೇಳಿದರು.

ತಾಲೂಕಿನ ತೇಜೂರು ಗ್ರಾಮ ಪಂಚಾಯಿತಿ ಆವರಣದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಆಯೋಜಿಸಿದ್ದ ಮಕ್ಕಳ ಗ್ರಾಮಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಆಧುನಿಕ ಕಾಲದಲ್ಲಿ ಭೂಮಿ ಮೇಲೆ ಮಾತ್ರವಲ್ಲದೇ ಅಂತರಿಕ್ಷದಲ್ಲೂ ಮಹಿಳೆ ತನ್ನ ಛಾಪು ಮೂಡಿಸಿರುವುದು ಶ್ಲಾಘನೀಯ. ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಗು ಜನಿಸಿದ ಮರುಕ್ಷಣವೇ ಬೀದಿಯಲ್ಲಿ ಎಸೆಯುವ ಮನಸ್ಥಿತಿ ಜೀವಂತವಾಗಿದೆ. ಇದು ಬದಲಾಗಬೇಕು ಎಂದರು.

ಕಲ್ಪನಾ ಚಾವ್ಲಾ, ಸುನೀತಾ ವಿಲಿಯಮ್ಸ್ ಅವರಂತಹ ಮಹಾನ್ ಸಾಧಕಿಯರು ಮಾಡಿರುವ ಸಾಧನೆ ಅಗಾಧವಾಗಿದೆ. ಅವರ ಜೀವನ ಎಲ್ಲರಿಗೂ ಸ್ಫೂರ್ತಿ ಆಗಬೇಕು ಎಂದ ಅವರು, ಹಾಸನ ಜಿಲ್ಲೆಯಲ್ಲಿ ಕೂಡ ಜಿಲ್ಲಾಧಿಕಾರಿ, ಹೆಚ್ಚುವರಿ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಉನ್ನತ ಹುದ್ದೆಗಳಲ್ಲಿ ಮಹಿಳೆಯರೇ ಇದ್ದು, ಒಳ್ಳೆ ರೀತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದು ಮಹಿಳೆಯ ದಿಟ್ಟತನಕ್ಕೆ ಹಿಡಿದ ಕನ್ನಡಿಯಾಗಿದೆ ಎಂದರು. ತಾಪಂ ಇಓ ಗಿರೀಶ್, ಪಿಡಿಓ ಶಿವಾನಂದ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ರೂಪಾ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಶಿವಣ್ಣ, ಗ್ರಾಮದ ಮುಖಂಡರಾದ ಸ್ವಾಮಿ, ಮಂಜಣ್ಣ, ಸಂತೋಷ್, ರಘು, ಅಪ್ಪಣ್ಣ, ಪ್ರದೀಪ್, ಮಧು, ಅರುಣ್, ಇತರರು ಉಪಸ್ಥಿತರಿದ್ದರು.

ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇ.4 ಮೀಸಲಾತಿ ವಿಚಾರ

ಧರ್ಮಾಧಾರಿತ ಮೀಸಲಾತಿಗೆ ಜೆಡಿಎಸ್ ವಿರೋಧವಿದೆ

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರತಿಕ್ರಿಯೆ

ಬೆಂಗಳೂರು, ಮಾ.24(ಕೆಎಂಶಿ)– ಗುತ್ತಿಗೆ ಕಾಮಗಾರಿಗಳಲ್ಲಿ ಮುಸ್ಲಿಮರಿಗೆ ಶೇಕಡ 4ರಷ್ಟು ಮೀಸಲಾತಿ ನೀಡಿರುವುದರ ವಿರುದ್ಧದ ಬಿಜೆಪಿ–ಜೆಡಿಎಸ್ ಹೋರಾಟದಲ್ಲಿ ಹೊಂದಾಣಿಕೆ ಇಲ್ಲ ಎಂಬ ಆರೋಪ ಸತ್ಯಕ್ಕೆ ದೂರವಾದ ಸಂಗತಿ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಪ್ರತಿಕ್ರಿಯಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಕೆಲವು ಮಾಧ್ಯಮಗಳಲ್ಲಿ ಈ ಕುರಿತು ಬಿತ್ತರವಾದ ವರದಿಗಳು ಸತ್ಯಕ್ಕೆ ದೂರವಾದುದು. ವಿಧಾನಮಂಡಲದ ಅಧಿವೇಶನ ಆರಂಭಕ್ಕೆ ಮೊದಲೇ ಬೆಂಗಳೂರಿನಲ್ಲಿ ನಡೆದ ಎನ್‌ಡಿಎ ಸಮನ್ವಯ ಸಮಿತಿ ಸಭೆಯಲ್ಲಿ ಎಲ್ಲಾ ವಿಚಾರಗಳನ್ನೂ ಸಮಗ್ರವಾಗಿ ಚರ್ಚಿಸಲಾಗಿದೆ.



ರಾಜ್ಯ ಸರ್ಕಾರದ ವಿರುದ್ಧದ ಹೋರಾಟ ರೂಪುರೇಷೆ ರೂಪಿಸಲಾಗಿತ್ತು. ಸಭೆಯಲ್ಲಿ ತಾವೂ ಭಾಗವಹಿಸಿದ್ದಾಗಿ ತಿಳಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಕೇವಲ ಚುನಾವಣಾ ಸ್ವಾರ್ಥ ಹಾಗೂ ವೋಟ್ ಬ್ಯಾಂಕ್ ರಾಜಕೀಯಕ್ಕಾಗಿ ಸಾಮಾಜಿಕ ನ್ಯಾಯದ ಆದರ್ಶ ಪರಿಕಲ್ಪನೆಯಾದ ಮೀಸಲಾತಿ ವ್ಯವಸ್ಥೆಯನ್ನು ಹಾಳು ಮಾಡುತ್ತಿದೆ. ಮೀಸಲಾತಿಯನ್ನೇ ಓಲೈಕೆ ಅಸ್ತ್ರವನ್ನಾಗಿ ಮಾಡಿಕೊಂಡು ರಾಜ್ಯದ ಜನತೆಯ ದಿಕ್ಕು ತಪ್ಪಿಸುತ್ತಿದೆ. ರಾಷ್ಟ್ರದ ಉದ್ದಗಲಕ್ಕೂ ಕಾಂಗ್ರೆಸ್ ಮೀಸಲಾತಿ ವಿಷಯದಲ್ಲಿ ಅರಾಜಕತೆ ಸೃಷ್ಟಿಸುತ್ತಿದೆ. ಜೆಡಿಎಸ್–ಬಿಜೆಪಿ ಈಗಾಗಲೇ ಒಟ್ಟಾಗಿ ಅನೇಕ ಜನಪರ ಹೋರಾಟಗಳಲ್ಲಿ ಭಾಗಿಯಾಗಿವೆ, ಮುಂದೆಯೂ ಹೋರಾಡಲಿವೆ, ಈ ಬಗ್ಗೆ ರಾಜೀ ಪ್ರಶ್ನೆಯೇ ಇಲ್ಲ. ಶೈಕ್ಷಣಿಕ, ಆರ್ಥಿಕ, ಸಾಮಾಜಿಕವಾಗಿ ದುರ್ಬಲವಾಗಿರುವ ಎಲ್ಲಾ ಸಮುದಾಯಗಳಿಗೆ ಸಮಾನ ಅವಕಾಶ, ಸೌಲಭ್ಯಗಳು ಸಿಗಬೇಕು, ಒಂದು ನಿರ್ದಿಷ್ಟ ಸಮುದಾಯದ ತುಷ್ಟೀಕರಣ, ಬಹುಸಮುದಾಯಗಳ ತುಚ್ಛೀಕರಣ ನ್ಯಾಯಸಮ್ಮತವಲ್ಲ, ಇದು ಸಂವಿಧಾನಕ್ಕೆ ಎಸಗುವ ಅಪಚಾರ. ಮೀಸಲಾತಿ ಧರ್ಮಾಧಾರಿತ ಆಗಿರಬಾರದು, ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ನಿಂತಿರಬೇಕು ಎನ್ನುವುದು ಜೆಡಿಎಸ್‌ನ ಅಚಲ ನಿಲುವಾಗಿದೆ ಎಂದಿದ್ದಾರೆ.

ರಾಜ್ಯದಲ್ಲಿ ಈ ವರ್ಷ 50 'ಅಕ್ಕ ಕೆಫೆ' ಸ್ಥಾಪನೆ

ಬೆಂಗಳೂರು: ರಾಜ್ಯದಲ್ಲಿ ಈ ವರ್ಷ 50 'ಅಕ್ಕ ಕೆಫೆ' ಸ್ಥಾಪನೆ ಮಾಡಲಾಗುತ್ತದೆ ಎಂದು ಸಚಿವ ಶರಣ ಪ್ರಕಾಶ್ ಪಾಟೀಲ್ ಹೇಳಿದ್ದಾರೆ. ಮಹಿಳೆಯರನ್ನು ಸ್ವಾವಲಂಬಿ ಹಾಗೂ ಉದ್ಯಮಶೀಲರನ್ನಾಗಿ ಮಾಡುವಲ್ಲಿ ರಾಜ್ಯ ಸರ್ಕಾರ ಬೆಂಬಲ ನೀಡುತ್ತಿದೆ. ಅಕ್ಕ ಕೆಫೆ ಮೂಲಕ ಮಹಿಳೆಯರೇ ನಡೆಸುವ ಕ್ಯಾಂಟೀನ್‌ಗಳನ್ನು ಸ್ಥಾಪಿಸಿ, ಆ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಸ್ಥಳೀಯ ಆಹಾರವನ್ನು ಶುಚಿ–ರುಚಿಯಾಗಿ ಕೈಗೆಟಕುವ ದರದಲ್ಲಿ ಒದಗಿಸಲಾಗುತ್ತಿದೆ. ಈ ಆರ್ಥಿಕ ವರ್ಷದಲ್ಲಿ 50 ಅಕ್ಕ ಕೆಫೆ ಸ್ಥಾಪಿಸುತ್ತಿದ್ದೇವೆ ಎಂದು ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಶರಣ ಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ.

ಭಾನುಪ್ರಕಾಶ್ ಶರ್ಮಾ, ಶ್ರೀಧರ್ ದೀಕ್ಷಿತ್‌ರಿಗೆ ವಾಸುದೇವ ಮಹಾರಾಜ್ ಪ್ರಶಸ್ತಿ ಪ್ರದಾನ



ಮೈಸೂರಿನ ವಾಸುದೇವ ಮಹಾರಾಜ್ ಫೌಂಡೇಷನ್‌ನಿಂದ ಧಾರ್ಮಿಕ ಚಿಂತಕ ಡಾ.ವಿ.ಭಾನುಪ್ರಕಾಶ್ ಶರ್ಮ, ಕರುಣಾಮಯಿ ವಿಶೇಷಚೇತನರ ಸಂಸ್ಥೆಯ ಗೌರವಾಧ್ಯಕ್ಷ ಎನ್.ಶ್ರೀಧರ್ ದೀಕ್ಷಿತ್ ಅವರಿಗೆ ವಾಸುದೇವ ಮಹಾರಾಜ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು, ಮಾ.24(ಎಂಟಿವೈ)– ಮೈಸೂರಿನ ವಾಸುದೇವ ಮಹಾರಾಜ್ ಫೌಂಡೇಷನ್ ವತಿಯಿಂದ ಧಾರ್ಮಿಕ ಚಿಂತಕ ಡಾ.ವಿ.ಭಾನುಪ್ರಕಾಶ್ ಶರ್ಮ ಹಾಗೂ ಕರುಣಾಮಯಿ ವಿಶೇಷಚೇತನರ ಸಂಸ್ಥೆಯ ಗೌರವಾಧ್ಯಕ್ಷ ಎನ್.ಶ್ರೀಧರ್ ದೀಕ್ಷಿತ್ ಅವರಿಗೆ ವಾಸುದೇವ ಮಹಾರಾಜ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಉದ್ಘಾಟಿಸಿ ಮಾತನಾಡಿ, 1938ರಲ್ಲಿ ಜನಿಸಿದ ವಾಸುದೇವ ಮಹಾರಾಜ್ ಅವರು ಅಂದಿನ ಪ್ರತಿಷ್ಠಿತ ಎಸ್‌ಬಿಎಂನಲ್ಲಿ ಕೆಲಸ ಮಾಡುತ್ತಿದ್ದರೂ ಮೊದಲಿನಿಂದಲೂ ಅವರಿಗೆ ಆಧ್ಯಾತ್ಮಿಕ ಗೀಳು ಇತ್ತು. ನಂತರ ಸಾಧನೆಯ ತುತ್ತತುದಿ ಏರಿದರು. ಇವರಿಂದ ಅನೇಕರು ಪ್ರಭಾವಿತರಾದರು ಎಂದು ಸ್ಮರಿಸಿದರು. ಪ್ರಶಸ್ತಿ ಸ್ವೀಕರಿಸಿದ ಬಳಿಕ ಡಾ. ಭಾನುಪ್ರಕಾಶ್ ಶರ್ಮ ಮಾತನಾಡಿ, ಮನುಷ್ಯ ಜಗತ್ತಿನಲ್ಲಿ ಏನು ಸಾಧನೆ ಮಾಡಿದ್ದಾನೆ ಎಂಬುದನ್ನು ನೆನಪಿಸಿಕೊಳ್ಳುವುದೇ ಈ ರೀತಿಯ ಕಾರ್ಯಕ್ರಮಗಳ ಉದ್ದೇಶವಾಗಿವೆ. ಇನ್ನು, ವಾಸುದೇವ ಮಹಾರಾಜರು ಜೀವನದಲ್ಲಿ ಆದರ್ಶಪ್ರಾಯರಾಗಿ ಇತರರಿಗೆ ಮಾರ್ಗದರ್ಶನ ಮಾಡಿದರೆಂದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮುಖಂಡರಾದ ಗುರುರಾಜ ಪೋಶೆಟ್ಟಿಹಳ್ಳಿ, ಕೆ.ಆರ್.ಯೋಗಾನರಸಿಂಹನ್, ಎಂ.ವಿ.ನಾಗೇಂದ್ರಬಾಬು, ಎನ್.ಅನಂತ ಇನ್ನಿತರರು ಉಪಸ್ಥಿತರಿದ್ದರು.

ಯುಗಾದಿ ಅಂಗವಾಗಿ ಶಾಸಕರಿಂದ ಬ್ರಾಹ್ಮಣ ಸಮುದಾಯಕ್ಕೆ ಒಂಟಿಕೊಪ್ಪಲ್ ಪಂಚಾಂಗ ವಿತರಣೆ



ಶಾಸಕ ಕೆ.ಹರೀಶ್‌ಗೌಡ ಅವರು 500 ಮಂದಿ ಬ್ರಾಹ್ಮಣ ಕುಟುಂಬಕ್ಕೆ ಒಂಟಿಕೊಪ್ಪಲ್ ಪಂಚಾಂಗ ವಿತರಿಸಿದರು.

ಮೈಸೂರು, ಮಾ. 24– ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಸದ್ವಿದ್ಯಾ ಶಿಕ್ಷಣ ಸಂಸ್ಥೆಯಲ್ಲಿ ಯುಗಾದಿ ಅಂಗವಾಗಿ ಶಾಸಕ ಕೆ. ಹರೀಶ್‌ಗೌಡ ಅವರು 500 ಮಂದಿ ಬ್ರಾಹ್ಮಣ ಕುಟುಂಬಕ್ಕೆ ಒಂಟಿಕೊಪ್ಪಲ್ ಪಂಚಾಂಗ ವಿತರಿಸಿದರು.

ಬಳಿಕ ಮಾತನಾಡಿದ ಅವರು, ಚೈತ್ರ ಮಾಸದ ಮೂಲಕ ಪ್ರಾರಂಭವಾಗುವ ಯುಗಾದಿ ಹೊಸ ವರ್ಷದಿಂದ ಇಡೀ ಪರಿಸರವೇ ಹಸಿರಿನಿಂದ ಕಂಗೊಳಿಸುತ್ತಾ ಸಂತಸಪಡುತ್ತದೆ. ನಮ್ಮ ಪೂರ್ವಜರು ಹೇಳಿಕೊಟ್ಟ ಹಬ್ಬಗಳ ಮಹತ್ವ, ಸಾಂಸ್ಕೃತಿಕ, ಧಾರ್ಮಿಕ ಆಚರಣೆಯನ್ನು ಪ್ರತಿಯೊಬ್ಬರು ಪಾಲಿಸಿಕೊಂಡು ಹೋಗಬೇಕು. ಅದರಲ್ಲಿಯೇ ಒಂದು ವೈಜ್ಞಾನಿಕ ಶಕ್ತಿ ಅಡಗಿದೆ. ಧಾರ್ಮಿಕ ಕಾರ್ಯಕ್ರಮಗಳಿಗೆ ದಿನಾಂಕ, ಸಮಯವನ್ನು ಪಂಚಾಂಗದ ಪ್ರಕಾರವೇ ನಿಗದಿಪಡಿಸಲಾಗುತ್ತದೆ. ಪುರೋಹಿತರು, ಅರ್ಚಕರನ್ನು ಸೇರಿಸಿ ಕಳೆದ 6 ವರ್ಷಗಳಿಂದ ಈ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯ ಎಂದರು.

ಆಧ್ಯಾತ್ಮಿಕ ಚಿಂತಕ ಡಾ.ಶೆಲ್ವಪಿಳ್ಳೆ ಅಯ್ಯಂಗಾರ್ ಮಾತನಾಡಿ, ಪಂಚಾಂಗದಲ್ಲಿ ಹಿಂದೂ ಸಂಪ್ರದಾಯದ ಆಚರಣೆ ಮಹತ್ವದ ಬಗ್ಗೆ ನಿಶ್ಚಯಿಸಿದಂತೆ ಎಲ್ಲವೂ ನಡೆಯುತ್ತಾ ಬಂದಿರುವುದನ್ನು ಕಾಣುತ್ತಿದ್ದೇವೆ ಎಂದರೆ ಯತಿಗಳ ತಪಸ್ಸು ಕೊಡುಗೆ ಅಪಾರವಾದುದದ್ದು, ಇದು ವೈಜ್ಞಾನಿಕವಾಗಿಯೂ ಸಾಬೀತಾಗಿದೆ. ಸಾವಿರಾರು ವರ್ಷಗಳಿಂದ ಸಮಾಜದಲ್ಲಿ ಆಗುವ ಬದಲಾವಣೆಯ ಮುನ್ನವೇ ಪಂಚಾಂಗದಲ್ಲಿ ನಮೂದಿಸಲಾಗಿರುತ್ತದೆ ಎಂದು ತಿಳಿಸಿದರು.

ಸರ್ಕಾರದಿಂದ ಬಡ ಬ್ರಾಹ್ಮಣರಿಗೆ ಸಿಗಬೇಕಾದ ಸರ್ಕಾರದ ಸವಲತ್ತುಗಳು ಅನ್ಯರಾಜ್ಯಗಳಲ್ಲಿ ಇರುವ ಹಾಗೆಯೇ ಕರ್ನಾಟಕದಲ್ಲಿ ಜಾರಿಗೆ ಬರಬೇಕಿದೆ. ಅರ್ಚಕ ಪುರೋಹಿತರಿಗೆ ಅಡುಗೆ ವೃತ್ತಿಯವರಿಗೆ ಸರ್ಕಾರದ ನೆರವು ಅವಶ್ಯಕ. ವಿಧಾನಸಭಾ ಕ್ಷೇತ್ರದ ಮಟ್ಟದಲ್ಲಿ ಇದು ಜಾರಿಗೆ ತರುವಂತೆ ಶಾಸಕ ಕೆ.ಹರೀಶ್‌ಗೌಡ ಅವರಲ್ಲಿ ಸರ್ಕಾರದ ಗಮನಕ್ಕೆ ತರಬೇಕೆಂದು ವಿಪ್ರ ಸಮಾಜದ ಪರವಾಗಿ ಮನವಿ ಮಾಡಿದರು.

ವೆಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ ರಘುರಾಮ್ ವಾಜಪೇಯಿ, ಯೋಗ ನರಸಿಂಹ ಸ್ವಾಮಿ ದೇವಸ್ಥಾನದ ಆಡಳಿತ ಅಧಿಕಾರಿ ಶ್ರೀನಿವಾಸ್, ಯೋಗ ನರಸಿಂಹ (ಮುರಳಿ) ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಅಧ್ಯಕ್ಷ ಎಚ್.ಎನ್. ಶ್ರೀಧರ್ಮೂರ್ತಿ, ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ನಿರೂಪಕ ಅಜಯ್‌ಶಾಸ್ತ್ರಿ, ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ಕಡಕೊಳ ಜಗದೀಶ್, ವಿಘ್ನೇಶ್ವರಭಟ್, ಸುದರ್ಶನ್, ಶ್ರೀಕಾಂತ್ ಕಶ್ಯಪ್, ಸುಚೇಂದ್ರ, ಚಕ್ರಪಾಣಿ, ಮಿರ್ಲೆ ಪನಿಶ್, ಗುರುಪ್ರಸಾದ್, ನವೀನ್, ರವಿಚಂದ್ರ ಹಾಗೂ ಇನ್ನಿತರರು ಈ ವೇಳೆ ಹಾಜರಿದ್ದರು.

ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಗುತ್ತಿಗೆಯಲ್ಲಿ ಭಾರಿ ಭ್ರಷ್ಟಾಚಾರ

ಜೆಡಿಎಸ್ ವಕ್ತಾರ ಎನ್.ಆರ್.ರವಿಚಂದ್ರೇಗೌಡ ಆರೋಪ

ಮೈಸೂರು,ಮಾ.24(ಎಂಟಿವೈ)– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದ ಹಲವು ಭ್ರಷ್ಟಾಚಾರಗಳು ನಡೆಯುತ್ತಿವೆ ಎಂದು ಜೆಡಿಎಸ್ ವಕ್ತಾರ ಎನ್.ಆರ್. ರವಿಚಂದ್ರೇಗೌಡ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಎಗ್ಗಿಲ್ಲದೆ ಭ್ರಷ್ಟಾಚಾರ ನಡೆಯುತ್ತಿದೆ. ಇದರ ನಡುವೆ ಅಗತ್ಯ ವಸ್ತುಗಳ ಬೆಲೆ ಹೆಚ್ಚಿಸಿ ಜನರಿಗೆ ಹೊರೆಯಾಗಿಸುತ್ತಿದ್ದಾರೆ. ಗ್ಯಾರಂಟಿ ಯೋಜನೆಗಾಗಿ ಮದ್ಯದ ದರ ಹೆಚ್ಚಳ ಮಾಡಿ, ಹೆಚ್ಚಿನ ಜನರನ್ನು ಕುಡುಕರನ್ನಾಗಿ ಮಾಡಿ ಹಾಳುಮಾಡಲಾಗುತ್ತಿದೆ. 15,500 ಕೋಟಿ ಸ್ಮಾರ್ಟ್ ಮೀಟರ್ ಹಗರಣ ಬೆಳಕಿಗೆ ಬರುತ್ತಿದೆ. ಇವರು 1999ರ ಕೆ.ಟಿ.ಟಿ.ಪಿ ಕಾಯಿದೆಯ ನಿಯಮಗಳನ್ನು ಗಾಳಿಗೆ ತೂರಿದ್ದಾರೆ. ಆರ್ಥಿಕ ಹಾಗೂ ತಾಂತ್ರಿಕ ಸಾಮರ್ಥ್ಯವಿಲ್ಲದ ಕಂಪನಿಯೊಂದರ ಜೇಬು ತುಂಬಿಸಲು ವಿದ್ಯುತ್ ಸ್ಮಾರ್ಟ್ ಮೀಟರ್ ಅಳವಡಿಸಿ ನಿರ್ವಹಿಸಲು ಗುತ್ತಿಗೆ ನೀಡಲು ಮುಂದಾಗಿದ್ದಾರೆ. ಗುತ್ತಿಗೆ ಪಡೆಯಲು ಮುಂದೆ ಬಂದಿರುವ ಕಂಪನಿಯು ಉತ್ತರಪ್ರದೇಶದಲ್ಲಿ ಕಪ್ಪುಪಟ್ಟಿಗೆ ಸೇರಿಸಲಾಗಿದೆ. ಆದರೂ, ರಾಜ್ಯದಲ್ಲಿ ಆ ಕಂಪನಿಗೆ ಗುತ್ತಿಗೆ ನೀಡಲು ಮುಂದಾಗಿರುವುದು ಹಲವು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ಈ ಸಂಬಂಧ ಕಾನೂನು ಹೋರಾಟ ಮಾಡುವುದಾಗಿ ಅವರು ಎಚ್ಚರಿಸಿದರು.

ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನ ಕಾಂಗ್ರೆಸ್ ಮುಖಂಡರು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ಕ್ಲೀನ್‌ಚಿಟ್ ಸಿಕ್ಕಿರುವಂತೆ ಪ್ರಚಾರ ಮಾಡುತ್ತಿದ್ದಾರೆ. ಇದು ಸತ್ಯಕ್ಕೆ ದೂರವಾದ ವಿಷಯ. ಪ್ರಜಾಪ್ರತಿನಿಧಿ ನ್ಯಾಯಾಲಯದಲ್ಲಿ ಹಾಗೂ ಹೈಕೋರ್ಟ್ ವಿಭಾಗೀಯ ಪೀಠದಲ್ಲಿ ತೀರ್ಪು ಬಾಕಿಯಿರುವುದರಿಂದ ಈಗಲೇ ಅವರಿಗೆ ಕ್ಲೀನ್ ಚಿಟ್ ಸಿಕ್ಕಿದೆ ಎನ್ನುವುದು ಸರಿಯಲ್ಲ. ವಿಳಂಬವಾದರೂ ಸರಿ ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ಅವರಿಗೆ ಶಿಕ್ಷೆಯಾಗುತ್ತದೆ. ನಮಗೆ ನ್ಯಾಯ ಸಿಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಎನ್.ನರಸಿಂಹಸ್ವಾಮಿ, ಹಿರಿಯ ಉಪಾಧ್ಯಕ್ಷರಾದ ಫಾಲ್ಕನ್ ಬೋರೇಗೌಡ, ಪ್ರಕಾಶ್ ಎಸ್. ಪ್ರಿಯದರ್ಶನ್, ರಾಜಶೇಖರ್ ಇದ್ದರು.

ಸಂಸದ ಯದುವೀರ್ ಹುಟ್ಟುಹಬ್ಬ ಆಚರಣೆ



ಸಂಸದ ಯದುವೀರ್ ಒಡೆಯರ್ ಹುಟ್ಟುಹಬ್ಬದ ಪ್ರಯುಕ್ತ ಯದುವೀರ್ ಬ್ರಿಗೇಡ್ ವತಿಯಿಂದ ಮೈಸೂರಿನ ಅಜಿತನೆಲೆ ಮತ್ತು ಶಾರದಾ ನೆಲೆ ಅನಾಥಾಶ್ರಮ ಮಕ್ಕಳಿಗೆ ಉಚಿತವಾಗಿ ನೋಟ್ ಪುಸ್ತಕ, ಪೆನ್, ಸಿಹಿ ವಿತರಿಸಲಾಯಿತು. ಯದುವೀರ್ ಬ್ರಿಗೇಡ್‌ನ ಎನ್.ನಾಗೇಂದ್ರ, ಪ್ರವೀಣ್, ದಾರಿಪುರ ಡಿ.ಚಂದ್ರಶೇಖರ್, ಮಾದಹಳ್ಳಿ ಡಾ.ಮಹದೇವಪ್ಪ, ಎಂ.ಎಂ,ಸುನೀಲ್, ಅದಿತ್ಯ, ವಿನೋದ್, ದೃವಂತ್, ರಾಮು, ವಿಘ್ನೇಶ್ವರ ಭಟ್, ರಾಮಚಂದ್ರ ಇತರರು ಹಾಜರಿದ್ದರು.

ಸಂಸದ ಯದುವೀರ್ ಹುಟ್ಟುಹಬ್ಬ: ಸಾರ್ವಜನಿಕರಿಗೆ ಎಳನೀರು, ಮಜ್ಜಿಗೆ ವಿತರಣೆ



ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಮೈಸೂರು ರಾಜವಂಶಸ್ಥರು, ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಜನ್ಮದಿನದ ಪ್ರಯುಕ್ತ ಸಾರ್ವಜನಿಕರಿಗೆ ಎಳನೀರು, ಮಜ್ಜಿಗೆ ವಿತರಿಸಲಾಯಿತು. ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಮೈಸೂರು ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಮಾಧ್ಯಮ ಪ್ರಮುಖ್ ಮಹೇಶ್‌ರಾಜ್ ಅರಸ್, ಪ್ರಧಾನ ಕಾರ್ಯದರ್ಶಿಗಳಾದ ಬಿ.ಎಂ.ರಘು, ಕೇಬಲ್ ಮಹೇಶ್, ಗಿರಿಧರ್, ಕಿರಣ್ ಜಯರಾಮ್, ದಿನೇಶ್‌ಗೌಡ, ಪೈಲ್ವಾನ್ ರವಿ, ಮಂಜು ಸ್ಮಾರ್ಟ್, ರಾಕೇಶ್ ಭಟ್, ರಾಮೇಗೌಡ, ಸವಿತ ಗೌಡ, ದಾರಿಪುರ ಸುನಿಲ್, ಶಾಲಿನಿ ಗೌಡ, ಅಶೋಕ್ ಮುಂತಾದವರು ಉಪಸ್ಥಿತರಿದ್ದರು.

ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು,ಮಾ.24– 2024–25ನೇ ಸಾಲಿಗೆ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲೂಕಿನ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕಾಗಿ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ p.postmatric. karnataka. gov.in ನಲ್ಲಿ 30–03–2025ರೊಳಗೆ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ 0821–2520910 ಅನ್ನು ಸಂಪರ್ಕಿಸುವುದು.

ಸಚಿವ, ಶಾಸಕರ ವೇತನ ಹೆಚ್ಚಳಕ್ಕೆ ಎಸ್‌ಯುಸಿಐ ತೀವ್ರ ವಿರೋಧ

ಮೈಸೂರಿನ ಪುರಭವನದ ಡಾ.ಅಂಬೇಡ್ಕರ್ ಪ್ರತಿಮೆ ಮುಂದೆ ಪ್ರತಿಭಟನೆ

ಮೈಸೂರು, ಮಾ.24(ಬಿಎಲ್‌ಯು)– ಬೆಲೆ ಏರಿಕೆಯಿಂದ ಜನರು ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಸಂದರ್ಭದಲ್ಲಿ ಸಚಿವರು ಹಾಗೂ ಶಾಸಕರ ವೇತನ ಭತ್ಯೆ ಹೆಚ್ಚಳ ಮಾಡಲಾಗಿದೆ ಎಂದು ಆರೋಪಿಸಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾದ ಕಾರ್ಯಕರ್ತರು ಮೈಸೂರಿನಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ನಗರದ ಪುರಭವನದ ಡಾ.ಅಂಬೇಡ್ಕರ್ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿದ ಎಸ್‌ಯುಸಿಐ ಕಾರ್ಯಕರ್ತರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಮೊಳಗಿಸಿದರು. ಸರ್ಕಾರಿ ಸ್ವಾಮ್ಯದ ವಿದ್ಯುತ್ ಕಂಪನಿ ನೌಕರರಿಗೆ ಪಿಂಚಣಿ ಹಾಗೂ ಗ್ರಾಚ್ಯುಟಿ ನೀಡಲು ಸರ್ಕಾರದ ಬಳಿ ಹಣವಿಲ್ಲ. ವಿದ್ಯುತ್ ದರ ಹೆಚ್ಚಳವನ್ನು ಜನರ ಮೇಲೆ ಹೊರಿಸಲಾಗುತ್ತಿದೆ. ವಿವಿಧ ವಲಯದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ 7 ವರ್ಷದಿಂದ ಕನಿಷ್ಠ ವೇತನ ಏರಿಕೆ ಮಾಡಿಲ್ಲ



ಸಚಿವ, ಶಾಸಕರು ತಮ್ಮ ವೇತನ ಹೆಚ್ಚಳ ಮಾಡಿಕೊಂಡಿರುವುದನ್ನು ವಿರೋಧಿಸಿ ಎಸ್‌ಯುಸಿಐ ಕಾರ್ಯಕರ್ತರು, ಮೈಸೂರಿನ ಪುರಭವನದ ಡಾ.ಅಂಬೇಡ್ಕರ್ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿದರು.

ಎಂದು ದೂರಿದರು. ರೈತರು ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ನಿಗದಿ ಮಾಡುತ್ತಿಲ್ಲ. ದಿನನಿತ್ಯ ದುಡಿಯುವ ಆಶಾ, ಅಂಗನವಾಡಿ, ಬಿಸಿಯೂಟದ ಕಾರ್ಯಕರ್ತರಿಗೆ ತೀರಾ ಕಡಿಮೆ ವೇತನ ನೀಡಲಾಗುತ್ತಿದೆ. ಇಂತಹ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ ಸಚಿವ, ಶಾಸಕರು ಪಕ್ಷಭೇದ ಮರೆತು ಸರ್ವಾನುಮತದಿಂದ ತಮ್ಮ ವೇತನ ಹೆಚ್ಚಳ ಮಾಡಿಕೊಂಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜನಪ್ರತಿನಿಧಿಗಳು ತಮ್ಮ ಹಿತರಕ್ಷಣೆಗಾಗಿ ಕಾನೂನು ಮಾಡುವುದಕ್ಕಿಂತ ಮೊದಲು ತಮ್ಮನ್ನು ಆಯ್ಕೆ ಮಾಡಿರುವ ಜನರಿಗೆ ನ್ಯಾಯಸಮ್ಮತ ವೇತನ ಹಾಗೂ ಪಿಂಚಣಿ ನೀಡಲಿ ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಎಸ್‌ಯುಸಿಐನ ಜಿಲ್ಲಾ ಕಾರ್ಯದರ್ಶಿ ಬಿ.ರವಿ, ಜಿಲ್ಲಾ ಸಮಿತಿ ಸದಸ್ಯ ಚಂದ್ರಶೇಖರ್ ಮೇಟಿ, ಪಿ.ಎಸ್. ಸಂಧ್ಯಾ, ಸೀಮಾ, ಜಿ.ಎಸ್.ಹರೀಶ್, ಸುನೀಲ್, ಸುಮಾ, ಚಂದ್ರಕಲಾ ಹಾಗೂ ಇತರರು ಭಾಗವಹಿಸಿದ್ದರು.

ನಕ್ಕರೆ ಅದೇ ಸ್ವರ್ಗ

ಮದುವೆ ಆಮಂತ್ರಣ ಪತ್ರದಲ್ಲಿ ವಿಶೇಷ ಸೂಚನೆ..!
ಕುಡಿಯುವವರು (ಸಾರಾಯಿ) ದಯವಿಟ್ಟು ಮದುವೆಗೆ ಬರಬೇಡಿ!
ಅರೆ... ಮದುವೆ ಗಂಡೇ ಬಂದಿಲ್ವಂತಲಪ್ಪಾ..!!

ಮೈಸೂರು ಮಿತ್ರ
ಮಂಗಳವಾರ, 25 ಮಾರ್ಚ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಕಾಲ ಹಿಂದಕ್ಕೆ ಸಾಗುವುದಿಲ್ಲ. ಆದರೆ, ಅದರ ಜತೆ ಸಾಗದೇ ಇದ್ದರೆ ನಾವು ನಿಂತಲ್ಲೇ ನಿಲ್ಲಬೇಕಾಗುತ್ತದೆ. –ಶಿವರಾಮ ಕಾರಂತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಜಲ ಶೋಧಿಸಿ ನೀರು ತರಬೇಕು, ಕುಲ ಶೋಧಿಸಿ ಹೆಣ್ಣು ತರಬೇಕು.

ನಿಮ್ಮ ಪತ್ರಗಳು

■ ಸದನದಲ್ಲಿ ಶಾಸಕರು ಸಭ್ಯತೆಯಿಂದ ವರ್ತಿಸಬೇಕು

ಮಾನ್ಯರೆ,

ಸದನದಲ್ಲಿ ಇತ್ತೀಚೆಗೆ ನಡೆದ ಬೆಳವಣಿಗೆಗಳಿಂದ ತುಂಬಾ ನೋವಾಗಿದೆ. ಈ ಸ್ಥಾನದಲ್ಲಿ ಮುಂದುವರಿಯುವುದರಲ್ಲಿ ಅರ್ಥ ಇಲ್ಲ ಎಂಬ ಭಾವನೆ ಬರುತ್ತಿದೆ. ಶಾಸಕರನ್ನು ಅಮಾನತು ಮಾಡುವುದು ಒಳ್ಳೆಯ ಸಂಪ್ರದಾಯ ಅಲ್ಲ. ವಿಧಾನ ಪರಿಷತ್‌ನಲ್ಲಿ ಅಂತಹ ತೀರ್ಮಾನ ಮಾಡಿಲ್ಲ. ವಿಧಾನ ಪರಿಷತ್ತಿನಲ್ಲಿ ಜೈಕಾರ, ಧಿಕ್ಕಾರ ಕೂಗಬಾರದು ಎಂಬ ನಿಯಮ ಇದೆ. ಇದು ಪಾಲನೆಯಾಗುತ್ತಿಲ್ಲ. ಹೀಗಾಗಿ ಮೂಕಪ್ರೇಕ್ಷಕನಂತೆ ಕೂರಬೇಕಾಗಿದೆ. ಸಭಾಪತಿ ಸ್ಥಾನದಲ್ಲಿ ಮುಂದುವರಿಯುವ ಬಗ್ಗೆ ಏನು ತೀರ್ಮಾನ ಕೈಗೊಳ್ಳುತ್ತೇನೆಯೋ ಗೊತ್ತಿಲ್ಲ. ಈ ಸ್ಥಾನದಲ್ಲಿರಲು ಯೋಗ್ಯನಾಗಿದ್ದೇನೋ, ಇಲ್ಲವೋ, ನನ್ನದು ಅಥವಾ ಬೇರೆಯವರ ತಪ್ಪೋ ಗೊತ್ತಿಲ್ಲ. ನಾನು ಯಾರನ್ನೂ ದೂಷಿಸುವುದಿಲ್ಲ. ಒಟ್ಟಿನಲ್ಲಿ ಈ ಸ್ಥಾನದಲ್ಲಿ ಮುಂದುವರಿಯುವುದರಲ್ಲಿ ಅರ್ಥ ಇಲ್ಲ ಎಂಬ ಭಾವನೆ ಬರುತ್ತಿದೆ. ಹೀಗಾಗಿ ರಾಜೀನಾಮೆ ನೀಡಲು ನಿರ್ಧಾರ ಕೈಗೊಂಡಿದ್ದೇನೆ. ಆದರೆ ಇನ್ನೂ ರಾಜೀನಾಮೆ ನೀಡಿಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಯವರು ತಮ್ಮ ಅಂತರಾಳದ ಬೇಸರವನ್ನು ಮಾಧ್ಯಮದ ಮುಂದೆ ವ್ಯಕ್ತಪಡಿಸಿರುವುದು ವಿಷಾದನೀಯ.

ಇಲ್ಲಿ ನಾವು ಸಭಾಪತಿ ಬಸವರಾಜ ಹೊರಟ್ಟಿಯವರ ಭಾವನೆಗಳನ್ನು ಗೌರವಿಸಬೇಕಿದೆ. ಸದನದಲ್ಲಿ ಹನಿಟ್ರ್ಯಾಪ್ ಸೇರಿದಂತೆ ಜನಪ್ರತಿನಿಧಿಗಳು ಸದನದಲ್ಲಿ ಪ್ರತಿಯೊಂದು ವಿಷಯಕ್ಕೂ ಮಾಡುತ್ತಿರುವ ಗದ್ದಲ, ಕಾಲಹರಣ ಹಾಗೂ ಸಭಾಪತಿಯವರ ಮಾತಿಗೆ ತೋರುತ್ತಿರುವ ಅಗೌರವ ಇವೆಲ್ಲವುಗಳ ಹಿಂದಿನ ಅವರ ಕಳವಳವನ್ನು ಅರ್ಥ ಮಾಡಿಕೊಳ್ಳಬೇಕಿದೆ. ಏಕೆಂದರೆ ನಾಡಿನ ಕೋಟ್ಯಾಂತರ ಜನರು ವಿಧಾನಸಭೆಯ ಮೇಲೆ ತಮ್ಮದೇ ಆದ ಗೌರವ ಮತ್ತು ನಂಬಿಕೆಯನ್ನು ಇಟ್ಟುಕೊಂಡಿರುತ್ತಾರೆ. ಈ ನಿಟ್ಟಿನಲ್ಲಿ ಸದನದ ಘನತೆಯನ್ನು ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ಶಾಸಕರ ಕರ್ತವ್ಯ ಹಾಗೂ ಜವಾಬ್ದಾರಿಯಾಗಿದೆ.

ಪ್ರತಿಯೊಬ್ಬ ಜನಪ್ರತಿನಿಧಿಗೂ ಇಡೀ ರಾಜ್ಯ ಹಾಗೂ ದೇಶವನ್ನು ಪ್ರಗತಿಪಥದತ್ತ ಕೊಂಡೊಯ್ಯುವ ಮಹತ್ತರವಾದ ಜವಾಬ್ದಾರಿ ಇರುತ್ತದೆ. ಹೀಗಿರುವಾಗ ವಿನಾಕಾರಣ ಸದನದಲ್ಲಿ ಶಾಸಕರು ಕೂಗಾಡಿ ಅಶಿಸ್ತಿನಿಂದ ನಡೆದುಕೊಂಡರೆ ಹೇಗೆ? ಒಬ್ಬ ಉತ್ತಮ ಶಾಸಕ ರಾಜ್ಯದ ಜನತೆಗೆ ಮಾದರಿಯಾಗಬೇಕು. ಅಲ್ಲದೆ ಆತನ ನಡವಳಿಕೆಯು ಸದನದಲ್ಲಾಗಲಿ ಅಥವಾ ಹೊರಗಡೆಯಾಗಲಿ ಆದರ್ಶಪ್ರಾಯವಾಗಿರಬೇಕಿದ್ದು, ಶಾಸಕಾಂಗದ ಘನತೆಗೆ ಕುಂದುಂಟಾಗದಂತೆ ನಡೆದುಕೊಳ್ಳಬೇಕಾಗುತ್ತದೆ. ಸದನದಲ್ಲಿ ಸಭಾಧ್ಯಕ್ಷರು ನೀಡುವ ಸೂಚನೆಗಳನ್ನು ಪ್ರತಿಯೊಬ್ಬ ಶಾಸಕರು ಚಾಚು ತಪ್ಪದೇ ಪಾಲಿಸಿ, ಸದನದ ಹಿರಿಮೆಯನ್ನು ಎತ್ತಿ ಹಿಡಿಯುವುದು ಹಾಗೂ ಸಭಾಧ್ಯಕ್ಷರಿಗೆ ಗೌರವಧಾರಗಳನ್ನು ನೀಡುವುದು ಪ್ರತಿಯೊಬ್ಬ ಶಾಸಕರ ಕರ್ತವ್ಯ ಕೂಡ. ಈ ನಿಟ್ಟಿನಲ್ಲಿ ನಮ್ಮ ಜನಪ್ರತಿನಿಧಿಗಳು ಇನ್ನುಂದೆಯಾದರೂ ಆಲೋಚಿಸಿ, ತಮ್ಮ ನಡವಳಿಕೆಯಿಂದ ಯಾರ ಮನಸ್ಸಿಗೂ ನೋವಾಗದಂತೆ ವರ್ತಿಸಿ ಸದನದ ಗೌರವವನ್ನು ಹೆಚ್ಚಿಸುವುದೊಳಿತು.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ಶಿಸ್ತಿಗಾಗಿ ಮಕ್ಕಳನ್ನು ಶಿಕ್ಷಿಸುವುದು..

ಮಾನ್ಯರೆ,

ಲೇಖಕ ಮಿರ್ಲೆ ಚಂದ್ರಶೇಖರ್ ಅವರ ಲೇಖನ, ಪ್ರತಿಯೊಬ್ಬ ತಂದೆ ತಾಯಂದಿರು ಮಕ್ಕಳೊಂದಿಗೆ ನಡೆದುಕೊಳ್ಳುವ ಮತ್ತು ಶಿಕ್ಷಿಸುವ ರೀತಿಯ ಬಗ್ಗೆ ಸಾಧಕ ಬಾಧಕಗಳನ್ನು ವಿವರವಾಗಿ ತಿಳಿಸಿಕೊಡುತ್ತದೆ. ಮಕ್ಕಳನ್ನು ಪ್ರೀತಿಯಿಂದ ಸಾಕಿ ಸಜ್ಜನರನ್ನಾಗಿಸಿ ಅವರೊಟ್ಟಿಗೆ ಅಂತ್ಯ ಕಾಲದ ಬದುಕನ್ನು ನೆಮ್ಮದಿಯಿಂದ ಕಳೆಯಿರಿ ಎಂಬ ಮಾತು ಗಮನಾರ್ಹ.

ಇಂಗ್ಲಿಷ್‌ನಲ್ಲಿ " Spare the rod, save the child" ಅಂದರೆ ಹೊಡೆಯುವ ದಂಡದಿಂದ ಮಕ್ಕಳನ್ನು ರಕ್ಷಿಸಿರಿ ಎಂದು ಹೇಳಲಾಗುತ್ತದೆ. ಇದೇ ಮಾತನ್ನು ಕೆಲವರು "Spare the rod, spoil the child" ಅಂದರೆ ದಂಡದಿಂದ ಶಿಕ್ಷಿಸದಿದ್ದರೆ ಮಕ್ಕಳು ಹಾಳಾಗುವರು ಎಂದು! ಒಮ್ಮೆ ದಂಡ ಪ್ರಯೋಗಿಸಿದರೆ ಮಕ್ಕಳು ಅದಕ್ಕೆ ಒಗ್ಗಿ ಹೋಗಿ ಪ್ರತಿ ಸಲವೂ ಹೊಡೆಯದೆ ದಾರಿಗೆ ಬರಲಾರದ ಪರಿಸ್ಥಿತಿ ಉಂಟಾಗಬಹುದು. ಇದಕ್ಕೆ ಪರ್ಯಾಯ ಮಾರ್ಗಗಳೂ ಇವೆ. ದಂಡ ಹಿಡಿಯಿರಿ, ಝಳಪಿಸಿರಿ ಆದರೆ ಪ್ರಯೋಗಿಸಬೇಡಿ. ಇನ್ನೂ ಒಂದು ಮಾರ್ಗ ಕಣ್ಣಿನಿಂದಲೇ ಎಚ್ಚರಿಸಿ, ಸರಿದಾರಿಗೆ ತರುವುದು.


ಮಕ್ಕಳು ತಪ್ಪು ಮಾಡಿದಾಗ ಅವರೊಂದಿಗೆ ಕಣ್ಣು ಕಣ್ಣು ತಾಗಿಸುವುದನ್ನು, ಒಂದು ಅರ್ಧ ಮುಕ್ಕಾಲು ಗಂಟೆ ನಿಲ್ಲಿಸಿ ಅಲಕ್ಷ್ಯ ತೋರಿ ದೂರ ನಿಂತು ಮೌನ ತಾಳುವುದು, ಅವರ ಮಾತುಗಳಿಗೆ ಉತ್ತರ ಕೊಡದೆ ಸಾತ್ವಿಕ ಕೋಪ ಪ್ರದರ್ಶಿಸುವುದು ಅತ್ಯಂತ ಪರಿಣಾಮಕಾರಿ. ಇದು ಒಂದು ರೀತಿ "discipline without punishment" ಅಂದರೆ ಶಿಕ್ಷೆ ಇಲ್ಲದ ಶಿಕ್ಷಣ! ಆದರೆ ಇದಕ್ಕೆ ಸಹನೆ, ತಾಳ್ಮೆ ಬೇಕು. ನೆನಪಿರಲಿ ಮಕ್ಕಳು 'ತಾಯಿ ಹೇಳಿದಂತೆ ಕೇಳುತ್ತಾರೆ, ಆದರೆ ತಂದೆ ಮಾಡಿದ್ದನ್ನೇ ಮಾಡುತ್ತಾರೆ'!

–ಲಕ್ಷ್ಮಣ್ ಗೊರ್ಲಕಟ್ಟೆ, ವಿಜಯನಗರ ಮೈಸೂರು

■ ಇದು ಪಾಲಿಕೆ ಸಿಬ್ಬಂದಿಯ ಘನ ಕಾರ್ಯ!

ಮಾನ್ಯರೆ,

ಮಂಚೇಗೌಡನಕೊಪ್ಪಲಲ್ಲಿ ಜಾತ್ರೆ ನಡೆಯುತ್ತಿದೆ. ಭಾನುವಾರ ಮೈಸೂರು ನಗರ



ಪಾಲಿಕೆ ಒಳಚರಂಡಿ ಸಿಬ್ಬಂದಿ ಬಂದು ಒಳಚರಂಡಿ ಮ್ಯಾನ್‌ಹೋಲ್ ತೆರೆದು ಅದರಲ್ಲಿದ್ದ ಮಲೀನ ನೀರು ಹಾಗೂ ತ್ಯಾಜ್ಯ ಪದಾರ್ಥಗಳ ರಸ್ತೆ ಮೇಲೆ ಹಾಕಿ, ತಮ್ಮಷ್ಟಕ್ಕೆ ತಾವು ಹೊರಟು ಹೋದರು. ಆದರೆ ಅದರ ದುರ್ವಾಸನೆ ಇಡೀ ಸುತ್ತ ಮುತ್ತ ಬೀರತೊಡಗಿತು. ಇದರ ಬಗ್ಗೆ ಸಂಬಂಧಿಸಿದವರಿಗೆ ದೂರು ನೀಡಿದರೆ ಅವರದು ಹಾಫ್ ಡೇ ವರ್ಕ್ ಎಂಬ ಉತ್ತರ ಬಂತು. ಪಾಲಿಕೆ ಸಿಬ್ಬಂದಿಯ ಈ ಘನ ಕಾರ್ಯದಿಂದಾಗಿ ಈ ಸ್ಥಳದ ಸುತ್ತಮುತ್ತಲ ಮನೆ ಜನ ಕಿಟಕಿ–ಬಾಗಿಲು ಬಂದ್ ಮಾಡಿಕೊಂಡು ದಿನದೂಡಿದರು. ನಗರ ಪಾಲಿಕೆ ಮತ್ತೊಂದು ಬೇಜವಾಬ್ದಾರಿತನಕ್ಕೆ ಮತ್ತೊಂದು ಅವಾಂತರ ಇಲ್ಲಿ ಆಗಿದೆ. ಒಂದು ರಸ್ತೆಯಲ್ಲಿ ಎರಡು ಒಳಚರಂಡಿ ಪೈಪ್‌ಲೈನ್‌ಗಳಿವೆ. ಆದರೆ ಎರಡೂ ಸಮರ್ಪಕ ವಾಗಿಲ್ಲ. ಜನ ಹಿಡಿಶಾಪ ಹಾಕುತ್ತಾ ದಿನ ದೂಡುತ್ತಿದ್ದಾರೆ. ಸಂಬಂಧಿಸಿದ ಅಧಿಕಾರಿ ವರ್ಗದ ಇಂತಹ ಬೇಜವಾಬ್ದಾರಿ ಕೆಲಸಕ್ಕೆ ಆಯುಕ್ತರು ಕ್ರಮ ಕೈಗೊಳ್ಳುತ್ತಾರೆಯೇ ಕಾದು ನೋಡಬೇಕಿದೆ.

–ನಾಗಚಂದ್ರ, ಮಂಚೇಗೌಡನಕೊಪ್ಪಲು, ಮೈಸೂರು.



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಮಕ್ಕಳಿಗೆ ಮಾತ್ರವಲ್ಲ ಪೋಷಕರಿಗೂ ಪರೀಕ್ಷಾ ಕಾಲ!

ಈ ಪರೀಕ್ಷೆ ಎಂಬ ಪದಕ್ಕೆ ಪಕ್ಕದಲ್ಲಿ ಅದ್ಯಾವ ಪುಣ್ಯಾತ್ಮ ಜ್ವರ ಎಂಬ ಎರಡಕ್ಷರದ ಖಾಯಿಲೆಯನ್ನು ತಂದು ಸೇರಿಸಿದನೋ ಗೊತ್ತಿಲ್ಲ! ಎಚ್1 ಎನ್1 ಜ್ವರಕ್ಕಿಂತ ಹೆಚ್ಚಾಗಿ ಪರೀಕ್ಷಾ ಜ್ವರವೇ ನಮ್ಮ ಮಕ್ಕಳನ್ನು ಬಾಧಿಸುತ್ತದೆ. ಮಕ್ಕಳೆಂದರೆ ಎಲ್‌ಕೆಜಿಯಿಂದ ಸ್ನಾತಕೋತ್ತರ ಪದವಿವರೆಗೆ ನಡೆಯುವ ಎಲ್ಲಾ ಪರೀಕ್ಷೆಗಳನ್ನು ಎದುರಿಸುವ ವಿವಿಧ ವಯಸ್ಸಿನ ಮಕ್ಕಳು ಎಂದಿಟ್ಟು ಕೊಳ್ಳೋಣ. ಈ ಎಲ್ಲಾ ವಯೋಮಾನದ ಮಕ್ಕಳಿಗೂ ಪರೀಕ್ಷಾ ಜ್ವರ ಸಹಜವಾಗಿ ಬರುತ್ತದೆ. ಫಲಿತಾಂಶ ಬಂದ, ಕೂಡಲೇ ಜ್ವರ ವಾಸಿಯಾಗಿ ವಿದ್ಯಾರ್ಥಿ ನಳ ನಳಿಸುತ್ತಾನೆ. ಆದರೆ ಈ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಿದೆಯಲ್ಲ ಇಲ್ಲಿ ಮಾತ್ರ ಆತಂಕದ ವಾತಾವರಣವೇ ಸೃಷ್ಟಿಯಾಗಿ ಬಿಡುತ್ತದೆ.

ಎಸ್.ಎಸ್.ಎಲ್.ಸಿ. ಮತ್ತು + 2 ಹಂತದ ಪರೀಕ್ಷೆಗಳೇ ಏಕೆ ಮಕ್ಕಳನ್ನು ಕಾಡುತ್ತವೆ ಕೊಲ್ಲುತ್ತವೆ! ಅದರಲ್ಲೂ ದೇಶದಾದ್ಯಂತ ಪೋಷಕರು ಮತ್ತು ವಿದ್ಯಾರ್ಥಿಗಳನ್ನೇಕೆ ಆತಂಕಕ್ಕೆ ದೂಡುತ್ತವೆ. ಸರ್ವಕಾಲಕ್ಕೂ ಸಾರ್ವಜನಿಕ ಸಮಸ್ಯೆಯಾಗಿ ಕಾಡಿರುವ ಈ ಪರೀಕ್ಷಾ ಭಯಕ್ಕೆ ಮದ್ದಿಲ್ಲವೇ? ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಹುಡುಕುವ ಚಿಕ್ಕ ಪ್ರಯತ್ನವೇ ಪರೀಕ್ಷೆ ನಿರೀಕ್ಷೆಗಳ ಪರ್ವಕಾಲದ ಪ್ರತಿಫಲನ.

ಮಾರ್ಚ್ ತಿಂಗಳ ಪರೀಕ್ಷಾ ಜ್ವರಕ್ಕೆ ಸಿಕ್ಕಿ ಸೋತ ಅನೇಕ ಅಮಾಯಕ ಮಕ್ಕಳು ಈ ಸೋಲಿನ ಮುಂದೆ ಅವಿವೇಕಿಗಳಂತೆ ವರ್ತಿಸಿ ಬಿಡುತ್ತಾರೆ.

ಹತ್ತು ಹನ್ನೆರಡನೇ ತರಗತಿಯ ಪರೀಕ್ಷೆಗಳನ್ನು ಬರೆಯುವ ವಿದ್ಯಾರ್ಥಿಗಳ ಮನಸ್ಸು ಹದಿನಾರು ಹದಿನೆಂಟರ ಆಸುಪಾಸಿನ ಹುಮ್ಮಸ್ಸಿನಲ್ಲಿರುತ್ತದೆ. ಇವರ ಮನಸ್ಸು ಅಂಕೆಗೆ ಸಿಕ್ಕುವುದಿಲ್ಲ. ಅಂದರೆ ಕೋತಿಗೆ ಹೆಂಡ ಕುಡಿಸಿದ ಹಾಗೆ! ಮಾಮೂಲಿಯಾಗಿದ್ದರೇನೆ ತಡೆಯಲು ಕಷ್ಟ; ಇನ್ನು ಹೆಂಡ ಕುಡಿದ ಮೇಲಿನ ಕಥೆಯನ್ನು ನೀವೇ ಊಹಿಸಿ. ಇತ್ತ ಪದವಿ ತರಗತಿಯ ವಿದ್ಯಾರ್ಥಿಗಳಿಗಿರುವ ಮೆಚ್ಯುರಿಟಿ (ಪ್ರಬುದ್ಧತೆ) ಇರುವುದಿಲ್ಲ, ಅತ್ತ ಪ್ರಾಥಮಿಕ ಶಾಲೆಯ ಮಕ್ಕಳಲ್ಲಿರುವ ಇನ್ನೋಸೆನ್ಸ್ (ಮುಗ್ಧತೆ) ಇರುವುದಿಲ್ಲ. ಎಡಬಿಡಂಗಿ ವಯಸ್ಸು; ಹುಚ್ಚು ಕೋಡಿ ಮನಸ್ಸು ಎರಡೂ ಸೇರಿ ಈ ಹತ್ತು ಹನ್ನೆರಡನೇ ತರಗತಿಯ ಹುಡುಗರನ್ನ ಹುಡುಗಿಯರನ್ನ ಆಳುತ್ತವೆ. ಇದರ ನಡುವೆಯೇ ತಂದೆ–ತಾಯಿಯರ ಬೆಟ್ಟದಂಥಾ ನಿರೀಕ್ಷೆಗಳು ಈ ಮಕ್ಕಳನ್ನು ಒತ್ತಡಕ್ಕೆ ತಳ್ಳುತ್ತವೆ.

ಮಗ ಅಥವಾ ಮಗಳು ಎಸ್.ಎಸ್.ಎಲ್.ಸಿ., ಪಿ.ಯು.ಸಿ.ಗೆ ಬರುತ್ತಲೇ ಮಕ್ಕಳಿಗಿಂತ ಪೋಷಕರೇ ಹೆಚ್ಚು ಅಲರ್ಟ್ ಆಗುತ್ತಾರೆ. ತಮ್ಮ ಮಕ್ಕಳಿಗಾಗಿ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳು ಓದುತ್ತಿರುವ ಶಾಲೆ–ಕಾಲೇಜುಗಳಲ್ಲೇ ಹೇಗಾದರೂ ಮಾಡಿ ಸೀಟು ಗಿಟ್ಟಿಸುತ್ತಾರೆ ಅದರಲ್ಲೂ ಪ್ರಭಾವ ಬೀರಿ ಮೊದಲ ಬೆಂಚ್‌ನಲ್ಲೇ ಕೂರಿಸುತ್ತಾರೆ. ಮತ್ತೆ ಕೆಲವು ಪೋಷಕರಂತೂ ತಮ್ಮ ಮಕ್ಕಳು ಯಾರ ಜೊತೆ ಸ್ನೇಹ ಬೆಳೆಸಬೇಕೆಂಬುದನ್ನೂ ತಾವೇ ನಿರ್ಧರಿಸಿ ಬಿಡುತ್ತಾರೆ. ಪ್ರತೀ ಟೆಸ್ಟು ಪ್ರಾಕ್ಟಿಕಲ್ ಕ್ಲಾಸ್‌ಗಳಲ್ಲೂ, ಎಲ್ಲದರಲ್ಲೂ ತನ್ನ ಮಗ ಅಥವಾ ಮಗಳು ಮಿಂಚಬೇಕೆಂದು ಆಸೆಪಡುತ್ತಾರೆ. ಅದರ ವರದಿ ಒಪ್ಪಿಸಲು ಮಕ್ಕಳಿನ್ನು ಮನೆಗೆ ಬಂದಿಲ್ಲವಲ್ಲಾ ಎಂಬ ಧಾವಂತದಲ್ಲಿ ಮನೆಯ ವರಾಂಡದಲ್ಲಿ ಶತಪಥ ಹೆಜ್ಜೆ ಹಾಕುತ್ತಿರುತ್ತಾರೆ.

ಇವರ ನಿರೀಕ್ಷೆ ನಿಜವಾಗುವ ಪರೀಕ್ಷೆ ಈಗ ಬಂದಿದೆ ಅಂದರೆ ಪಿಯುಸಿ ಪರೀಕ್ಷೆಗಳು ಮುಗಿದು ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ನಡೆಯುತ್ತಿವೆ. ಇಂಥ ಮಹತ್ವಾಕಾಂಕ್ಷೆ ಸೀಸನ್ನಿಗಾಗಿ ಕಾಯುತ್ತಿರುವ ವಿದ್ಯಾರ್ಥಿ–ವಿದ್ಯಾರ್ಥಿನಿಯರಲ್ಲಿ ಸಂಭ್ರಮಪಡುವ ಗುಂಪು ಒಂದೆಡೆಯಾದರೆ ಆತಂಕ ಪಡುವವರ ಸಂಖ್ಯೆ ಹೆಚ್ಚಿರುವವರ ಗುಂಪು ಮತ್ತೊಂದೆಡೆ. ಈ ಎರಡೂ ಗುಂಪುಗಳ ಬೆನ್ನ ಹಿಂದೆ ಕಾರ್ಯನಿರತ ಪೋಷಕ ಪಡೆ.

ಈಗ ಶುರುವಾಗುತ್ತೆ ನೋಡಿ, ಚೌಕಾಬಾರ ಆಟ, ಮುಂಜಾನೆ ಐದು ಘಂಟೆಗೆ ಮಕ್ಕಳಿಗಿಂತ ಬೇಗ ಎದ್ದು ಬ್ರಷ್ ಮಾಡಿ ರೆಡಿಯಾಗುವ ಅಪ್ಪ ಮಕ್ಕಳನ್ನು ಮೊದಲ ಬ್ಯಾಚ್‌ನ ಟ್ಯೂಷನ್‌ಗೆ ಬಿಟ್ಟು ಅವರು ಬರುವವರೆಗೆ ಇವರಂತೆಯೇ ಬಂದಿರುವವರೊಂದಿಗೆ ಒಂದಷ್ಟು ಕಾಲ ಹರಟೆ ಹೊಡೆದು, ಕಾಲ ಕಳೆದು ಮತ್ತೆ ಶಾಲೆಗೊ, ಕಾಲೇಜಿಗೊ ಅವರನ್ನು ಬಿಟ್ಟು ತಮ್ಮ ಎಂದಿನ ಕೆಲಸಕ್ಕೆ ತೆರಳುವ ಅಪ್ಪಂದಿರಿಗೆ ಇನ್ನು ವಿರಾಮ.

ಬೆಳ್ಳಂಬೆಳಿಗ್ಗೆ ಮಗಳಿಗೆ ತಿಂಡಿ ಮಾಡಿ ಕಾಫಿ ಕೊಟ್ಟು ಬೈ ಬೈ ಹೇಳಿದ ಅಮ್ಮನ ಕನಸು ನನಸಾಗಬೇಕು. ಅವರು, ಪಿ.ಯು.ಸಿ., ಸಿ.ಇ.ಟಿ.ಯಲ್ಲಿ ಅತೀಹೆಚ್ಚು ಅಂಕಗಳಿಸಬೇಕು. ದುಡ್ಡು ಕೊಡದೆ ಸರ್ಕಾರಿ ಕೋಟಾದಲ್ಲಿ ಮೆರಿಟ್ ಸೀಟ್ ಸಿಗಬೇಕು. ಮಕ್ಕಳಿಗೆ ವೈದ್ಯರೊ, ಸಾಫ್ಟ್ವೇರ್ ಇಂಜಿನಿಯರೊ ಆಗುವ ತಾಂತ್ರಿಕ ಶಿಕ್ಷಣದ ಅವಕಾಶಗಳ ಹೆಬ್ಬಾಗಿಲು ತೆರೆಯಬೇಕು. ಅದಕ್ಕಾಗಿ ಈ ಪರೀಕ್ಷೆ ವಿದ್ಯಾರ್ಥಿಗಳಷ್ಟೇ ಪೋಷಕರಿಗೂ ಮುಖ್ಯ. ಇನ್ನು ಮಕ್ಕಳು ತಮ್ಮ ಪಾಲಕರು ತಮ್ಮ ಬಗ್ಗೆ ಕಂಡ ಕನಸುಗಳನ್ನು ನನಸಾಗಿಸಲಿಕ್ಕೆ ವರ್ಷ ಪೂರ್ತಿ ಕಷ್ಟ ಪಟ್ಟು ಓದಿ ಜೀರ್ಣಿಸಿ ಕೊಂಡಿದ್ದನ್ನು ಪರೀಕ್ಷೆಯಲ್ಲಿ ಸಮರ್ಥವಾಗಿ ಬಿಂಬಿಸಬೇಕು.

ಒಂದು ಕಾಲದಲ್ಲಿ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಓದಬೇಕು ಎಂಬ ಗಾದೆ ಮಾತಿತ್ತು! ಈಗ ಓದಿ ಓದಿ ರ್‍ಯಾಂಕ್ ಬರುವ ವಿದ್ಯಾರ್ಥಿಗಳಿಗೆ ಚಿಕ್ಕ ವಯಸ್ಸಿಗೆ ದಪ್ಪ ಕನ್ನಡಕದ ಫ್ರೇಮು ಬಂದು ಕಣ್ಣಿನ ಮೇಲೆ ಕುಳಿತಿರುತ್ತದೆ. ಈಗ ಗಾದೆ ಬದಲಾಗಿದೆ. ಇಷ್ಟೆಲ್ಲಾ ನಿರೀಕ್ಷೆಗಳನ್ನು ಸಾಕಾರಗೊಳಿಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಪ್ರಾರಂಭವಾಗಿವೆ. ಪಿಯುಸಿ ಮೌಲ್ಯಮಾಪನಗಳು ಶುರುವಾಗಿವೆ. ಮಾರ್ಚ್ ತಿಂಗಳ ಈ ಪರ್ವ ಕಾಲದಲ್ಲಿ ಪರಸ್ಪರ ಸಂಧಿಸುತ್ತವೆ. ಫಲಿತಾಂಶ ಮಾತ್ರ ಬದುಕನ್ನು ಬದಲಿಸುತ್ತದೆ.

ಈ ಪರೀಕ್ಷಾ ಸಮಯದಲ್ಲಿ ಮಕ್ಕಳು ಹೇಗಿರಬೇಕು, ಅವರ ತಯಾರಿಯ ಬಗೆ ಹೇಗೆ? ಪರೀಕ್ಷೆಯ ಆತಂಕಗಳನ್ನು ಹೇಗೆ ದೂರ ಮಾಡಿಕೊಳ್ಳಬೇಕು? ಅತೀ ಹೆಚ್ಚು ಅಂಕ ಗಳಿಸುವ ಮಾರ್ಗೋಪಾಯಗಳೇನು? – ಹೀಗೆ ತಿಳಿಸಿಕೊಡುವ ವ್ಯಕ್ತಿತ್ವ ವಿಕಸನ ಶಿಬಿರಗಳಂತೂ ಜೋರೋ ಜೋರು. ತಮ್ಮ ಮಕ್ಕಳು ಧೈರ್ಯವಾಗಿ ಪರೀಕ್ಷೆಯನ್ನೆದುರಿಸಲಿ ಎಂಬ ಉದ್ದೇಶಕ್ಕಾಗಿ ನಾನಾ ಸರ್ಕಸ್ಸುಗಳನ್ನು ಮಾಡುವ ಪಾಲಕರಿಗೆ, ನಮ್ಮ ಶಾಲಾ ಕಾಲೇಜಿಗೆ ಅತೀ ಹೆಚ್ಚು ಫಲಿತಾಂಶ ಬಂದರೆ ಮುಂದಿನ ವರ್ಷದ ಪ್ರವೇಶಾತಿಗೆ ಬೇಡಿಕೆ ಸೃಷ್ಟಿಸಬಹುದೆಂಬ ನಿರೀಕ್ಷೆ ಇಟ್ಟುಕೊಂಡಿರುವ ಶಿಕ್ಷಣ ಸಂಸ್ಥೆಗಳಿಗೆ ಸರಕಾರಿ ಸಂಸ್ಥೆಗಳ ಮಕ್ಕಳೂ ಕೂಡ ಯಾರಿಗೇನೂ ಕಡಿಮೆ ಇಲ್ಲ ಎನ್ನುವಂತೆ ಹುಬ್ಬೇರಿಸಲು ಕಾದು ಕುಳಿತ ಶಿಕ್ಷಕ ವೃಂದಕ್ಕೆ ಇದು ಪರೀಕ್ಷೆ ನಿರೀಕ್ಷೆಗಳ ಪರ್ವ ಕಾಲ.

ಇಂಥಾ ಪರೀಕ್ಷಾ ಸಮಯಕ್ಕೆ ಸಕಲ ರೀತಿಯಲ್ಲೂ ಸಜ್ಜಾದ ವಿದ್ಯಾರ್ಥಿ ಸಮುದಾಯ ಪಠ್ಯಗಳನ್ನು ಓದಿಕೊಂಡಷ್ಟೇ ಚೆನ್ನಾಗಿ ಆತ್ಮಸ್ಥೈರ್ಯ ಹೆಚ್ಚಿಸಿಕೊಳ್ಳಬೇಕು. ಅತಿಯಾದ ನಿರೀಕ್ಷೆಗಳನ್ನಿಟ್ಟುಕೊಂಡು ಓದುವ ಭರದಲ್ಲಿ ಎಡವಿ ಬೀಳಬಾರದು ಒಮ್ಮೆ ಓದಿದ ವಿಷಯ ತನ್ನ ನೆನಪಿನಲ್ಲಿ ಉಳಿಯುವಂತೆ ಮನನ ಮಾಡಿ ಕೊಳ್ಳಬೇಕು. ಸಾಧ್ಯವಾದರೆ ಪಠಣ, ಇಷ್ಟವಿದ್ದರೆ ಧ್ಯಾನ, ಈ ಮೂರು ನಿಮ್ಮನ್ನು ಸೇರಿಕೊಂಡರೆ ಆಗ ನೋಡಿ ಕವಿ ಕುವೆಂಪು ಅವರು ಹೇಳುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಒಬ್ಬ ಗೌರವಾನ್ವಿತ ತಪಸ್ವಿ ನೀವಾಗುತ್ತೀರಿ!.

ಧ್ಯಾನವೆಂದರೆ ಶೂನ್ಯದಲ್ಲಿ ಅಕ್ಷರಗಳ ಉತ್ಪತ್ತಿಯನ್ನು ಧೇನಿಸುವುದರ ಅರ್ಥದಲ್ಲಿ ತೆಗೆದುಕೊಳ್ಳಬೇಕು. ಚಿಕ್ಕ ಚಿಕ್ಕ ಟಿಪ್ಪಣಿಗಳನ್ನು, ಪಾಯಿಂಟ್ಸ್‌ಗಳನ್ನು, ನೋಟ್ಸ್‌ಗಳನ್ನು, ಪ್ರಾಬ್ಲಂ ಸಾಲ್ವೇಷನ್‌ಗಳನ್ನು, ಗುರುತು ಹಾಕಿಕೊಂಡು ಮಲಗುವಾಗ, ಎದ್ದಾಗ ಸುಮ್ಮನೆ ಕಣ್ಣಾಡಿಸುತ್ತಿರಬೇಕು. ಗೊತ್ತಾಗದ ವಿಷಯಗಳನ್ನು ಸ್ನೇಹಿತರಲ್ಲಿಯೊ, ಅಧ್ಯಾಪಕರಲ್ಲಿಯೊ ಕೂಡಲೇ ಕ್ಲಾರಿಫೈ ಮಾಡಿಕೊಳ್ಳಬೇಕು. ಅನವಶ್ಯಕವಾಗಿ ಮನೆಗಳಲ್ಲಿ, ಸ್ನೇಹಿತರಲ್ಲಿ, ಅಣ್ಣ ತಮ್ಮ ಅಕ್ಕ ತಂಗಿಯರ ಮೇಲೆ ಕೂಗಾಡಿ ಮುನಿಸಿಕೊಳ್ಳಬಾರದು. ಪರೀಕ್ಷೆಗೆ ಹದಗೊಂಡ ಮನಸ್ಸನ್ನು ಪ್ರಕ್ಷುಬ್ಧಗೊಳಿಸಬಾರದು. ಈ ಪರೀಕ್ಷಾ ಸಮಯದಲ್ಲಿ ಮುಲಾಜಿಲ್ಲದೆ ಟಿ.ವಿ., ಇಂಟರ್‌ನೆಟ್ಟು, ವಾಟ್ಸ್‌ಆಪ್‌ಗಳು, ಮೆಸೇಜಿಂಗ್‌ಗಳು, ಚಾಟಿಂಗ್‌ಗಳನ್ನು ನಿಲ್ಲಿಸಬೇಕು. ವರ್ಷಪೂರ್ತಿ ಟೈಂ ವೇಸ್ಟ್ ಮಾಡಿ ಕೊನೆಯ ಗುಟುಕಿನಲ್ಲಿರುವ ವಿದ್ಯಾರ್ಥಿಗಳು ಕೂಡ ಬುದ್ಧಿವಂತ ಮಕ್ಕಳ ಸ್ನೇಹ ಮಾಡಿಕೊಂಡು, ಅವರ ಮನೆಯವರನ್ನು ಒಪ್ಪಿಸಿ ಅವರ ಮನೆಗಳಲ್ಲಿ ಅವರ ಜೊತೆಯೇ ಓದಿಕೊಳ್ಳಲು



> “ ಪರೀಕ್ಷಾ ಸಮಯಕ್ಕೆ ಸಕಲ ರೀತಿಯಲ್ಲೂ ಸಜ್ಜಾದ ವಿದ್ಯಾರ್ಥಿ ಸಮುದಾಯ ಪಠ್ಯಗಳನ್ನು ಓದಿಕೊಂಡಷ್ಟೇ ಚೆನ್ನಾಗಿ ಆತ್ಮಸ್ಥೈರ್ಯ ಹೆಚ್ಚಿಸಿಕೊಳ್ಳಬೇಕು. ಅತಿಯಾದ ನಿರೀಕ್ಷೆಗಳನ್ನಿಟ್ಟುಕೊಂಡು ಓದುವ ಭರದಲ್ಲಿ ಎಡವಿ ಬೀಳಬಾರದು ಒಮ್ಮೆ ಓದಿದ ವಿಷಯ ನನಗೆ ನೆನಪಿನಲ್ಲಿ ಉಳಿಯುವಂತೆ ಮನನ ಮಾಡಿಕೊಳ್ಳಬೇಕು. ಸಾಧ್ಯವಾದರೆ ಪಠಣ, ಇಷ್ಟವಿದ್ದರೆ ಧ್ಯಾನ, ಈ ಮೂರು ನಿಮ್ಮನ್ನು ಸೇರಿಕೊಂಡರೆ ಆಗ ನೋಡಿ ಕವಿ ಕುವೆಂಪು ಅವರು ಹೇಳುವ ಪ್ರತಿ ವಿದ್ಯಾರ್ಥಿಯೂ ಒಬ್ಬ ಗೌರವಾನ್ವಿತ ತಪಸ್ವಿ ನೀವಾಗುತ್ತೀರಿ!.

ಕೂರಬೇಕು. ಕಾರಣ ಈಗಲು ಕಾಲ ಮಿಂಚಿಲ್ಲ ಇತರೆ ವಿಷಯಗಳಿಗೆ ತಲೆಕೆಡಿಸಿಕೊಳ್ಳದೆ, ಆಕರ್ಷಣೆಗಳಿಂದ ಪಾರಾಗಿ ಕಣ್ಣಿಗೆ ಪಟ್ಟಿ ಕಟ್ಟಿದ ಕುದುರೆಯಂತೆ ಕೆಲಸ ಮಾಡಿದರೆ ಯಶಸ್ಸು ಖಂಡಿತ ನಿಮ್ಮ ಕೈ ಸೇರುತ್ತದೆ.

ಇಷ್ಟೆಲ್ಲ ಸನ್ನದ್ಧರಾದರೂ ಪರೀಕ್ಷಾ ಕೊಠಡಿಗಳ ಬಗೆಗೆ ನೀವು ಜಾಗೃತರಾಗಬೇಕು. ಅದು ನಿಮಗೆ ಗೊತ್ತಿಲ್ಲದ ವಿಷಯ. ಇಲ್ಲಿವರೆಗೆ ನಡೆದ ಪರೀಕ್ಷೆಗಳ ಸ್ವರೂಪದಲ್ಲಿ ಅದು ಇರುವುದಿಲ್ಲ ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳಲು ರೆಡಿಯಾಗಬೇಕು. ಈಗಾಗಲೇ ಮೊದಲ ಪ್ರಯತ್ನವಾಗಿ ಸೂಕ್ಷ್ಮ ಪರೀಕ್ಷಾ ಕೇಂದ್ರಗಳಲ್ಲಿ ಸಿ.ಸಿ.ಟಿ.ವಿ. ಅಳವಡಿಸಿ ಬೆಂಗಳೂರಿನಿಂದಲೇ ಮಾನಿಟರಿಂಗ್ ಮಾಡಲು ಸಿದ್ಧತೆಗಳಾಗಿವೆ. ಹಾಗಂತ ನೀವು ಕಾಪಿ ಹೊಡೆಯುತ್ತೀರಿ ನಕಲು ಮಾಡುತ್ತೀರಿ ಎಂದರ್ಥ ವಲ್ಲ. ಪರೀಕ್ಷೆಯ ಸಿಸ್ಟಂ ನಿಮಗೆ ಗೊತ್ತಿರಲಿ ಎಂಬ ಆಶಯವಷ್ಟೆ ಕಾರಣ ನಿಮ್ಮ ಎಚ್ಚರಿಕೆಗಾಗಿ ಚಿಕ್ಕ ಘಟನೆಯೊಂದನ್ನು ಹೇಳಿ ಬಿಡುತ್ತೇನೆ.

ಒಮ್ಮೆ ಮೈಸೂರು ಜಿಲ್ಲೆ ಟಿ.ನರಸೀಪುರದ ಖಾಸಗೀ ಕಾಲೇಜಿನಲ್ಲಿ ನಾನು ಪರೀಕ್ಷಾ ಕೇಂದ್ರದ ಸಹ ಮುಖ್ಯ ಅಧೀಕ್ಷಕನಾಗಿದ್ದೆ. ವಿದ್ಯಾರ್ಥಿಗಳಿಬ್ಬರು ನಕಲು ಮಾಡುತ್ತಿದ್ದ ಆರೋಪದ ಮೇಲೆ ಸಿಕ್ಕಿಬಿದ್ದಿದ್ದರು. ಗಣಿತದ ವಿಷಯದ ಪರೀಕ್ಷೆಯದು. ಜಾಗೃತ ದಳದ ಸದಸ್ಯರ ಕೈಗೆ ಸಿಕ್ಕಿ ಬಿದ್ದ ಅವರಿಬ್ಬರಲ್ಲಿ. ಒಬ್ಬ ಹುಡುಗ ಘಟಿಂಗ, ತುಂಬಾ ಚೀಟಿ ತಂದಿದ್ದ. ಮತ್ತೊಬ್ಬ ಆ ಕಾಲೇಜಿನ ರ್‍ಯಾಂಕ್ ಸ್ಟೂಡೆಂಟ್. ತುಂಬಾ ಮೌನಿ, ಮುಗ್ಧ, ಬುದ್ಧಿವಂತ, ಆದರೆ ಅವನು ಮಾಡಿದ ಒಂದೇ ಒಂದು ತಪ್ಪೇನು ಗೊತ್ತೆ? ಅವನು ಕಾಪಿ ಮಾಡುತ್ತಿರಲಿಲ್ಲ; ಚೀಟಿ ತಂದಿರಲಿಲ್ಲ. ಆದರೆ ಅವನಿಗೆ ಅರಿವಿಲ್ಲದಂತೆ ದಿನಪತ್ರಿಕೆಗಳಲ್ಲಿ ಬರುವ ಗಣಿತದ ವಿಷಯದ ಕಾಲಂ ಅವನ ಜಾಮಿಟ್ರಿ ಬಾಕ್ಸಿನಲ್ಲಿತ್ತು. ಅದು ಆವತ್ತಿನ ಪರೀಕ್ಷೆಗೆ ತಾಳೆಯಾಗುತ್ತಿತ್ತು. ಆದರೆ ಆತ ಅದನ್ನು ನೋಡಿಯೂ ಇರಲಿಲ್ಲ. ಮನೆಯಿಂದ ಬರುವಾಗ ಜಾಮಿಟ್ರಿ ಬಾಕ್ಸಿನಲ್ಲಿರುವ ಆ ಪೇಪರ್ ಕಟಿಂಗ್ಸ್ ತೆಗೆದು ಎಸೆಯಲು ಮರೆತು ಬಿಟ್ಟಿದ್ದ. ಆ ಕಾಲೇಜಿನ ಇಡೀ ಉಪನ್ಯಾಸಕ ವೃಂದ ಆ ಹುಡುಗನನ್ನು ಬಿಟ್ಟು ಬಿಡಿ ಎಂದು ಗೋಗರೆಯಿತು. ದುರಾದೃಷ್ಟ ಇಂಥ ಬುದ್ಧಿವಂತನ ಜೊತೆಗೆ ಘಟಿಂಗನೊಬ್ಬ ಸಿಕ್ಕಿಬಿದ್ದಿದ್ದ ಕಾರಣ ಜಾಗೃತ ದಳದ ಸದಸ್ಯರು ಇದಕ್ಕೆ ಒಪ್ಪಲಿಲ್ಲ ಬಿಟ್ಟರೆ ಇಬ್ಬರನ್ನೂ ಬಿಡಬೇಕಾಗುತ್ತದೆ. ಹಾಗಾಗಿ ಇಬ್ಬರನ್ನು ಡಿಬಾರ್ ಮಾಡಿ ಎಂದು ಡಿಬಾರ್ ಮಾಡಿದರು.

ಮಾರನೆಯ ದಿನಪತ್ರಿಕೆಗಳಲ್ಲಿ ಸುದ್ದಿಯಾಯಿತು. ಆ ಘಟಿಂಗ ಏನೂ ನಡೆದೇ ಇಲ್ಲವೆಂಬಂತೆ ಹೊರನಡೆದ. ಮುಗ್ಧನಾದ ಮತ್ತೊಬ್ಬ ಸಿಸ್ಟಂ ಬಗ್ಗೆ ಗೊತ್ತಿಲ್ಲದೆ ಮೈಮರೆವೆಯ ಕಾರಣಕ್ಕೆ ಡಿಬಾರ್ ಆದ. ಇದಾದ ಸುಮಾರು ಏಳೆಂಟು ತಿಂಗಳ ನಂತರ ಆ ಕಾಲೇಜಿನ ಪ್ರಾಂಶುಪಾಲರು ಸಿಕ್ಕರು. ಹಾಗೇ ಲೋಕಾಭಿರಾಮವಾಗಿ ಮಾತನಾಡುತ್ತ ಈ ಪ್ರಸಂಗ ಚರ್ಚೆಗೆ ಬಂತು. ಆಗ ಅವರು ಹೇಳಿದರು ಓ ಅದ ಸಾರ್ ನಿಮಗೆ ಗೊತ್ತಾಗಲಿಲ್ಲ ಅಲ್ವ? ಆ ಹುಡುಗ ಆತ್ಮಹತ್ಯೆ ಮಾಡಿಕೊಂಡು ಬಿಟ್ಟ ಸಾರ್–ಅಂದು ಬಿಟ್ಟರು. ನಾನು ದಿಗ್ಮೂಢ ನಾದೆ. ಬಾಯಿಂದ ಮಾತು ಹೊರಡಲಿಲ್ಲ ಕಣ್ಣಲ್ಲಿ ನೀರು ಜಿನುಗುತ್ತಿತ್ತು. ವಿದ್ಯೆಯನ್ನೇ ನಂಬಿ ಬದುಕ ಬೇಕಿದ್ದ ಕುಟುಂಬದಿಂದ ಬಂದ ಹುಡುಗ ಅದು. ಇದಕ್ಕೆ ಯಾರನ್ನ ಹೊಣೆ ಮಾಡುತ್ತೀರಿ?

ಅದಕ್ಕೇ ಹೇಳಿದ್ದು, ಪರೀಕ್ಷೆಗೆ ಹೊರಡುವ ಮುನ್ನ ಪೆನ್ನು, ಪೆನ್ಸಿಲು, ಸ್ಕೇಲು, ರಬ್ಬರು, ಲಾಗ್ ಬುಕ್ ಮುಖ್ಯವಾಗಿ ಪ್ರವೇಶಪತ್ರ ಇವುಗಳನ್ನುಳಿದು ಬೇರೆ ಏನಾದರೂ ಇದೆಯೇ ಎಂಬುದನ್ನು ಖಚಿತಪಡಿಸಿ ಕೊಂಡೇ ಪರೀಕ್ಷೆಗೆ ತೆರಳಿ, ಅನಗತ್ಯ ಒತ್ತಡಗಳ ನಡುವೆ ಅವಶ್ಯಕತೆಗಳನ್ನು ಮರೆಯಬೇಡಿ.

ಅಪ್ಪ, ಅಮ್ಮನ ಕಾಲಿಗೆ ನಮಸ್ಕಾರ ಮಾಡಿ ಹೊರಡಿ, ವಿನಾಕಾರಣ ಭಾವುಕರಾಗಬೇಡಿ. ಕಾರಣ, ಈ ಭಾವುಕತೆಯ ವಿಷಯಕ್ಕೇನೆ ಪರೀಕ್ಷಾ ಹಾಲ್‌ನಲ್ಲಿ ಸಿನಿಮಾ ಹೀರೋ ಆದ ಹುಡುಗನ ಕಥೆಯೊಂದು ನಡೆದುಬಿಟ್ಟಿತು.

ಒಮ್ಮೆ ಬೆಳಗಾವಿ ಜಿಲ್ಲೆ ಗೋಕಾಕ್‌ನಲ್ಲಿ ಸಿಇಟಿ ಪರೀಕ್ಷೆ ನಡೆದಿತ್ತು, ಒಬ್ಬ ಹುಡುಗ ಮುಷ್ಠಿ ಬಿಗಿ ಹಿಡಿದು ಬರೆಯುತ್ತಿದ್ದ, ನಾನು ವಿಶೇಷ ಜಾಗೃತ ದಳದ ಸದಸ್ಯನಾಗಿ ಗೋಕಾಕಿಗೆ ಹೋಗಿದ್ದೆ. ಆ ಹುಡುಗನನ್ನು ನಿಲ್ಲಿಸಿ ಕೈಯ್ಯಲ್ಲೇನಿದೆ ತೋರಿಸು ಎಂದೆ. ಎಷ್ಟು ಹೇಳಿದರೂ ಅವನು ತೋರಿಸಲಿಲ್ಲ. ಅವನು ಬೆಂಗಾಳಿ, ಪಶ್ಚಿಮ ಬಂಗಾಳದಿಂದ ಪರೀಕ್ಷೆ ಬರೆಯಲು ಬಂದಿದ್ದ. ಅವನು ಕಾಪಿ ಮಾಡುತ್ತಿರಲಿಲ್ಲ; ತನ್ನ ಎಡಗೈಯ್ಯ ಮುಷ್ಠಿಯನ್ನು ಉತ್ತರ ಪತ್ರಿಕೆಯ ಮೇಲೆ ಪದೇಪದೆ ಮುಟ್ಟಿಸುತ್ತಿದ್ದ.

ನಾನು ಕುತೂಹಲಕ್ಕಾಗಿ ಕೈಯಲ್ಲೇನಿದೆ ಎಂದು ಕೇಳಿದೆ, ಅವನು ಕೈಬಿಚ್ಚಿ ತೋರಿಸಲು ಹಠ ಮಾಡಿದ. ನನಗೆ ಕೋಪ ಬಂತು. ಪೋಲೀಸ್‌ರನ್ನ ಕರೆದೆ, ಕೈಯ್ಯಲ್ಲೇನಿದೆ ಬಿಚ್ಚಿಸಿ ಎಂದು ಹೇಳಿದೆ. ಅವನಿಗೆ ಹೊಡೆದು ಬಡಿದು ಮಾಡಿದರೂ ಅವನು ಕೈ ಬಿಚ್ಚಲಿಲ್ಲ. ಎಲ್ಲರಿಗೂ ಅನುಮಾನ ಶುರುವಾಯಿತು. ಕೈಯ್ಯಲ್ಲೇನಿದೆ ನೋಡಲೇ ಬೇಕೆಂಬ ಕುತೂಹಲ ಹೆಚ್ಚಾಯಿತು.

ಅಷ್ಟೊತ್ತಿಗಾಗಲೇ ಅವನ ಕೈ ಬಿಚ್ಚಿಸುವ ಎಳೆದಾಟದಲ್ಲಿ ಆ ಹುಡುಗನ ಕೈ ಬೆರಳಿನ ಚರ್ಮ ಕಿತ್ತು ರಕ್ತ ಬರುತ್ತಿತ್ತು. ಅವನು ಅದಾವುದನ್ನು ಲೆಕ್ಕಿಸುತ್ತಿರಲಿಲ್ಲ. ಹುಡುಗ ಸುಂದರವಾಗಿದ್ದ. ಅಷ್ಟರಲ್ಲಿ ಅದೇ ಕಾಲೇಜಿನ ಬಯಾಲಜಿ ಮೇಡಂ ಒಬ್ಬರು ಬಂದರು. ತಾಯಿ ಹೃದಯದ ಹೆಣ್ಣುಮಗಳು ಆಕೆ. ರಾಕ್ಷಸರಂತಿದ್ದ ನಮ್ಮನ್ನು ಕನ್ವಿನ್ಸ್ ಮಾಡಿದಳು. ಆ ಹುಡುಗನ ತಲೆ ನೇವರಿಸಿದಳು. ತಾಯಿ ಪ್ರೀತಿಯಿಂದ ಆ ಹುಡುಗನ ಮೈ ದಡವಿ ಮಾತಾಡಿಸಿದಳು, ಅವನ ಕೈ ಬಿಚ್ಚಿಸಿದಳು. ನೋಡಿದರೆ ಕೈಯ್ಯಲ್ಲಿ ಪೇಪರಿನಿಂದ ಸುತ್ತಿದ ಉಂಡೆಯಾಕಾರದ ಪೇಪರಿನ ಮುದುರಿತ್ತು. ನಾವು ಮಹಾನ್ ಸಾಧನೆ ಮಾಡಿದವರ ಹಾಗೆ ಒಂದೊಂದಾಗಿ ಆ ಪೇಪರ್ ತುಂಡುಗಳನ್ನು ತೆಗೆದು ನೋಡಿದೆವು. ಕಡೆಯದಾದ ಪೇಪರ್ ತುಂಡಿನಲ್ಲಿ ಒಂದು ಚಿಟಿಕೆ ಕುಂಕುಮ ಇತ್ತು. ಇದನ್ನೇಕೆ ತೋರಿಸಲಿಲ್ಲವೆಂದು ಕೇಳಿದೆವು. ಅದಕ್ಕವನು ಉತ್ತರಿಸಿದ 'ಏ ಮೇರಿ ಮಾ ಕ ಆಶೀರ್ವಾದ ಹೈ, ಏ ಮಾತಾ ದುರ್ಗಾ ಕೀ ಪ್ರಸಾದ್ ಹೇ, ಮೇರಿ ಮಾ ನೆ ಕಹಾ ಹೇ, ಕಿ, ಕಿಸಿಕೋ ಮತ್ ದಿಖಾನ್' ಸಾರ್ ಎಂದ.

ತಾಯ್ತನದ ಭಾವುಕತೆಯನ್ನು ಪಶ್ಚಿಮ ಬಂಗಾಳದಿಂದ ಗೋಕಾಕಿನವರೆಗೂ ತಂದ ಆ ಹುಡುಗನನ್ನು ತಬ್ಬಿಕೊಂಡು ಹಣೆಗೊಂದು ಮುತ್ತಿಟ್ಟು ಕಿವಿಯಲ್ಲಿ ಅವನಿಗೆ ಮಾತ್ರ ಕೇಳುವ ಹಾಗೆ Sorry ಎಂದೆ. ಮುಂದೆ ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣಿಸಿ ನೋಡುವ ಮಾನವೀಯತೆಯ ಪಾಠವನ್ನು ಆ ಹುಡುಗನಿಂದ ಕಲಿತೆ. ಯಾರದೋ ಮಗನನ್ನು ತಬ್ಬಿ ಸಂತೈಸಿದ ಆ ಬಯಾಲಜಿ ಲೆಕ್ಚರರ್‌ಗೆ ಕಣ್ಣಲ್ಲೇ ವಂದಿಸಿ ಹೊರಟೆ. ಬದುಕು ಜಟಕಾಬಂಡಿ ವಿಧಿ ಅದರ ಸಾಹೇಬ ಪರೀಕ್ಷೆಗೋ? ನಿರೀಕ್ಷೆಗೋ? ಎಲ್ಲಿಗೆ ಪಯಣ?

ಕುದುರೆ ನೀನು ಓಡುವುದಷ್ಟೇ ನಿನ್ನ ಕೆಲಸ, ತೆರೆಯ ಮೇಲೆ ಫಲಿತಾಂಶ. ಎಲ್ಲರೂ ಗೆಲ್ಲಬೇಕೆಂಬುದೇ ಹೆತ್ತವರ ಹರಕೆ, ಶಿಕ್ಷಕರ ಬಯಕೆ. ಅವರ ನಿರೀಕ್ಷೆಗಳಿಗೆ ಈಗ ಪರೀಕ್ಷೆ ಬಂದಿದೆ. ಗೆದ್ದು ನೋಡಿಯೇ ಬಿಡೋಣ. ಅವರ ಮುಖದಲ್ಲೊಂದು ಚಿಕ್ಕ ಸಂತೋಷದ ದೊಡ್ಡ ನಗು ಕಾಣುವಂತೆ ಮಾಡೋಣ! ಏನಂತೀರಿ?

ಪಡಿತರ ವಿತರಕರ ಕಮಿಷನ್ ಬಾಕಿ ಬಿಡುಗಡೆಗೆ ಆಗ್ರಹ

ಮೈಸೂರು,ಮಾ.24(ಎಂಟಿವೈ)– ಪಡಿತರ ವಿತರಕರಿಗೆ ಬಾಕಿ ಉಳಿಸಿಕೊಂಡಿರುವ 2024ರ ಮಾರ್ಚ್ ತಿಂಗಳ ಕಮಿಷನ್ ಕೂಡಲೇ ಬಿಡುಗಡೆ ಮಾಡುವಂತೆ ಕರ್ನಾಟಕ ರಾಜ್ಯ ಪಡಿತರ ವಿತರಕರ ಕ್ಷೇಮಾಭಿವೃದ್ಧಿ ಸಂಘ ಅಧ್ಯಕ್ಷ ಕೃಷ್ಣ ಡಿ.ನಾಯ್ಕ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಪಡಿತರ ವಿತರಕರ ಸಮಸ್ಯೆಗೆ ಸ್ಪಂದಿಸುವ ನಿಟ್ಟಿನಲ್ಲಿ ಕ್ವಿಂಟಾಲ್‌ಗೆ 124 ರೂ.ನಿಂದ 150 ರೂ. ಕಮಿಷನ್ ಹೆಚ್ಚಳ ಮಾಡಿತು. ಆದರೂ ಕೆಲವು ಸಮಸ್ಯೆಗಳಿಗೆ ವಿತರಕರು ತುತ್ತಾಗಿದ್ದು, ಬೇಡಿಕೆ ಈಡೇರಿಸಿ ಪಡಿತರ ವಿತರಕರ ಹಿತ ಕಾಯಲು ಮುಂದಾಗಬೇಕು. ಸೂಕ್ತ ಸಮಯಕ್ಕೆ ಕಮೀಷನ್ ಬಿಡುಗಡೆ ಆಗದೇ ಪಡಿತರ ವಿತರಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬೆಂಗಳೂರು ನಗರದ ಪಡಿತರ ವಿತರಕರಿಗೆ 2022–23ರ ಮಾರ್ಚ್ ತಿಂಗಳ ಕಮಿಷನ್ ಬಿಡುಗಡೆ ಮಾಡಿಲ್ಲ. ಐದು ವರ್ಷಗಳಿಂದ ಇಲಾಖೆಯ ಆದೇಶದಂತೆ ಕೆಲಸ ನಿರ್ವಹಿಸಿರುವ ಪಡಿತರ ವಿತರಕರಿಗೆ ಬರಬೇಕಾಗಿರುವ ಇಕೆವೈಸಿ ಹಣ ನೀಡಿಲ್ಲ. ಹೀಗಾಗಿ ಸರ್ಕಾರ ಈ ಬಗ್ಗೆ ಕೂಡಲೇ ಗಮನ ಹರಿಸಬೇಕು ಎಂದು ಒತ್ತಾಯಿಸಿದರು.

ಈ ಹಿಂದೆ ಪಡಿತರ ವಿತರಕರು ನಿಧನರಾದರೆ, ಅವರ ಕುಟುಂಬದ ಸದಸ್ಯರಿಗೆ



ಪಡಿತರ ವಿತರಣೆಯ ಜವಾಬ್ದಾರಿ ನೀಡಲಾಗುತ್ತಿತ್ತು. ಆದರೆ, 2016ರ ಅಧಿನಿಯಮ ತಿದ್ದುಪಡಿ ತಂದು 60 ವರ್ಷ ಮೇಲ್ಪಟ್ಟ ಪಡಿತರ ವಿತರಕರು ಮೃತಪಟ್ಟರೆ ಅವರ ಕುಟುಂಬದ ಸದಸ್ಯರಿಗೆ ಲೈಸನ್ಸ್ ನೀಡುವುದಿಲ್ಲ. ಮೃತಪಟ್ಟ ವಿತರಕರ ಪತ್ನಿಗೆ 40 ವರ್ಷ ದಾಟಿದ್ದರೆ ಲೈಸನ್ಸ್ ನೀಡುವುದಿಲ್ಲ ಎಂದು ನಿಯಮ ರೂಪಿಸಲಾಗಿದೆ. ಇದರಿಂದ ಸಾಕಷ್ಟು ವಿತರಕರಿಗೆ ತೊಂದರೆಯಾ ಗುತ್ತಿದೆ. ಈ ಹಿನ್ನೆಲೆಯಲ್ಲಿ ಹಿಂದೆ ಇದ್ದ ನಿಯಮವನ್ನೇ ಮುಂದುವರೆಸಬೇಕು ಎಂದು ಕೋರಿದರು.

ರಾಜ್ಯದ ಪಡಿತರ ಚೀಟಿದಾರರಿಗೆ 10 ಕೆಜಿ ಅಕ್ಕಿ ಜೊತೆಗೆ ಎಣ್ಣೆ, ಬೇಳೆ, ಸಕ್ಕರೆ, ಉಪ್ಪು ಇನ್ನಿತರ ಪದಾರ್ಥ ವಿತರಿಸಬೇಕು. ರಾಜ್ಯ ಪಡಿತರ ಕ್ಷೇಮಾವೃದ್ಧಿ ಸಂಘ ಪಡಿತರ ಚೀಟಿದಾರರಿಗೆ ಡಿಬಿಟಿ ನಿಲ್ಲಿಸಿ, ಇತರೆ ದಿನ ಬಳಕೆ ವಸ್ತುಗಳನ್ನು ನೀಡಬೇಕೆಂದು ಸರ್ಕಾರಕ್ಕೆ ಈ ಹಿಂದೆ ಹಲವಾರು ಬಾರಿ ಮನವಿ ಮಾಡಿತ್ತು. ಇದರ ಫಲವಾಗಿ ಹಾಗೂ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರ ಸಹಕಾರ ದಿಂದಾಗಿ ಫೆ. 18 ರಿಂದ ಪ್ರತಿ ವ್ಯಕ್ತಿಗೆ 10 ಕೆಜಿ ಅಕ್ಕಿ ನೀಡುವುದಾಗಿ ಸರ್ಕಾರ ಘೋಷಣೆ ಮಾಡಿದೆ. ಹೀಗಾಗಿ ಕೇಂದ್ರ ಸಚಿವ ಹಾಗೂ ಸಿಎಂ ಸಿದ್ದರಾಮಯ್ಯ ಅವರಿಗೆ ಧನ್ಯವಾದ ಸಲ್ಲಿಸುವುದಾಗಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಪಡಿತರ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳಾದ ಡಿ.ಜಿ. ಶಿವಾನಂದಪ್ಪ, ಎಂ.ಕೆ.ರಾಮಚಂದ್ರ, ಎನ್.ತಿಪ್ಪೇಸ್ವಾಮಿ, ಸಂತೋಷ್, ಕೆ.ಎನ್. ವಿಜಯ ಕುಮಾರ್ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಕುಂಬಾರಕೊಪ್ಪಲು ಮಾರಮ್ಮನ ಜಾತ್ರಾ ಮಹೋತ್ಸವ ಸಂಭ್ರಮ


ಕುಂಬಾರಕೊಪ್ಪಲಿನ ಮಾರಮ್ಮ ದೇವಿ ಜಾತ್ರೆ ಸೋಮವಾರ ವಿಜೃಂಭಣೆಯಿಂದ ನಡೆಯಿತು

ಮೈಸೂರು, ಮಾ.24(ಎಂಕೆ)– ಮೈಸೂರಿನ ಕುಂಬಾರಕೊಪ್ಪಲು ಮಾರಮ್ಮ ದೇವಿಯ ಜಾತ್ರಾ ಮಹೋತ್ಸವ ಅಪಾರ ಭಕ್ತ ಸಮೂಹದ ನಡುವೆ ವಿಜೃಂಭಣೆಯಿಂದ ನೆರವೇರಿತು.

ಸೋಮವಾರ ಸಂಜೆ 4 ಗಂಟೆಯಿಂದ ಆರಂಭವಾದ ಶಕ್ತಿ ದೇವಿಯ ನಾನಾ ಬಗೆಯ ಪೂಜಾ ಕೈಂಕರ್ಯದೊಂದಿಗೆ ಮಹದೇಶ್ವರಸ್ವಾಮಿ ದೇವಾಲಯದಿಂದ ಸಸಿಮಾರಮ್ಮ(ಕಳಸ)ನ ಹೊತ್ತ ಮೆರವಣಿಗೆ ಮಾರಮ್ಮನ ಗುಡಿಯವರೆಗೂ ಶ್ರದ್ಧಾ–ಭಕ್ತಿಯಿಂದ ನಡೆಯಿತು.

ಕಳಸ ಹೊತ್ತ ದೇವಸ್ಥಾನ ಗುಡ್ಡಪ್ಪನವರಾದ ಬಸವರಾಜು ಅವರೊಂದಿಗೆ ಸಾವಿರಾರು ಭಕ್ತರು ಮೆರವಣಿಗೆಯುದ್ದಕ್ಕೂ ಕೈಯ್ಯಲ್ಲಿ ಪಂಜು ಹಿಡಿದು, ಬಾಯಿಗೆ ಬೀಗ ಹಾಕಿಸಿಕೊಂಡು ಹರಕೆ ಸಲ್ಲಿಸಿ, ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಕುಂಬಾರಕೊಪ್ಪಲಿನ ಪ್ರಮುಖ ಬೀದಿಗಳಲ್ಲಿ ಸಾಗಿದ ಮೆರವಣಿಗೆಯಲ್ಲಿ ವಾದ್ಯ ಮೇಳದ ನಾದಕ್ಕೆ ಯುವಕರು ಕುಣಿದು ಸಂಭ್ರಮಿಸಿದರು.

ದೇವಸ್ಥಾನದ ಆವರಣದಲ್ಲಿ ನೆರೆದಿದ್ದ ಅಪಾರ ಭಕ್ತ ಸಮೂಹವನ್ನು ನಿಯಂತ್ರಿಸುವಲ್ಲಿ ಪೊಲೀಸರು ಹರಸಾಹಸಪಡುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿತ್ತು. ದೇವಿಯ ಕಳಸ ಹೊತ್ತ ಗುಡ್ಡಪ್ಪನವರು ಗುಡಿಯ ಮುಂದೆ ಬರುತ್ತಿದ್ದಂತೆ ಈಡುಗಾಯಿ ಒಡೆದು ನಮಿಸಲಾಯಿತು. ಅಲ್ಲದೆ ಭಕ್ತರಿಗೆ ಮಂಗಳಾರತಿ, ತೀರ್ಥ ನೀಡಿ, ದೇವಿಯ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು.

ಈ ವೇಳೆ ಕುಂಬಾರಕೊಪ್ಪಲು ಗ್ರಾಮದ ಮುಖಂಡರಾದ ಶಿವಪ್ಪ, ಮಹದೇವಣ್ಣ, ರಾಜೇಂದ್ರ, ಕುಮಾರ್, ಕೆ.ಟಿ.ಚೆಲುವೇಗೌಡ, ನಗರ ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಮಹದೇವ್, ಮನೋಹರ್, ಕುಂಬಾರ ಕೊಪ್ಪಲು ಅಭ್ಯುದಯ ಸಂಘದ ಪದಾಧಿಕಾರಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು.

ಜಿಲ್ಲಾ ನ್ಯಾಯಾಲಯಗಳ ವಕೀಲರ ಸಂಘಗಳಲ್ಲಿ

ಮಹಿಳಾ ವಕೀಲರಿಗೆ ಮೀಸಲಾತಿ ನೀಡಲು ಸುಪ್ರೀಂಕೋರ್ಟ್ ಆದೇಶ

ನವದೆಹಲಿ, ಮಾ.24– ಕರ್ನಾಟಕದ ಜಿಲ್ಲಾ ನ್ಯಾಯಾಲಯಗಳ ವಕೀಲರ ಸಂಘಗಳ ಕಾರ್ಯಕಾರಿ ಸಮಿತಿಯಲ್ಲಿ ಶೇ. 30 ರಷ್ಟು ಸ್ಥಾನಗಳೊಂದಿಗೆ ಖಜಾಂಚಿ ಹುದ್ದೆಯನ್ನು ಮಹಿಳೆಯರಿಗೆ ಮೀಸಲಿರಿಸಿ ಸುಪ್ರೀಂಕೋರ್ಟ್ ಸೋಮವಾರ ಆದೇಶ ಪ್ರಕಟಿಸಿದೆ.

ಬೆಂಗಳೂರಿನ ವಕೀಲರ ಸಂಘದ ಪ್ರಕರಣದಲ್ಲಿ ಹೊರಡಿಸಲಾದ ನಿರ್ದೇಶನವು ಕರ್ನಾಟಕದ ಜಿಲ್ಲಾ ನ್ಯಾಯಾಲಯಗಳ ಪ್ರಕರಣದಂತೆಯೇ ಅನ್ವಯಿಸುತ್ತದೆ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರ ಪೀಠ ಹೇಳಿದೆ.

ಜನವರಿ 24 ರಂದು ಬೆಂಗಳೂರಿನ ವಕೀಲರ ಸಂಘದ ಪ್ರಕರಣದಲ್ಲಿ ನ್ಯಾಯಾಲಯವು ಮಹಿಳಾ ವಕೀಲರಿಗೆ ಶೇ.33 ರಷ್ಟು ಸ್ಥಾನಗಳನ್ನು ಕಾಯ್ದಿರಿಸಿದ್ದ ಪ್ರಕರಣದ ಮಾದರಿಯ ನಿರ್ದೇಶನವನ್ನು ಬೆಂಗಳೂರಿನ ಮಹಿಳಾ ವಕೀಲರು ಕೋರಿದ್ದರು. ಈ ಮನವಿಯನ್ನು ಪುರಸ್ಕರಿಸಿ ಸುಪ್ರೀಂಕೋರ್ಟ್ ಆದೇಶ ನೀಡಿದೆ.

ಮಹಿಳಾ ವಕೀಲರ ಪರ ಹಾಜರಿದ್ದ ವಕೀಲರು, ಹೈಕೋರ್ಟ್ ಬಾರ್ ಅಸೋಸಿಯೇಷನ್‌ಗೆ ಚುನಾವಣೆ ನಡೆದು, ಖಜಾಂಚಿ ಹುದ್ದೆಯನ್ನು ಮಹಿಳಾ ಅಭ್ಯರ್ಥಿ ಗೆದ್ದಿದ್ದಾರೆ ಎಂದು ಹೇಳಿದರು.

ವಿವಿಧ ಚುನಾಯಿತ ವಕೀಲರ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ ನೀಡಲು ಇದು ಸಮಯ ಎಂದು ಹೇಳಿರುವ ನ್ಯಾಯಾಲಯ, 142 ನೇ ವಿಧಿಯ ಅಡಿಯಲ್ಲಿ ತನ್ನ ಅಧಿಕಾರವನ್ನು ಬಳಸಿಕೊಂಡಿತು ಮತ್ತು ಸಂಘದ ಮಹಿಳಾ ಅಭ್ಯರ್ಥಿಗಳಿಗೆ ಸ್ಥಾನಗಳನ್ನು ನಿಗದಿಪಡಿಸುವ ಜ್ಞಾಪಕ ಪತ್ರ ಮತ್ತು ಉಪ–ಕಾನೂನುಗಳಲ್ಲಿ ಯಾವುದೇ ಸ್ಪಷ್ಟ ನಿಬಂಧನೆಗಳಿಲ್ಲ ಎಂದು ಹೇಳಿದೆ.

ಬೆಂಗಳೂರಿನ ವಕೀಲರ ಸಂಘದ ಆಡಳಿತ ಮಂಡಳಿಯಲ್ಲಿ ಮಹಿಳಾ ವಕೀಲರ ಸಾಕಷ್ಟು ಪ್ರಾತಿನಿಧ್ಯವನ್ನು ಪರಿಗಣಿಸಲು ಸುಪ್ರೀಂಕೋರ್ಟ್, ಸಮಿತಿ ಮತ್ತು ರಿಟರ್ನಿಂಗ್ ಅಧಿಕಾರಿಗೆ ಆದೇಶಿಸಿತ್ತು, ಇದರಿಂದಾಗಿ ಮಂಡಳಿಯ ಚುನಾಯಿತ ಸದಸ್ಯರಲ್ಲಿ ಕನಿಷ್ಠ 30 ಪ್ರತಿಶತ 10 ವರ್ಷಗಳ ಅಭ್ಯಾಸ ಅನುಭವ ಹೊಂದಿರುವ ಮಹಿಳಾ ಅಭ್ಯರ್ಥಿಗಳು ಎಂದು ಖಚಿತಪಡಿಸಿಕೊಳ್ಳಬಹುದು.

ದೆಹಲಿ ಹೈಕೋರ್ಟ್ ಬಾರ್ ಅಸೋಸಿಯೇಷನ್ ಪ್ರಕರಣದಲ್ಲಿ ಮಹಿಳಾ ಮೀಸಲಾತಿ ಕುರಿತು ಹೊರಡಿಸಲಾದ ನಿರ್ದೇಶನಗಳನ್ನು ಜಾರಿಗೆ ತರುವಂತೆ ಮಹಿಳಾ ವಕೀಲರು ಸಲ್ಲಿಸಿದ ಪ್ರಮುಖ ಅರ್ಜಿಯಲ್ಲಿ ಕೋರಲಾಗಿತ್ತು ಕಳೆದ ವರ್ಷ ನ್ಯಾಯಾಲಯವು ಖಜಾಂಚಿ ಹುದ್ದೆ ಸೇರಿದಂತೆ ಮಹಿಳಾ ವಕೀಲರಿಗೆ ಸ್ಥಾನಗಳನ್ನು ಕಾಯ್ದಿರಿಸುವಂತೆ ನಿರ್ದೇಶಿಸಿತ್ತು.

ಒಳಮೀಸಲಾತಿ: ವಾರದೊಳಗೆ ಮಧ್ಯಂತರ ವರದಿ: ಗೃಹ ಸಚಿವ ಡಾ.ಜಿ. ಪರಮೇಶ್ವರ್

ಬೆಂಗಳೂರು, ಮಾ.24– ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಸಮಿತಿಯು ಒಂದು ವಾರದೊಳಗೆ ಒಳಮೀಸಲಾತಿಯ ಮಧ್ಯಂತರ ವರದಿ ಸಲ್ಲಿಸುವುದಾಗಿ ತಿಳಿಸಿದ್ದು, ತದನಂತರ ಮುಖ್ಯಮಂತ್ರಿ ಅವರು ಚರ್ಚಿಸಿ ಶೀಘ್ರದಲ್ಲಿ ಜಾರಿಗೆ ಕ್ರಮ ಕೈಗೊಳ್ಳಲಿದ್ದಾರೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ತಿಳಿಸಿದರು.



ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿ ಕಲ್ಪಿಸುವ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಜಾರಿಗೊಳಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲೂ ಇದನ್ನು ಹೇಳಿದ್ದೇವೆ. ವೈಜ್ಞಾನಿಕ ದತ್ತಾಂಶದಿಂದ ನಿರ್ದಿಷ್ಟವಾದ ಅಭಿಪ್ರಾಯ ಬರುತ್ತದೆ ಎಂದು ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಸಭೆಯಲ್ಲಿ ತಿಳಿಸಿದ್ದಾರೆ ಎಂದರು.

ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾತನಾಡಿ, ಒಳ ಮೀಸಲಾತಿ ಸಂಬಂಧ ಮುಖ್ಯಮಂತ್ರಿ ಯವರ ಅಧ್ಯಕ್ಷತೆಯಲ್ಲಿ ಹಿರಿಯ ಸಚಿವರ ಜೊತೆ ಸುದೀರ್ಘ ಸಭೆ ನಡೆಸಲಾಗಿದೆ. ಒಳಮೀಸಲಾತಿ ಜಾರಿಗಾಗಿ ಈವರೆಗೂ ಆಗಿರುವ ಪ್ರಗತಿಯ ಮಾಹಿತಿಯನ್ನು ನಾಗಮೋಹನ್ ದಾಸ್ ಸಮಿತಿ ನೀಡಿದೆ ಆದಷ್ಟು ಬೇಗ ಒಳಮೀಸಲಾತಿ ಜಾರಿಗೆ ಪ್ರಸ್ತಾಪ ಇಟ್ಟಿದ್ದಾರೆ ಎಂದು ತಿಳಿಸಿದರು.

ವೈಜ್ಞಾನಿಕ ದತ್ತಾಂಶ ಸೇರಿದಂತೆ ಎಲ್ಲ ವಿಷಯಗಳನ್ನು ಚರ್ಚೆ ಮಾಡಿ, ನಮ್ಮ ಗಮನಕ್ಕೆ ತಂದಿದ್ದಾರೆ. ಒಳ ಮೀಸಲಾತಿ ಜಾರಿ ಮಾಡಬೇಕು ಎಂಬುದು ನಮ್ಮ ಸರ್ಕಾರದ ಬದ್ಧತೆ. ಯಾವುದೇ ಸಮುದಾಯವೂ ಇಷ್ಟೇ ಪರ್ಸೆಂಟ್ ಮೀಸಲಾತಿ ಕೊಡುವಂತೆ ಬೇಡಿಕೆ ಇಟ್ಟಿಲ್ಲ. ಬಹುತೇಕ ಎಲ್ಲಾ ಇಲಾಖೆಗಳು ದತ್ತಾಂಶ ನೀಡಿವೆ. ಸುಪ್ರೀಂ ಕೋರ್ಟ್ ಮಾರ್ಗಸೂಚಿ ಪ್ರಕಾರ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಒಳ ಮೀಸಲಾತಿ ಜಾರಿ ಆಗುವವರೆಗೂ ಬ್ಯಾಕ್‌ಲಾಗ್ ಹುದ್ದೆ, ಮುಂಬಡ್ತಿ, ನೇಮಕಾತಿ ಯಾವುದನ್ನೂ ಮಾಡುವುದಿಲ್ಲ ಎಂದು ಅವರು ಹೇಳಿದರು. ಈ ಸಂದರ್ಭದಲ್ಲಿ ಸಚಿವರಾದ ಕೆ.ಎಚ್. ಮುನಿಯಪ್ಪ ಆರ್.ಬಿ.ತಿಮ್ಮಾಪುರ್, ಶಿವರಾಜ್ ತಂಗಡಗಿ ಮತ್ತು ಇತರರು ಇದ್ದರು.

ಡಿಸಿಎಂ ಏಕನಾಥ್ ಶಿಂಧೆ ಕುರಿತು ಆಕ್ಷೇಪಾರ್ಹ ಹೇಳಿಕೆ

ಕಾಮಿಡಿಯನ್ ಕುನಾಲ್ ಕಾಮ್ರಾ, 40 ಶಿವಸೇನೆ ಕಾರ್ಯಕರ್ತರ ವಿರುದ್ಧ ಕೇಸ್ ದಾಖಲು

ಮುಂಬೈ: ಕಾಮಿಡಿ ಶೋ ವೇಳೆ ಮಹಾರಾಷ್ಟ್ರ ಡಿಸಿಎಂ ಏಕನಾಥ್ ಶಿಂಧೆ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿದ ಆರೋಪದ ಹಿನ್ನೆಲೆಯಲ್ಲಿ ಸ್ಟ್ಯಾಂಡ್ ಅಪ್ ಕಾಮಿಡಿಯನ್ ಕುನಾಲ್ ಕಾಮ್ರಾ ವಿರುದ್ಧ ಮುಂಬೈ ಪೊಲೀಸರು ಸೋಮವಾರ ಎಫ್‌ಐಆರ್ ದಾಖಲಿಸಿದ್ದಾರೆ.

ಕುನಾಲ್ ಕಾಮ್ರಾ 'ಗದ್ದರ್' ಪ್ರದರ್ಶನ ಚಿತ್ರೀಕರಿಸಿದ ಸ್ಟುಡಿಯೋ ಇರುವ ಮುಂಬೈನ ಖಾರ್ ಪ್ರದೇಶದ ಹೋಟೆಲ್‌ನ್ನು ಧ್ವಂಸಗೊಳಿಸಿದ ಹಿನ್ನೆಲೆಯಲ್ಲಿ ಸುಮಾರು 40 ಶಿವಸೇನೆ ಕಾರ್ಯಕರ್ತರ ವಿರುದ್ಧವೂ ಪೊಲೀಸರು ಕೇಸ್ ದಾಖಲಿಸಿದ್ದಾರೆ.

ಹ್ಯಾಬಿಟಾಟ್ ಸ್ಟುಡಿಯೋ ಇರುವ ಯೂನಿಕಾಂಟಿನೆಂಟಲ್ ಹೋಟೆಲ್ ಹೊರಗೆ ಭಾನುವಾರ ರಾತ್ರಿ ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದ ಶಿವಸೇನೆ ಕಾರ್ಯಕರ್ತರು , ಸ್ಟುಡಿಯೋ ಮತ್ತು ಹೋಟೆಲ್ ಆವರಣವನ್ನು ಧ್ವಂಸ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾಮ್ರಾ ಅವರ ಕಾರ್ಯಕ್ರಮ ನಡೆದ ಹ್ಯಾಬಿಟಾಟ್ ಸ್ಟುಡಿಯೋದಲ್ಲಿ ವಿವಾದಾತ್ಮಕ 'ಇಂಡಿಯಾಸ್ ಗಾಟ್ ಲ್ಯಾಟೆಂಟ್' ಶೋ ಕೂಡಾ ಚಿತ್ರೀಕರಿಸಲಾಗಿತ್ತು.

ಶಿಂಧೆ ವಿರುದ್ಧ ಕಾಮ್ರಾ ಆಕ್ಷೇಪಾರ್ಹಕಾರಿ ಪದಗಳನ್ನು ಬಳಸಿದ್ದಾರೆಂದು ತೋರಿಸುವ ವೀಡಿಯೊ ವೈರಲ್ ಆದ ನಂತರ, ಶಿವಸೇನಾ ಶಾಸಕ ಮುರ್ಜಿ ಪಟೇಲ್ ಪೊಲೀಸರಿಗೆ ದೂರು ದಾಖಲಿಸಿದ್ದಾರೆ.

ಚಿಂತಾಮಣಿಯಲ್ಲಿ ಕರ್ನಾಟಕ ಕೆಂಪೇಗೌಡ ಒಕ್ಕಲಿಗರ ಸಂಘ ಉದ್ಘಾಟನೆ

ಬೆಂಗಳೂರು ನಿರ್ಮಾಣಕ್ಕಾಗಿ ಆತ್ಮಾರ್ಪಣೆ ಮಾಡಿಕೊಂಡ ಕೆಂಪೇಗೌಡರ ಸೊಸೆ ಲಕ್ಷ್ಮೀದೇವಿ

ಶಾಸಕ ಜಿ.ಟಿ.ದೇವೇಗೌಡರ ಸ್ಮರಣೆ


ಕರ್ನಾಟಕ ಕೆಂಪೇಗೌಡ ಒಕ್ಕಲಿಗರ ಸಂಘದ ಉದ್ಘಾಟನೆಯನ್ನು ಶಾಸಕ ಜಿ.ಟಿ.ದೇವೇಗೌಡರು ನೆರವೇರಿಸಿದರು.

ಮೈಸೂರು,ಮಾ.24(ಪಿಎಂ)– ಬೆಂಗಳೂರು ಕೋಟೆಯ ದಕ್ಷಿಣ ಭಾಗದ ಹೆಬ್ಬಾಗಿಲು ದೃಢವಾಗಿ ನಿಲ್ಲಲು ಕೆಂಪೇಗೌಡರ ಸೊಸೆ ಶ್ರೀಮತಿ ಲಕ್ಷ್ಮೀದೇವಿಯು ಆತ್ಮಾರ್ಪಣೆ (ಪ್ರಾಣಾರ್ಪಣೆ) ಮಾಡಿಕೊಳ್ಳುವ ಮೂಲಕ ಬೆಂಗಳೂರು ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದರು ಎಂದು ಶಾಸಕ ಜಿ.ಟಿ.ದೇವೇಗೌಡರು ಸ್ಮರಿಸಿದರು.

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಬೂರಗಮಾಕಲಹಳ್ಳಿಯ ಶ್ರೀನಿವಾಸಪುರ ರಸ್ತೆಯಲ್ಲಿರುವ ಶ್ರೀ ಸೀತಾರಾಮ ಕಲ್ಯಾಣ ಮಂಟಪದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಕರ್ನಾಟಕ ಕೆಂಪೇಗೌಡ ಒಕ್ಕಲಿಗರ ಸಂಘ ಉದ್ಘಾಟಿಸಿದ ಅವರು, ವಿಜಯನಗರ ಸಾಮ್ರಾಟರಾದ ಅಚ್ಯುತರಾಯರು ಕೆಂಪೇಗೌಡರಿಗೆ ನವ ನಗರವೊಂದನ್ನು ಕಟ್ಟಿಕೊಳ್ಳಬಹುದೆಂದು ಅನುಮತಿಯನ್ನು ನೀಡಿದರು. ಇದರ ಜೊತೆಗೆ ಈ ನವನಗರ ನಿರ್ಮಾಣ ಮತ್ತು ನಿರ್ವಹಣೆಗಾಗಿ ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ 12 ಹೋಬಳಿಗಳಿಂದ ಬರುತ್ತಿದ್ದ ಕಂದಾಯದ ವರಮಾನವನ್ನು ಬಳಸಿಕೊಳ್ಳ ಬಹುದೆಂದು ಆಜ್ಞೆಯನ್ನು ಹೊರಡಿಸಿದರು ಎಂದರು.

ಒಂದೆರಡು ತಿಂಗಳು ಕಳೆಯುತ್ತಿದ್ದಂತೆಯೇ ಯಲಹಂಕದ ದಕ್ಷಿಣ ದಿಕ್ಕಿನಲ್ಲಿರುವ ದಟ್ಟಾರಣ್ಯ ಪ್ರದೇಶದಲ್ಲಿ ಬೃಹತ್ ನಗರವನ್ನು ನಿರ್ಮಿಸಲು ಮುಂದಾದ ಕೆಂಪೇಗೌಡರು, ಅದರಂತೆ ಕಾಡನ್ನು ಕಡಿದು ಭದ್ರವಾದ ಕೋಟೆ ಕಟ್ಟಿಸಲು ಪ್ರಾರಂಭಿಸಿದರು. ನಾಲ್ಕು ದಿಕ್ಕಿನಲ್ಲಿ ನಾಲ್ಕು ದಿಡ್ಡಿ ಬಾಗಿಲುಗಳನ್ನು ನಿಲ್ಲಿಸಲು ಶುರು ಮಾಡಿದ ಕೆಂಪೇಗೌಡರಿಗೆ ದಕ್ಷಿಣದ ಬಾಗಿಲು ನಿಲ್ಲದೇ ಪದೇ ಪದೆ ಬೀಳುವ ಮೂಲಕ ತಲೆನೋವಾಗಿ ಪರಿಣಮಿಸಿತು. ಇದರಿಂದ ಪ್ರಭು ಕೆಂಪೇಗೌಡರು ಚಿಂತಾಕ್ರಾಂತರಾಗಿ ಜ್ಯೋತಿಷಿ ಮೊರೆ ಹೋದರು. ಆಗ ತುಂಬು ಗರ್ಭಿಣಿಯೊಬ್ಬಳನ್ನು ಬಲಿ ಕೊಟ್ಟರೆ ಕೋಟೆಯ ದಿಡ್ಡಿ ಬಾಗಿಲು ನಿಲ್ಲುತ್ತದೆ ಎಂದು ಮಾರ್ಗೋಪಾಯ ದೊರೆಯಿತು. ಬಲಿ ಕೊಟ್ಟು ನಾನು ಯಾವ ನರಕಕ್ಕೆ ಹೋಗಲಿ ಎಂದು ಕೆಂಪೇಗೌಡರು ಚಿಂತಾಕ್ರಾಂತರಾದರು ಎಂದು ವಿವರಿಸಿದರು.

ಜ್ಯೋತಿಷ್ಯನ ಈ ಮಾತು ಗರ್ಭಿಣಿ ಸೊಸೆ ಲಕ್ಷ್ಮೀದೇವಿಯ ಮನಸ್ಸಿಗೆ ನಾಟಿತು. ದೃಢ ನಿರ್ಧಾರ ಕೈಗೊಂಡ ಲಕ್ಷ್ಮೀದೇವಿಯು ಅಲ್ಲಿಗೆ ಹೋಗಿ ಆತ್ಮಾರ್ಪಣೆ ಮಾಡಿಕೊಂಡಳು. ಅಂದಿನಿಂದ ಆಕೆಯನ್ನು ಮಹಾತ್ಯಾಗಿ ಲಕ್ಷ್ಮೀದೇವಿ ಎಂದು ಜನತೆ ಪೂಜಿಸತೊಡಗಿದರು ಎಂದರು.

ಕೆರೆಗಳನ್ನು ನಿರ್ಮಿಸಿದ ಕೆಂಪೇಗೌಡರು: ನಾಡಪ್ರಭು ಕೆಂಪೇಗೌಡರು ನಗರ ನಿರ್ಮಾಣ ನಂತರ ವಾಸಿಸಲು ಬರುವ ಜನರಿಗೆ ಕುಡಿಯಲು ನೀರಿಗಾಗಿ ಕೆಂಪಾಂಬುದಿಕೆರೆ, ಗಿಡ್ಡೆಗೌಡರ ಕೆರೆ, ಕಾರಂಜಿಕೆರೆ, ಜಕ್ಕರಾಯನಕೆರೆ, ಕೆಂಪಾಪುರ ಅಗ್ರಹಾರದ ಕೆರೆ, ಮಾವಳ್ಳಿ ಸಿದ್ದಾಪುರ ಕೆರೆ ಇತ್ಯಾದಿ ಕೆರೆಗಳನ್ನು ನಿರ್ಮಿಸಿ ಜನರಿಗೆ ಅನುಕೂಲ ಮಾಡಿಕೊಟ್ಟರು ಎಂದು ತಿಳಿಸಿದರು.

ದೇವಾಲಯಗಳ ನಿರ್ಮಾಣ: ನಗರದ ಪ್ರಸಿದ್ಧ ಶ್ರೀ ಗವಿ ಗಂಗಾಧರೇಶ್ವರ ಗುಡಿ, ಶ್ರೀ ಬಸವೇಶ್ವರ ಗುಡಿ, ಶ್ರೀ ದೊಡ್ಡ ವಿಘ್ನೇಶ್ವರ ಗುಡಿ, ಶ್ರೀ ಹನುಮಂತ ದೇವರ ಗುಡಿ, ಚೆನ್ನಿಗರಾಯ ಸ್ವಾಮಿ ಗುಡಿಗಳನ್ನು ನಿರ್ಮಿಸಿ ಜನರಲ್ಲಿ ದೈವ ಭಾವನೆ ಸಹ ಮೂಡಿಸಿದರು ಎಂದು ಹೇಳಿದರು.


ಪೇಟೆಗಳ ನಿರ್ಮಾಣ: ನಗರದ ಮುಂದಿನ ಬೆಳವಣಿಗೆಯ ದೃಷ್ಟಿ ಇಟ್ಟುಕೊಂಡು ಕೆಂಪೇಗೌಡರು ಆಯಾಯ ಕುಲಕಸುಬು ಕಲಿತಿದ್ದ ಜನರಿಗೆ ವ್ಯಾಪಾರ ಮಾಡಲು ಅನುಕೂಲವಾಗುವಂತೆ ಬಿನ್ನಿಪೇಟೆ, ಚಿಕ್ಕಪೇಟೆ, ಬಳೆಪೇಟೆ, ಅಕ್ಕಿಪೇಟೆ, ಮಾಮೂಲ್ ಪೇಟೆ, ಗಾಣಿಗರ ಪೇಟೆ, ನಗರ್ತಪೇಟೆ, ಕಾಟನ್ ಪೇಟೆ, ಸುಲ್ತಾನ್ ಪೇಟೆ, ತಿಗಳರಪೇಟೆ, ಕುಂಬಾರ ಪೇಟೆ, ಗೊಲ್ಲರಪೇಟೆ ಇತ್ಯಾದಿ ಪೇಟೆಗಳನ್ನು ನಿರ್ಮಿಸಿಕೊಟ್ಟು ಅವರು ಜೀವನ ಸಾಗಿಸಲು ದಾರಿ ಮಾಡಿಕೊಟ್ಟರು. ಕೆಂಪೇಗೌಡರ ವಂಶಸ್ಥರು ಬ್ರಾಹ್ಮಣರಿಗೆ ದಾನ ಮಾಡುವ ಮೂಲಕ ಕೊಡುಗೈ ದಾನಿಗಳಾದರು. ಅಲ್ಲದೆ, ಲಿಂಗಾಯಿತ ಮಠಮಾನ್ಯಗಳಿಗೂ ದಾನ–ಧರ್ಮವನ್ನು ಕೆಂಪೇಗೌಡರ ರಾಜವಂಶಸ್ಥರು ಮಾಡಿದರು ಎಂದು ಸ್ಮರಿಸಿದರು.

2005ರಲ್ಲಿ ಮೈಸೂರಿನಲ್ಲಿ ನಡೆದ ಕೆಂಪೇಗೌಡರ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ಹಾಗೂ ಅನೇಕ ರಾಜಕೀಯ ಗಣ್ಯರ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭ ಮಾಡುವಂತೆ ನೆರೆದಿದ್ದ ಸಹಸ್ರಾರು ಜನರ ಬೆಂಬಲದೊಂದಿಗೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಅದರಂತೆ ಕೆಂಪೇಗೌಡರ ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭ ಮಾಡಿದ್ದು, ಇದರ ಸದುಪಯೋಗ ಪಡೆದುಕೊಳ್ಳುವಂತೆ ಸಮುದಾಯದವರಲ್ಲಿ ಮನವಿ ಮಾಡಿದರು.

ಆದಿಚುಂಚನಗಿರಿ ಚಿಕ್ಕಬಳ್ಳಾಪುರ ಶಾಖಾ ಮಠದ ಶ್ರೀ ಮಂಗಳಾನಂದನಾಥ ಸ್ವಾಮೀಜಿ, ಶಿಡ್ಲಘಟ್ಟ ಕ್ಷೇತ್ರದ ಮುಖಂಡರಾದ ಸೀಕಲ್ ರಾಮಚಂದ್ರಗೌಡರು, ಹಿರಿಯ ವಕೀಲ ಕೆ.ವಿ.ಶಂಕರಪ್ಪ, ಸಂಘದ ರಾಜ್ಯಾಧ್ಯಕ್ಷ ಜಿ.ಎಸ್.ರಘು, ಮುಖಂಡರಾದ ರವೀಂದ್ರಗೌಡ, ಎಸ್.ವಿ.ಆನಂದ್‌ಗೌಡ, ಸಂಘದ ಪದಾಧಿಕಾರಿಗಳು, ಸಮಾಜದ ಮುಖಂಡರು ಹಾಜರಿದ್ದರು.

ಭಾರತೀಯ ಸಂಸ್ಕೃತಿ–ಪರಂಪರೆ, ಸಾಹಿತ್ಯ ಸುಧೆ ಮನೆ ಮನೆಗೆ ತಲುಪಿಸುವ ಕಾರ್ಯವಾಗಲಿ

ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ಪ್ರಮುಖ್ ಡಾ.ವಿ.ರಂಗನಾಥ್


ಕೂಡನಹಳ್ಳಿಯ ಫಾರಂ ಹೌಸ್‌ವೊಂದರಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಪುನಶ್ಚೇತನ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಮಾ.24(ಪಿಎಂ)– ಭಾರತೀಯ ಸಂಸ್ಕೃತಿ–ಪರಂಪರೆ, ಸಾಹಿತ್ಯದ ಸುಧೆಯನ್ನು ಪ್ರತಿ ಮನೆಮನೆಗೂ ತಲುಪಿಸುವ ಕಾರ್ಯವಾಗಬೇಕು ಎಂದು ನಿವೃತ್ತ ತಹಸೀಲ್ದಾರ್, ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ಪ್ರಮುಖ್ ಹಾಗೂ ಕರ್ನಾಟಕ ಪ್ರಾಂತ್ಯ ಸಂಪರ್ಕ ಪ್ರಮುಖ್ ಆದ ಡಾ.ವಿ.ರಂಗನಾಥ್ ಹೇಳಿದರು.

ಮೈಸೂರು ಹೊರವಲಯದ ಕೂಡನಹಳ್ಳಿಯ ಉಮೇಶ್ ಪ್ರಸಾದ್ ಎಂಬುವರ ಫಾರು ಹೌಸ್‌ನಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ (ಅಭಾಸಾಪ) ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ 'ಪುನಶ್ಚೇತನ ಕಾರ್ಯಾಗಾರ' ಉದ್ಘಾಟಿಸಿ ಅವರು ಮಾತನಾಡಿದರು.

ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು ವಲಯದಲ್ಲಿ ಹೆಸರು ಪಡೆದಿದೆ. ನಮ್ಮ ಭಾರತೀಯ ಸಂಸ್ಕೃತಿ–ಪರಂಪರೆ, ಸಾಹಿತ್ಯದ ಸುಧೆಯನ್ನು ಪ್ರತಿ ಮನೆಮನೆಗೂ ತಲುಪಿಸುವ ನಿಟ್ಟಿನಲ್ಲಿ ಕಾರ್ಯಕರ್ತರ ಪಾತ್ರ ಅತ್ಯಂತ ಮುಖ್ಯವಾದುದು. ಮುಖ್ಯವಾಗಿ ರಾಷ್ಟ್ರಾಭಿಮಾನವನ್ನು ಜಾಗೃತಿಗೊಳಿಸುವ ನಿಟ್ಟಿನಲ್ಲೂ ಪ್ರತಿಕೂಟದಲ್ಲಿ ತಿಂಗಳಿಗೊಮ್ಮೆ ಕಾರ್ಯಕ್ರಮ ನಡೆಸುತ್ತಿದ್ದು, ಸರಾಸರಿ 20ರಿಂದ 25 ಜನರು ಭಾಗಿಯಾಗುವ ಅವಕಾಶವಿದೆ. ಈ ಮೂಲಕ ವ್ಯಕ್ತಿತ್ವ ವಿಕಸನದ ಜೊತೆಗೆ ಭಾರತೀಯ ಸಾಹಿತ್ಯವನ್ನು ಮುನ್ನೆಲೆಗೆ ತರುವ ಕೆಲಸವನ್ನು ಮಾಡಬೇಕಿದೆ ಎಂದರು.

ಮುಂಬರುವ ವರ್ಷದಲ್ಲಿ ಪ್ರಸ್ತುತವಿರುವ ಸಾಹಿತ್ಯಕೂಟ 13ರಿಂದ 20ಕ್ಕೆ ಏರಿಸಬೇಕು. ಜೊತೆಗೆ ಕಾರ್ಯಕ್ರಮಗಳ ಆಯೋಜನೆ, ತರಬೇತಿ, ನೂತನ ಸದಸ್ಯರ ನೋಂದಣಿ ಪ್ರಕ್ರಿಯೆಗಳ ಬಗ್ಗೆಯೂ ಗಮನ ನೀಡಬೇಕಿದೆ. ಭಾರತೀಯ ಸಂಸ್ಕೃತಿ–ಸಾಹಿತ್ಯವನ್ನು ಬೆಳೆಸುವ ನಿಟ್ಟಿನಲ್ಲಿ ಯೋಜನಾಬದ್ಧ ಕಾರ್ಯಕ್ರಮವನ್ನು ರೂಪಿಸುವ ಜವಾಬ್ದಾರಿಯು ಈಗ ನಮ್ಮ ಮುಂದಿದೆ. ಎಲ್ಲರೂ ಈ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡು ಪರಸ್ಪರ ಚರ್ಚಿಸಿ ಮುಂದೆ ಸಾಗೋಣ ಎಂದು ಆಶಯ ವ್ಯಕ್ತಪಡಿಸಿದರು.

ಮೈಸೂರು ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ಅಧಿಕಾರಿ ಹಾಗೂ ಅಭಾಸಾಪ ಜಿಲ್ಲಾ ಸಮಿತಿಯ ಅಧ್ಯಕ್ಷ ಎಸ್. ಸುಬ್ರಹ್ಮಣ್ಯ ಮಾತನಾಡಿ, ಇಲ್ಲಿ ಪ್ರತಿಕೂಟದಲ್ಲೂ ಸಮಾಜಮುಖಿ ಕಾರ್ಯಕ್ರಮಗಳು ನಡೆಯುತ್ತಿವೆ. ಅವುಗಳ ದಾಖಲೀಕರಣ ಈ ಸಂದರ್ಭದಲ್ಲಿ ಮುಖ್ಯ. ಈ ನಿಟ್ಟಿನಲ್ಲಿ 'ಜಿಲ್ಲಾ ವಾರ್ತಾ ಪತ್ರೆ' ವಿನೂತನ ಪತ್ರಿಕೆ ಪ್ರಕಟಿಸಲಾಗುತ್ತಿದ್ದು, ಈಗಾಗಲೇ ಎರಡು ಸಂಚಿಕೆಗಳು ಬಂದಿವೆ. ಕಾರ್ಯಕರ್ತರು ತಮ್ಮ ಕಾರ್ಯಕ್ರಮಗಳನ್ನು ಚಿತ್ರ ಸಮೇತ ನಮಗೆ ವರದಿ ನೀಡಬೇಕೆಂದು ತಿಳಿಸಿದರು.

ಅಭಾಸಾಪ ಉಪಾಧ್ಯಕ್ಷ ಡಿ.ಕೆ.ಜಗದೀಶ್, ಪ್ರಾಂತ ಕಾರ್ಯಕ್ರಮ ಅನುವರ್ತಿಯಾದ ಕೆ.ರಘುಶೆಟ್ಟಿ, ಮಹಿಳಾ ಪ್ರಕಾರದ ಸಂಚಾಲಕಿ ರೂಪಶ್ರೀ ನಾಗರಾಜ್, ಮಕ್ಕಳ ಪ್ರಕಾರದ ಸಂಚಾಲಕಿ ಕಾತ್ಯಾಯಿನಿ, ನಂಜನಗೂಡು ತಾಲೂಕು ಸಮಿತಿಯ ಅಧ್ಯಕ್ಷ ನಂಜನಗೂಡು ಸತ್ಯನಾರಾಯಣ, ಮಂಡ್ಯ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕುಮಾರಲಕ್ಷ್ಮಿ ನರಸಿಂಹಸ್ವಾಮಿ, ಕಾರ್ಯದರ್ಶಿಯಾದ ಶೀತಲಕ್ಷ್ಮೀ, ಮೈಸೂರು ವಲಯದ ಖಜಾಂಚಿ ವಿಠೋಬಾ, ಸಹ ಕಾರ್ಯದರ್ಶಿ ಚಂದ್ರಕಲಾ ಕುಮಾರ್, ಲಕ್ಷ್ಮಣ್ ಸೇರಿದಂತೆ ನಗರದ ವಿವಿಧ ಕೂಟಗಳ 50ಕ್ಕೂ ಹೆಚ್ಚು ಮಂದಿ ಭಾಗಿಯಾಗಿದ್ದರು.

ಕೇರಳ ಬಿಜೆಪಿ ಅಧ್ಯಕ್ಷರಾಗಿ ರಾಜೀವ್ ಚಂದ್ರಶೇಖರ್ ಅಧಿಕಾರ ಸ್ವೀಕಾರ

ತಿರುವನಂತಪುರಂ, ಮಾ.24– ಕೇರಳ ಬಿಜೆಪಿ ನೂತನ ಅಧ್ಯಕ್ಷರಾಗಿ ಮಾಜಿ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರು ಸೋಮವಾರ ಅಧಿಕಾರ ವಹಿಸಿಕೊಂಡರು.



ಇಂದು ತಿರುವನಂತಪುರಂನಲ್ಲಿ ನಡೆದ ಬಿಜೆಪಿಯ ರಾಜ್ಯ ಕೌನ್ಸಿಲ್ ಸಭೆಯಲ್ಲಿ ಪಕ್ಷದ ಕೇಂದ್ರ ವೀಕ್ಷಕ ಪ್ರಹ್ಲಾದ್ ಜೋಶಿ ಅವರು ರಾಜೀವ್ ಚಂದ್ರಶೇಖರ್ ಆಯ್ಕೆಯನ್ನು ಘೋಷಿಸಿದರು.

ನಿರ್ಗಮಿತ ಅಧ್ಯಕ್ಷ ಕೆ. ಸುರೇಂದ್ರನ್ ಅವರು ವೇದಿಕೆಯಲ್ಲಿ ಚಂದ್ರಶೇಖರ್ ಅವರಿಗೆ ಪಕ್ಷದ ಧ್ವಜವನ್ನು ಹಸ್ತಾಂತರಿಸಿದರು. ಈ ವೇಳೆ ಮಾತನಾಡಿದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು, ರಾಜೀವ್ ಚಂದ್ರಶೇಖರ್ ಅವರ ನೇತೃತ್ವದಲ್ಲಿ ಕೇರಳ ಬಿಜೆಪಿ ಹೊಸ ಎತ್ತರಕ್ಕೆ ಬೆಳೆಯಲಿದೆ. ಕೇರಳದಲ್ಲಿ ಬಿಜೆಪಿಗೆ ಶೇ.19ಷ್ಟು ಮತ ಹಂಚಿಕೆಯಾಗಿದ್ದು, ಭವಿಷ್ಯದಲ್ಲಿ ರಾಜೀವ್ ಅವರ ನಾಯಕತ್ವದಲ್ಲಿ ಬಿಜೆಪಿ ಇಲ್ಲಿ ಮತ್ತಷ್ಟು ಬಲಿಷ್ಠಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೈಯ್ಯಲ್ಲಿ ಮಚ್ಚು ಹಿಡಿದು ರೀಲ್ಸ್ ಮಾಡಿದ್ದ ರಜತ್, ವಿನಯ್ ಗೌಡ ಬಂಧನ

ಬೆಂಗಳೂರು, ಮಾ.24– ಕೈಯಲ್ಲಿ ಮಚ್ಚು ಹಿಡಿದು ಪೋಸ್ ಕೊಟ್ಟಿದ್ದ ಬಿಗ್ ಬಾಸ್ ಮಾಜಿ ಸ್ಪರ್ಧಿಗಳಾದ ರಜತ್ ಕಿಶನ್ ಹಾಗೂ ವಿನಯ್ ಗೌಡ ಅವರನ್ನು ಬೆಂಗಳೂರಿನ ಬಸವೇಶ್ವರ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಇತ್ತೀಚೆಗೆ ವಿನಯ್ ಗೌಡ ಹಾಗೂ ರಜತ್ ಕಿಶನ್ ಇಬ್ಬರು ಕೈಯಲ್ಲಿ ಮಚ್ಚು ಹಿಡಿದು ಪೋಸ್ ಕೊಟ್ಟಿದ್ದರು. ಈ ವಿಡಿಯೊ ವೈರಲ್ ಆಗಿದ್ದರಿಂದ ಇಬ್ಬರ ವಿರುದ್ಧ ಶಸ್ತ್ರಾಸ್ತ್ರ ಕಾಯ್ದೆಯಡಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಇದೀಗ ವಿಚಾರಣೆ ಬಳಿಕ ಇಬ್ಬರ ಬಂಧನವಾಗಿದೆ. ಲಾಂಗ್ ಹಿಡಿದು ಭಯದ ವಾತಾವರಣ ಸೃಷ್ಟಿಸುವ ರೀಲ್ಸ್ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆದ ಬೆನ್ನಲ್ಲೇ ಎಫ್‌ಐಆರ್ ದಾಖಲಿಸಿದ್ದ ಪೊಲೀಸರು, ಅವರಿಬ್ಬರಿಗೂ ವಿಚಾರಣೆಗೆ ಹಾಜರಾಗುವಂತೆ ಸೂಚನೆ ಕೊಟ್ಟಿದ್ದರು. ಆರೋಪಿಗಳು ನೀಡಿದ ವಿವರಣೆಯ ಆಧಾರದ ಮೇಲೆ ಬಂಧನ ಮಾಡಲಾಗಿದೆ.

ರಜತ್ ಹಾಗೂ ವಿನಯ್ ಸುಮಾರು 18 ಸೆಕೆಂಡ್‌ಗಳ ವಿಡಿಯೊ ಮಾಡಿದ್ದರು. ಬುಜ್ಜಿ ಅನ್ನೋ ರಜತ್ ಅವರ ಇನ್‌ಸ್ಟಾಗ್ರಾಮ್ ಅಕೌಂಟ್‌ನಲ್ಲಿ ವಿಡಿಯೊ ಪೋಸ್ಟ್ ಮಾಡಲಾಗಿತ್ತು ಸಾರ್ವಜನಿಕ ಸ್ಥಳದಲ್ಲಿ ಮಾರಕಾಸ್ತ್ರ ಪ್ರದರ್ಶನ ಹಾಗೂ ಭಯಭೀತಿ ಸೃಷ್ಟಿಸಿದ ಹಿನ್ನೆಲೆ ಕೇಸ್ ದಾಖಲಾಗಿತ್ತು.

ಹೆಬ್ಬಾಳ ಠಾಣೆ ಇನ್‌ಸ್ಪೆಕ್ಟರ್ ಆಗಿ ಲಕ್ಷ್ಮೀಕಾಂತ

ಮೈಸೂರು, ಮಾ.24– ಮೈಸೂರಿನ ಹೆಬ್ಬಾಳ ಠಾಣೆಯ ಇನ್‌ಸ್ಪೆಕ್ಟರ್ ಆಗಿ ಎಂ.ಲಕ್ಷ್ಮೀಕಾಂತ್ ಅವರನ್ನು ನಿಯೋಜಿಸಿ, ಸರ್ಕಾರ ಆದೇಶ ಹೊರಡಿಸಿದೆ. ಇವರನ್ನೊಳಗೊಂಡಂತೆ ಸ್ಥಳ ನಿರೀಕ್ಷಣೆಯಲ್ಲಿದ್ದ 11 ಮಂದಿಗೆ ಸ್ಥಳ ನಿಯೋಜಿಸಿ ಹಾಗೂ ಐವರನ್ನು ವರ್ಗಾವಣೆಗೊಳಿಸಿ ಪೊಲೀಸ್ ಇಲಾಖೆ ಇಂದು ಆದೇಶಿಸಿದೆ. ಇದೇ ವೇಳೆ 15 ಡಿವೈಎಸ್ಪಿಗಳನ್ನು ವರ್ಗಾವಣೆ ಮಾಡಲಾಗಿದೆ. ಹೆಬ್ಬಾಳ್ ಠಾಣೆಯಲ್ಲಿ ಇನ್‌ಸ್ಪೆಕ್ಟರ್ ಆಗಿದ್ದ ಮಲ್ಲೇಶ್ ಅವರು ಬಡ್ತಿ ಹೊಂದಿ ವರ್ಗಾವಣೆಯಾಗಿದ್ದರಿಂದ ಆ ಸ್ಥಾನ ಖಾಲಿ ಇತ್ತು.

ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್‌ನ ವಿವಿಧ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ಆರೋಪ; ಪ್ರಕರಣ ದಾಖಲು

ಕರ್ನಾಟಕ ವಿವಿಯ ಅಂಗೀಕಾರ ಪಡೆಯದೇ ಕಾರವಾರ ಸ್ನಾತಕೋತ್ತರ ಆಡಳಿತಾಧಿಕಾರಿಯಿಂದ ರೈಲ್ವೆ ಬ್ಯಾಂಕ್ ನೇಮಕಾತಿ ಪರೀಕ್ಷೆ; ಈ ಪರೀಕ್ಷೆ ಬರೆದ ಮಹಿಳೆಯಿಂದ ಪೊಲೀಸರಿಗೆ ದೂರು

ಮೈಸೂರು, ಮಾ.24– ಮೈಸೂರಿನ ದಿ ರೈಲ್ವೆ ಕೋ–ಆಪರೇಟಿವ್ ಬ್ಯಾಂಕ್‌ನ ವಿವಿಧ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ನಾಗಮಂಗಲದ ಗೃಹಿಣಿಯೊಬ್ಬರು ಆರೋಪಿಸಿ, ಮೈಸೂರಿನ ಮಂಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ

2023ರ ಜೂನ್‌ನಲ್ಲಿ ದಿ ರೈಲ್ವೆ ಕೋ–ಆಪರೇಟಿವ್ ಬ್ಯಾಂಕ್‌ನ 21 ವಿವಿಧ ಹುದ್ದೆಗಳ ನೇಮಕಾತಿ ಸಂಬಂಧ ಉದ್ಯೋಗಾಕಾಂಕ್ಷಿಯಾಗಿದ್ದ ನಾಗಮಂಗಲ ತಾಲೂಕಿನ ಜಿನ್ನಾಂಬೆ ದೂರು ನೀಡಿದ್ದು, ಸಹಕಾರ ಇಲಾಖೆ ಅಧಿಕಾರಿ ಪಿ.ಮಹೇಶ್, ಪರೀಕ್ಷೆ ನಡೆಸಿದ ಕರ್ನಾಟಕ ವಿವಿ ಕಾರವಾರ ಸ್ನಾತಕೋತ್ತರ ಕೇಂದ್ರದ ಪ್ರೊಫೆಸರ್ ಡಾ.ಜಗನ್ನಾಥ್ ಎಲ್.ರಾಥೋಡ್, ಪರೀಕ್ಷೆಯ ಪರಿವೀಕ್ಷಕರಾಗಿದ್ದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ, ಪರೀಕ್ಷಾ ಕೇಂದ್ರದ 3ಎ ಕೊಠಡಿಯ ಮೇಲ್ವಿಚಾರಕಿ ಡಿ.ಆರ್.ಕುಮುದಾ, ಬ್ಯಾಂಕ್ ಅಧ್ಯಕ್ಷ ಎಂ.ಯತಿರಾಜು ಮತ್ತಿತರರ ವಿರುದ್ಧ ಪ್ರಕರಣ ದಾಖಲಾಗಿದೆ.

ದೂರಿನಲ್ಲಿರುವ ಆರೋಪ: 2023ರ ಜೂನ್‌ನಲ್ಲಿ ದಿ ರೈಲ್ವೆ ಕೋ–ಆಪರೇಟಿವ್ ಬ್ಯಾಂಕ್‌ನ 21 ವಿವಿಧ ಹುದ್ದೆಗಳ ನೇಮಕಾತಿ ಪ್ರಕಟಣೆ ಹೊರಡಿಸಲಾಗಿತ್ತು. ಹಿರಿಯ ನಗದುಗಾರರು, ಕಿರಿಯ ಗುಮಾಸ್ತ, ಕಚೇರಿ ಸಹಾಯಕ ಹುದ್ದೆಗಳಿಗೆ ನಾನು ಅರ್ಜಿ ಸಲ್ಲಿಸಿ, 2024ರ ಮಾ.10ರಂದು ಮೈಸೂರಿನ ವಿದ್ಯಾವರ್ಧಕ ಕಾನೂನು ಮತ್ತು ಪದವಿ ಕಾಲೇಜಿನಲ್ಲಿ ಲಿಖಿತ ಪರೀಕ್ಷೆಗೆ ಹಾಜರಾಗಿದ್ದೆ. ಆದರೆ ನಗದುಗಾರರ ಹುದ್ದೆ ಪರೀಕ್ಷೆಯ ಓಎಂಆರ್ ಕಾರ್ಬನ್ ಕಾಪಿ(ನಕಲು) ಇಲ್ಲದಿರುವ ಬಗ್ಗೆ ಕೊಠಡಿ ಮೇಲ್ವಿಚಾರಕಿ ಕುಮುದಾ ಅವರನ್ನು ಪ್ರಶ್ನಿಸಿದಾಗ ಇದು ಧಾರವಾಡ ವಿವಿ ಪರೀಕ್ಷಾ ವಿಭಾಗದಿಂದ ಬಂದಿದ್ದು, ನಮ್ಮಲ್ಲಿ ನಕಲು ಪ್ರತಿ ನೀಡಲಾಗುವುದಿಲ್ಲ ಎಂದರು. ಬಳಿಕ ಪರಿವೀಕ್ಷಕ ಮರಿಗೌಡರೂ ಇದನ್ನೇ ಹೇಳಿ, ಪ್ರಶ್ನೆ ಮಾಡಿ ತೊಂದರೆ ನೀಡಿದರೆ ಪರೀಕ್ಷಾ ಕೇಂದ್ರದಿಂದ ಹೊರ ಹಾಕುತ್ತೇವೆ ಎಂದು ಗದರಿದರು.

ಕೆಲ ದಿನಗಳ ಬಳಿಕ ಪರೀಕ್ಷೆಯ ಕೀಲಿ ಉತ್ತರ ಬಿಡದೆ ನೇರವಾಗಿ ಮೆರಿಟ್ ಲಿಸ್ಟ್ ಪ್ರಕಟಿಸಿದ್ದು, ಆ ಪಟ್ಟಿ ಕ್ರಮ ಸಂಖ್ಯೆ 2ರಲ್ಲಿ ನನ್ನ ಹೆಸರಿತ್ತು. ಸಂದರ್ಶನದ ಸೂಚನಾ ಪತ್ರ ಬಂದ ಹಿನ್ನೆಲೆಯಲ್ಲಿ ಜೂ.14ರಂದು ಸಂದರ್ಶನಕ್ಕೆ ಹಾಜರಾದಾಗ ಸಹಕಾರ ಸಂಘದ ಪ್ರತಿನಿಧಿಯೇ ಇಲ್ಲದೆ ಬ್ಯಾಂಕ್ ಅಧ್ಯಕ್ಷ ಯತಿರಾಜ್(ಈಗ ಮಾಜಿ) ಅವರೇ ಸಂದರ್ಶನ ನಡೆಸಿದರು. ಆ ವೇಳೆಯೂ ಓಎಂಆರ್ ನಕಲು ಹಾಗೂ ಕೀಲಿ ಉತ್ತರದ ಬಗ್ಗೆ ಕೇಳಿದಾಗ ಕರ್ನಾಟಕ ವಿವಿ ಕಾರವಾರ ಸ್ನಾತಕೋತ್ತರ ಘಟಕದ ಆಡಳಿತಾಧಿಕಾರಿ ಡಾ.ಜಗನ್ನಾಥ್ ಎಲ್. ರಾಥೋಡ್ ಅವರಿಗೆ ಕೊಡಲಾಗಿದೆ, ಅವರು ವಾಪಸ್ ನೀಡಿದರೆ ನಿಮಗೆ ಮಾಹಿತಿ ನೀಡುತ್ತೇವೆ ಎಂದರು. ಜೂ.21ಕ್ಕೆ ಮತ್ತೊಮ್ಮೆ ಸಂದರ್ಶನಕ್ಕೆ ಹಾಜರಾಗಲು ಸೂಚನಾ ಪತ್ರ ಕಳುಹಿಸಿದ್ದು, ಆಗ ಸಹಕಾರಿ ಸಂಘಗಳ ಪ್ರತಿನಿಧಿ ಪಿ.ಮಹೇಶ್ ಸಂದರ್ಶನ ನಡೆಸಿದರು. ಜು.1ರಂದು ನೇಮಕಾತಿಯ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಯಿತು.

ಬಳಿಕ ನೇಮಕಾತಿ ಪ್ರಕಟಣೆಯ ಅಧಿಸೂಚನೆ, ಉತ್ತರ ಪತ್ರಿಕೆ, ಹಿರಿಯ ನಗದುಗಾರರ ಹುದ್ದೆಯ ಎಲ್ಲಾ ಆವೃತ್ತಿಯ ಕೀಲಿ ಉತ್ತರ ಪತ್ರಿಕೆ ಹಾಗೂ ಅಭ್ಯರ್ಥಿಯ ಮೆರಿಟ್ ದೃಢೀಕೃತ ಪ್ರತಿಯನ್ನು ಪಡೆದು ಪರಿಶೀಲಿಸಿದಾಗ ಪ್ರಶ್ನೆ ಪತ್ರಿಕೆಯ ಇಂಗ್ಲಿಷ್ ಮುದ್ರಣದ 50 ಪ್ರಶ್ನೆಗಳ ನಾಲ್ಕು ಉತ್ತರಗಳ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಸಣ್ಣ ಗಾತ್ರದಲ್ಲಿ ಮುದ್ರಿಸಿ, ತಮಗೆ ಬೇಕಾದವರು ಗುರುತಿಸುವಂತೆ ಮಾಡಿರುವುದು ಕಂಡು ಬಂದಿದೆ.

ಬಳಿಕ ಕರ್ನಾಟಕ ವಿವಿಯ ಡಿಪಿಎಆರ್ ವಿಭಾಗದಿಂದ ಆರ್‌ಟಿಐ ಮೂಲಕ ಮಾಹಿತಿ ಪಡೆದಾಗ ಬ್ಯಾಂಕ್ ನೇಮಕಾತಿ ಸಂಬಂಧ ವಿಶ್ವವಿದ್ಯಾಲಯದೊಂದಿಗೆ ಯಾವುದೇ ಪತ್ರ ವ್ಯವಹಾರ ನಡೆದಿಲ್ಲ, ಪರೀಕ್ಷೆಗಾಗಿ ಅಧಿಕಾರಿ ಹಾಗೂ ಸಿಬ್ಬಂದಿ ನಿಯೋಜಿಸಿಲ್ಲ. ಜಗನ್ನಾಥ್ ರಾಥೋಡ್ ವಿವಿಯ ಅಂಗೀಕಾರ ಪಡೆಯದೇ ಕಾರವಾರ ಸ್ನಾತಕೋತ್ತರ ವಿಭಾಗದ ಆಡಳಿತಾಧಿಕಾರಿ ಸೀಲನ್ನು ಬಳಸಿ, ರೈಲ್ವೆ ಬ್ಯಾಂಕ್ ನೇಮಕಾತಿ ಪರೀಕ್ಷೆ ನಡೆಸಿದ್ದಾರೆ ಎಂದು ತಿಳಿಯಿತು.

ಈ ಸಂಬಂಧ ಆರ್‌ಟಿಐ ಮೂಲಕ ಜಗನ್ನಾಥ್ ರಾಥೋಡ್ ಬಳಿ ಮಾಹಿತಿ ಕೇಳಿದಾಗ ಪರೀಕ್ಷೆ ನಂತರ ಸಂಬಂಧಿಸಿದ ದಾಖಲೆಗಳನ್ನು ಬ್ಯಾಂಕ್‌ನವರಿಗೆ ನೀಡಿದ್ದೇನೆ. ಓಎಂಆರ್‌ನಲ್ಲಿ ಯಾವುದೇ ತಪ್ಪು ನಮೂದಿಸಿಲ್ಲ ಎಂದು ತಿಳಿಸಿದ್ದಾರೆ. ಪರೀಕ್ಷೆ ನಡೆಸಲು ಬಾಹ್ಯ ಸಂಸ್ಥೆಗಳನ್ನು ಆಯ್ಕೆ ಮಾಡುವುದು ಸಹಕಾರ ಸಂಘಗಳ ನಿಬಂಧಕರ ಪ್ರತಿನಿಧಿಯ ಜವಾಬ್ದಾರಿ. ಆದರೆ ನಿಯಮ ಉಲ್ಲಂಘಿಸಿ, ನಕಲಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಪರೀಕ್ಷೆಯನ್ನು ಅಕ್ರಮವಾಗಿ ನಡೆಸಿ, ತಮಗೆ ಬೇಕಾದವರನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಜಿನ್ನಾಂಬೆ ತಿಳಿಸಿದ್ದಾರೆ.

ಆದಿಚುಂಚನಗಿರಿ ಕ್ಷೇತ್ರದ ಅಭಿವೃದ್ಧಿಗೆ
ಪುರುಷೋತ್ತಮಾನಂದನಾಥ ಸ್ವಾಮೀಜಿಗಳ ಪರಿಶ್ರಮ ಅಪಾರ

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿಮತ



ರಾಗಿಮುದ್ದನಹಳ್ಳಿ ಗ್ರಾಮದಲ್ಲಿ ಶ್ರೀಪುರುಷೋತ್ತಮಾನಂದನಾಥ್ ಸ್ವಾಮೀಜಿ ಅವರೆ ಗ್ರಾಮಸ್ಥರ ತವರಿನ ಸನ್ಮಾನವನ್ನು ಸ್ವೀಕರಿಸಿದರು.

ಚಿನಕುರಳಿ, ಮಾ:24– ಶ್ರೀಕ್ಷೇತ್ರ ಆದಿಚುಂಚನಗಿರಿ ಚಿನ್ನದ ಕ್ಷೇತ್ರವಾಗಿ ಅಭಿವೃದ್ಧಿ ಹೊಂದುವಲ್ಲಿ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿಗಳ ಕಠಿಣ ನಿರ್ಧಾರಗಳು, ಪರಿಶ್ರಮ ಸಾಕ್ಷಿದೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಬಣ್ಣಿಸಿದರು.

ರಾಗಿಮುದ್ದನಹಳ್ಳಿ ಗ್ರಾಮದಲ್ಲಿ ಶ್ರೀಪುರುಷೋತ್ತಮಾನಂದನಾಥ್ ಸ್ವಾಮೀಜಿ ಅವರಿಗೆ ಗ್ರಾಮಸ್ಥರು ಹಮ್ಮಿಕೊಂಡಿದ್ದ ತವರಿನ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ, ಶ್ರೀಗಳಿಗೆ ಅಭಿನಂದನೆ ಸಲ್ಲಿಸಿ ಅವರು ಮಾತನಾಡಿದರು.

ಚುಂಚನಗಿರಿ ಕ್ಷೇತ್ರ ವಿದ್ಯೆ, ಆರೋಗ್ಯ, ಅನ್ನದಾನ ಮಾಡಿಕೊಂಡು ಬರುತ್ತಿದೆ. ಕ್ಷೇತ್ರದ 480 ಶಿಕ್ಷಣ ಸಂಸ್ಥೆಗಳಿದ್ದು 1.50ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಇದಕ್ಕೆಲ್ಲ ಶ್ರೀಬಾಲಗಂಗಾಧರನಾಥ ಸ್ವಾಮೀಜಿ ಹಾಗೂ ಶ್ರೀಪುರುಷೋತ್ತಮಾನಂದನಾಥ ಸ್ವಾಮೀಜಿಗಳ ಪರಿಶ್ರಮ ಹೆಚ್ಚಾಗಿದೆ. ಹಿರಿಯ ಶ್ರೀಗಳು ಪುರುಷೋತ್ತಮಾನಂದನಾಥ ಸ್ವಾಮೀಜಿಗಳನ್ನು ಬಹಳ ಎತ್ತರ ಸ್ಥಾನದಿಂದ ಪ್ರೀತಿಸಿ ಗೌರವಿಸುತ್ತಿದ್ದರು. ಹೊರ ದೇಶಗಳಲ್ಲಿ ಶಿಕ್ಷಣ ಸಂಸ್ಥೆ, ಮಠಗಳ ನಿರ್ಮಾಣದಲ್ಲಿ ಶ್ರೀಗಳ ಪಾತ್ರ, ಸಲಹೆ, ಸಹಕಾರ ಹೆಚ್ಚಾಗಿದೆ ಎಂದರು.

ನಾನು ಜನಪ್ರತಿನಿಧಿಯಾಗಿ ಕೆಲಸ ಮಾಡುವ ಸಂದರ್ಭದಲ್ಲಿ ನಾನು ಮಾಡಿದ ಎಲ್ಲಾ ಅಭಿವೃದ್ಧಿ ಕೆಲಸ ಕಾರ್ಯಗಳಲ್ಲೂ ಶ್ರೀಗಳ ಸಲಹೆ, ಸಹಕಾರ ಹೆಚ್ಚಾಗಿದೆ. ಶ್ರೀಗಳು ಕೈಯಲ್ಲಿ ಚಾವಟಿ ಹಿಡಿದು ಅಭಿವೃದ್ಧಿ ಕೆಲಸಗಳನ್ನು ಮಾಡಿಸುತ್ತಿದ್ದರು ಎಂದು ಸ್ಮರಿಸಿದರು.

ಶ್ರೀಪುರುಷೋತ್ತಮಾನಂದನಾಥ ಸ್ವಾಮೀಜಿ ಮಾತನಾಡಿ, ರಾಗಿಮುದ್ದನಹಳ್ಳಿ ಗ್ರಾಮದಲ್ಲಿ ಇರುವ ಒಗ್ಗಟ್ಟಿನ ಕೊರತೆಯಿಂದ ಗ್ರಾಮ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯವಾಗಿಲ್ಲ. ಚುನಾವಣೆಗಳು ಬಂದಾಗ ರಾಜಕೀಯ ಮಾಡಿ ಅಭಿವೃದ್ಧಿ ವಿಚಾರ ಅಂತ ಬಂದಾಗ ಎಲ್ಲರು ಒಗ್ಗಟ್ಟಿನಿಂದ ಕೆಲಸಕಾರ್ಯಗಳನ್ನು ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಆರು ಸಾವಿರ ಜನಸಂಖ್ಯೆ ಹೊಂದಿರುವ ರಾಗಿಮುದ್ದನಹಳ್ಳಿ ಗ್ರಾಮಕ್ಕೆ ಒಂದು ಆಸ್ಪತ್ರೆಯ ವ್ಯವಸ್ಥೆ ಇಲ್ಲ. ನಾನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರಿಗೆ ಕಾರ್ಯಕ್ರಮವೊಂದರಲ್ಲಿ ಗ್ರಾಮಕ್ಕೆ ಆಸ್ಪತ್ರೆ ಮಂಜೂರು ಮಾಡಿಸಿಕೊಡುವಂತೆ ಮನವಿ ಮಾಡಿದೆ. ಆದರೆ, ಶಾಸಕರು ಅವರ ಪತ್ನಿಯ ಆರೋಗ್ಯ ಸಮಸ್ಯೆಯಿಂದಾಗಿ ಪದೇ ಪದೆ ಅಮೇರಿಕಕ್ಕೆ ಹೋಗಿ ಬರುತ್ತಿರುವುದರಿಂದ ಕ್ಷೇತ್ರದಲ್ಲಿ ಅವರಿಂದ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ. ಕ್ಷೇತ್ರದಲ್ಲಿ ಯಾವ ಪಕ್ಷದವರು ಯಾರೇ ಶಾಸಕರಾದರು ಅವರು ನಮ್ಮ ಪ್ರತಿನಿಧಿಗಳು. ನಾವು ರಾಜಕೀಯ ಬದಿಗೊತ್ತಿ ಗ್ರಾಮಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು ಎಂದರು.

ಇದೇ ವೇಳೆ ಕೊಮ್ಮೇರಹಳ್ಳಿ ಶಾಖಾ ಮಠದ ಪೀಠಾಧ್ಯಕ್ಷ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿಗಳನ್ನು ರಾಗಿಮುದ್ದನಹಳ್ಳಿ ಗ್ರಾಮಸ್ಥರು ಬೆಳ್ಳಿಕಿರೀಟ ಧಾರಣೆ ಮಾಡಿ ತವರಿನ ಸನ್ಮಾನ ಮಾಡಿದರು.

ಸಮಾರಂಭದಲ್ಲಿ ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ನಿವೃತ್ತ ಪ್ರಾಧ್ಯಾಪಕ ಎಂ.ಎನ್.ಶಿವಣ್ಣ, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಸಿ.ಎಸ್.ಗೋಪಾಲಗೌಡ, ಉಪಾಧ್ಯಕ್ಷ ಸುರೇಂದ್ರ, ಚಿನಕುರಳಿ ಸ್ವಾಮೀಗೌಡ, ಗ್ರಾಪಂ ಅಧ್ಯಕ್ಷ ರಘು, ಗ್ರಾಪಂ ಉಪಾಧ್ಯಕ್ಷೆ ರಾಧ, ಮಾಜಿ ಅಧ್ಯಕ್ಷ ರಾಜಣ್ಣ, ಮಾಜಿ ಉಪಾಧ್ಯಕ್ಷ ವರದರಾಜು, ನಿವೃತ್ತ ಸರ್ವೇ ಅಧಿಕಾರಿ ನಾಗರಾಜು, ಮುಖಂಡ ಆರ್.ಎಂ.ಪುಟ್ಟರಾಜು, ಆರ್.ಸಿ.ಗುರುದೇವ್, ಎಂ.ಜೆ.ಜಗದೀಶ್, ಪಿಡಿಒ ರಾಜು, ಸೇರಿದಂತೆ ಹಲವರಿದ್ದರು.

ಗಂಜಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ
ಜೆಡಿಎಸ್–ಬಿಜೆಪಿ ಮೈತ್ರಿ ಬೆಂಬಲಿಗರ ಭರ್ಜರಿ ಜಯ



ಮೈತ್ರಿ ಪಕ್ಷದ ಬೆಂಬಲಿತ ಅಭ್ಯರ್ಥಿಗಳು ಕಾರ್ಯಕರ್ತರೊಂದಿಗೆ ವಿಜಯೋತ್ಸವ ಆಚರಿಸಿದರು.

ಕೆ.ಆರ್.ಪೇಟೆ, ಮಾ.24– ತಾಲೂಕಿನ ಗಂಜಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ 12 ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಪಕ್ಷದ ಬೆಂಬಲಿತ ಅಭ್ಯರ್ಥಿಗಳು ಬರೋಬ್ಬರಿ 11ಸ್ಥಾನಗಳಲ್ಲಿ ಭರ್ಜರಿ ಗೆಲುವು ಸಾಧಿಸಿ, ಇತಿಹಾಸ ನಿರ್ಮಾಣ ಮಾಡಿದ್ದಾರೆ.

ಮೈತ್ರಿ ಪಕ್ಷದ ಅಭ್ಯರ್ಥಿಗಳಾದ ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ, ವಕೀಲ ಕುರುಬಹಳ್ಳಿ ಕೆ.ಬಿ.ನಾಗೇಶ್, ಮುದುಗೆರೆ ಶಂಕರ್‌ನಾಗ್, ಮಾವಿನಕೆರೆ ಎಂ.ಬಿ.ಗಂಗಾಧರ್, ಹೊಡಕೆಶೆಟ್ಟಿಹಳ್ಳಿ ಆನಂದ್, ಕಟ್ಟಹಳ್ಳಿ ಕೆ.ಎಸ್.ಗಂಗಾಧರ್, ಮರಟೀಕೊಪ್ಪಲು ಸುಧಾಮಣಿ ಶಿವರಾಜ್, ಜಯಮ್ಮ ದೇವೇಗೌಡ, ಗಂಜಿಗೆರೆ ನಂಜುಂಡಪ್ಪ ಚಿಕ್ಕಾಡಿಗನಹಳ್ಳಿ ಎನ್.ಪರಮೇಶ್, ಪೂವನಹಳ್ಳಿ ಜವರನಾಯಕ, ಮುದುಗೆರೆ ರಾಮೇಗೌಡ ಭರ್ಜರಿ ಗೆಲುವು ಸಾಧಿಸಿದ್ದಾರೆ. ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಗಂಜಿಗೆರೆಕೊಪ್ಪಲು ರೇವಣ್ಣಗೌಡ ವಿಜಯದ ನಗೆ ಬೀರಿದ್ದಾರೆ.

ನೂತನವಾಗಿ ಆಯ್ಕೆಯಾದ ಮೈತ್ರಿ ಪಕ್ಷಗಳ ನಿರ್ದೇಶಕರನ್ನು ಶಾಸಕ ಹೆಚ್.ಟಿ.ಮಂಜು, ಗಂಜಿಗೆರೆ ಗ್ರಾಪಂ.ಅಧ್ಯಕ್ಷ ಮುದುಗೆರೆ ಪರಮೇಶ್, ತಾ.ಪಂ.ಮಾಜಿ ಸದಸ್ಯ ಚಿಕ್ಕಾಡಿಗನಹಳ್ಳಿ ಸೋಮಶೇಖರ್, ಸಂಘದ ಮಾಜಿ ಅಧ್ಯಕ್ಷ ರಾಮಕೃಷ್ಣೇಗೌಡ ಮುಖಂಡರಾದ ವಿಜಯಕುಮಾರ್, ಯಗಚಗುಪ್ಪೆ ಎಲ್ಐಸಿ ಶಿವಪ್ಪ, ಗ್ರಾ.ಪಂ. ಸದಸ್ಯರಾದ ಗಣೇಶ್, ಶಿವಕುಮಾರ್, ಶೆಟ್ಟಿಹಳ್ಳಿ ಲೋಕೇಶ್, ಶಿವಯ್ಯ ಸೇರಿದಂತೆ ಹಲವು ಮುಖಂಡರು ಅಭಿನಂದಿಸಿದರು.

ಫಲಿತಾಂಶ ಘೋಷಣೆ ಆಗುತ್ತಿದ್ದಂತೆಯೇ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಜೆಡಿಎಸ್–ಬಿಜೆಪಿ ಕಾರ್ಯಕರ್ತರು ಎಣಿಕೆ ಕೇಂದ್ರ ಮುಂಭಾಗದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿಕೆ ಮಾಡಿ, ಗೆದ್ದ ಅಭ್ಯರ್ಥಿಗಳನ್ನು ಅಭಿನಂದಿಸಲು ಆಗಮಿಸಿದ್ದಕ್ಷೇತ್ರದ ಶಾಸಕರಾದ ಹೆಚ್.ಟಿ.ಮಂಜು ಅವರನ್ನು ಹೆಗಲ ಮೇಲೆ ಹೊತ್ತು ವಿಜಯೋತ್ಸವ ಆಚರಿಸಿ ಸಂಭ್ರಮಿಸಿದರು

ಸ್ಮಶಾನ ರಸ್ತೆಗೆ ಬೇಲಿ: ರಸ್ತೆಯಲ್ಲೇ ವ್ಯಕ್ತಿ ಅಂತ್ಯಕ್ರಿಯೆ ಮಾಡಿದ ಗ್ರಾಮಸ್ಥರು!



ಶ್ರೀರಂಗಪಟ್ಟಣ, ಮಾ.24– ಸ್ಮಶಾನಕ್ಕೆ ಹೋಗಲು ಜಾಗವಿಲ್ಲದ ಕಾರಣ ಮೃತ ವ್ಯಕ್ತಿಯೊಬ್ಬರ ಅಂತ್ಯಕ್ರಿಯೆಯನ್ನು ರಸ್ತೆಯಲ್ಲೇ ಮಾಡಿರುವ ಘಟನೆ ಶ್ರೀರಂಗಪಟ್ಟಣ ತಾಲೂಕಿನ ಹೆಬ್ಬಾಡಿಹುಂಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಇಬ್ಬರು ರೈತರು ಕಿತ್ತಾಟವಾಡಿಕೊಂಡು ತಮ್ಮ ಜಮೀನುಗಳಿಗೆ ಮುಳ್ಳು ತುತಿ ಬೇಲಿ ಹಾಕಿಕೊಂಡಿದ್ದರಿಂದ ಸ್ಮಶಾನಕ್ಕೆ ತೆರಳುವ ರಸ್ತೆ ಸಂಪೂರ್ಣವಾಗಿ ಬಂದ್ ಆಗಿದ್ದರಿಂದ ಈ ಘಟನೆ ಸಂಭವಿಸಿದೆ ಎನ್ನಲಾಗಿದೆ.

ಗ್ರಾಮದ ಸತೀಶ್(42) ಎಂಬ ವ್ಯಕ್ತಿ ಮೃತಪಟ್ಟಿದ್ದು, ಸ್ಮಶಾನಕ್ಕೆ ತೆರಳುವ ರಸ್ತೆಗೆ ಬೇಲಿ ಹಾಕಿದ್ದರಿಂದ ಸ್ಮಶಾನ ರಸ್ತೆಯಲ್ಲೇ ಅಂತ್ಯಕ್ರಿಯೆ ನಡೆಸುವ ಮೂಲಕ ಗ್ರಾಮಸ್ಥರು ಪ್ರತಿಭಟಿಸಿದ್ದಾರೆ.

ಈ ಹಿಂದಿನಿಂದಲೂ ಇದ್ದ ಸ್ಮಶಾನಕ್ಕೆ ಹೋಗುವ ರಸ್ತೆ ತಮಗೆ ಸೇರಿದ್ದು ಎಂದು ರೈತ ಅಂದಾನಿಗೌಡ ಎಂಬುವವರು ಬೇಲಿ ಹಾಕಿಕೊಂಡಿದ್ದರೆನ್ನಲಾಗಿದೆ. ಅಂದಾನಿಗೌಡ ಬೇಲಿ ಹಾಕಿದ್ದರಿಂದ ಪಕ್ಕದ ಜಮೀನಿನ ರೈತ ಕೂಡ ಸ್ಮಶಾನ ರಸ್ತೆಗೆ ಜಾಗ ಕೊಡಲು ನಿರಾಕರಿಸಿದ್ದಾರೆ. ಇದರಿಂದಾಗಿ ಗ್ರಾಮದಲ್ಲಿ ಸ್ಮಶಾನ ಸೇರಿದಂತೆ ಕೆರೆಗೆ, ರೈತರ ಜಮೀನಿಗೆ ದಾರಿ ಇಲ್ಲದೆ ಪರದಾಡುವಂತಾಗಿದೆ.

ಸ್ಮಶಾನ ಜಾಗಕ್ಕೆ ರಸ್ತೆ ಇಲ್ಲದೆ ಗ್ರಾಮಸ್ಥರು ರಸ್ತೆ ತಡೆದು ಆಕ್ರೋಶ ವ್ಯಕ್ತಪಡಿಸಿದರು. ಸರ್ಕಾರ ಮತ್ತು ಜನಪ್ರತಿನಿಧಿಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ಹೊರಹಾಕಿದರು.

ಸಂಬಂಧಪಟ್ಟ ಅಧಿಕಾರಿಗಳು ಸ್ಮಶಾನ ಜಾಗದ ರಸ್ತೆ ಬಿಡಿಸಿ ಕೊಡದಿದ್ದರೆ ಮುಂದೆ ಗ್ರಾಮದಲ್ಲಿ ಯಾವುದೇ ವ್ಯಕ್ತಿ ಮೃತಪಟ್ಟರೂ ತಾಲೂಕು ಕಚೇರಿ ಮುಂದೆ ಶವ ಸಂಸ್ಕಾರ ನಡೆಸುವುದಾಗಿ ಎಚ್ಚರಿಸಿದ್ದಾರೆ.

ಹಾಲು ಉತ್ಪಾದಕ ಮಹಿಳೆಯರಿಗೆ ಸಾಲ ವಿತರಣೆ



ಫಲಾನುಭವಿಗಳಿಗೆ ಮನ್‌ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ ಹಾಗೂ ಹರೀಶ್‌ಬಾಬು ಚೆಕ್ ವಿತರಣೆ ಮಾಡಿದರು.

ಭಾರತೀನಗರ, ಮಾ.24– ಮಹಿಳೆಯರೇ ಹೆಚ್ಚು ಹಸುಗಳನ್ನು ಸಾಕಿ ಹೈನುಗಾರಿಕೆಯನ್ನು ಉಳಿಸುತ್ತಿದ್ದಾರೆಂದು ಮನ್‌ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ ತಿಳಿಸಿದರು.

ಇಲ್ಲಿಗೆ ಸಮೀಪದ ಗುಡಿಗೆರೆಯ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದಲ್ಲಿ ನಡೆದ ಸಂಜೀವಿನಿ ಕರ್ನಾಟಕ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ (ಕೆಎಂಎಫ್) ಮತ್ತು ಮಂಡ್ಯ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವತಿಯಿಂದ 4ನೇ ಹಂತದ ಕ್ಷೀರ ಸಂಜೀವಿನಿ ಯೋಜನೆಯಡಿ ಅಳವಡಿಸಿರುವ ಫಲಾನುಭವಿಗಳಿಗೆ ಸಾಲದ ಚೆಕ್ ವಿತರಿಸಿ ಅವರು ಮಾತನಾಡಿದರು.

ಹೈನುಗಾರಿಕೆ ಮೂಲಕ ಗ್ರಾಮೀಣ ಮಹಿಳೆಯರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲೆಂದು ಕ್ಷೀರ ಸಂಜೀವಿನಿ ಯೋಜನೆಯಡಿ ಬಡ್ಡಿ ರಹಿತ ಸಾಲವನ್ನು ನೀಡಲಾಗುತ್ತಿದೆ. ಇದನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.

ಹಾಲಿನ ಫ್ಯಾಟ್ ಮೇಲೆ ದರ ನಿಗದಿಪಡಿಸುವುದರಿಂದ ಹಾಲು ಉತ್ಪಾದನೆ ಮಾಡುವ ಎಲ್ಲಾ ಸದಸ್ಯರಿಗೂ ಲಾಭವಾಗುತ್ತದೆ ಜೊತೆಗೆ ಒಕ್ಕೂಟಕ್ಕೂ ಆದಾಯ ಇರುತ್ತದೆ. ಮುಂದಿನ ದಿನಗಳಲ್ಲಿ ಇದರ ಬಗ್ಗೆ ಇಲಾಖೆಯ ಅಧಿಕಾರಿಗಳು ಸುದೀರ್ಘವಾಗಿ ಮಾಹಿತಿ ನೀಡಲಿದ್ದಾರೆ ಎಂದರು.

ಮನ್‌ಮುಲ್ ನಿರ್ದೇಶಕ ಹರೀಶ್‌ಬಾಬು ಮಾತನಾಡಿ, ಕ್ಷೀರ ಸಂಜೀವಿನಿ ಯೋಜನೆಯಡಿ 14 ಫಲಾನುಭವಿಗಳಿಗೆ ತಲಾ 46 ಸಾವಿರ ರೂಗಳಂತೆ 6.44 ಲಕ್ಷ ಹಣವನ್ನು ಬಡ್ಡಿರಹಿತ ಸಾಲವನ್ನು ನೀಡಿದ್ದೇವೆ. ಫಲಾನುಭವಿಗಳು ದುರುಪಯೋಗಪಡಿಸಿಕೊಳ್ಳದೆ ಹಸುಗಳನ್ನು ತೆಗೆದುಕೊಂಡು ಅದರಿಂದ ಬರುವ ಲಾಭಾಂಶದಲ್ಲಿ ಸಕಾಲಕ್ಕೆ ಹಣವನ್ನು ಮರುಪಾವತಿ ಮಾಡಬೇಕು. ಆಗ ಇಲಾಖೆಯವರು 5ನೇ ಹಂತಹ ಹಣ ಬಿಡುಗಡೆಗೊಳಿಸಲು ಮುಂದಾಗುತ್ತಾರೆ. ಇಲ್ಲದಿದ್ದರೆ ಮತ್ತೊಬ್ಬರಿಗೆ ತೊಂದರೆ ಉಂಟಾಗಲಿದೆ ಎಂದು ತಿಳಿಸಿದರು.


ಇದೇ ವೇಳೆ ಸಂಘದ ಕಾರ್ಯದರ್ಶಿ ಯು.ಎಸ್.ಭವ್ಯಶ್ರೀ ಸತೀಶ್, ಅಧ್ಯಕ್ಷ ಸುವರ್ಣ ಶಂಕರೇಗೌಡ, ಸಿ.ಎಂ.ಪ್ರಮೀಳಾ, ನಿರ್ದೇಶಕರಾದ ಮಮತನಾಗರಾಜು, ಉಮಾ, ಲತಾ, ಇಂದ್ರಮ್ಮ, ಸಿದ್ದಮ್ಮ, ಹಾಲು ಪರೀಕ್ಷಕಿ ಚಿಕ್ಕತಾಯಮ್ಮ, ಎಂ. ಮಾದಯ್ಯ, ಬಿದರಹಳ್ಳಿ ಮರೀಗೌಡ, ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಡಾ.ಪಿ.ಆರ್.ಮಂಜೇಶ್, ಡಾ. ಹೊನ್ನೇಶ್, ವಿಸ್ತರಣಾಕಾರಿ ಎನ್. ಭವ್ಯಶ್ರೀ ಸೇರಿ ದಂತೆ ಹಲವರಿದ್ದರು.

ಅಭಿನಂದನೆ



ಮಂಡ್ಯ ತಾಲೂಕಿನ ಕೊತ್ತತ್ತಿ ಹೋಬಳಿಯ ಇಂಡುವಾಳು ಗ್ರಾ.ಪಂ. ಅಧ್ಯಕ್ಷರಾಗಿ ಆಯ್ಕೆಯಾದ ತನುಜ ಸುಂದರ್, ಉಪಾಧ್ಯಕ್ಷರಾಗಿ ಆಯ್ಕೆಯಾದ ಸತೀಶ(ಸತ್ಯ) ಅವರನ್ನು ಶ್ರೀರಂಗಪಟ್ಟಣದ ಬಿಜೆಪಿ ಮುಖಂಡ ಎಸ್.ಸಚ್ಚಿದಾನಂದ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮಾಜಿ ಅಧ್ಯಕ್ಷರಾದ ತೇಜ, ಅಭಿಲಾಷ, ರೇಖಾ, ತನುಜಾ, ಸ್ವಾಮಿ, ಚನ್ನಾಚಾರಿ, ಮುನಿಸ್ವಾಮಿ, ಸದಸ್ಯರಾದ ರಮೇಶ್, ಶೈಲಜಾ, ಮುಖಂಡ ಮಾಯಿಗಣ್ಣ ಇತರರಿದ್ದರು.

ಹೆಚ್.ಎನ್.ಪ್ರಭಾಕರ್ ನಿಧನ



ಪಾಂಡವಪುರ, ಮಾ.24– ಪಾಂಡವಪುರ ಟೌನ್, ಕೃಷ್ಣನಗರ ಎರಡನೇ ಹಂತದ ಲೇಟ್ ನಾರಾಯಣಗೌಡರ ಪುತ್ರ ಹೆಚ್.ಎನ್. ಪ್ರಭಾಕರ(50) ಅವರು ಇಂದು ಸಂಜೆ ನಿಧನರಾದರು.

ಮೂಲತಃ ಹಾರೋಹಳ್ಳಿ ಗ್ರಾಮದವರಾಗಿದ್ದ ಇವರು, ಪತ್ನಿ ಶ್ರೀಮತಿ ಕುಮಾರಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಪಾಂಡವಪುರದ ಜಮೀನಿನಲ್ಲಿ ನಾಳೆ (ಮಂಗಳವಾರ) ಬೆಳಗ್ಗೆ 11ಕ್ಕೆ ನೇರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಭೇಟಿಗೆ ಸಚಿವರು, ಶಾಸಕರ ಚಿಂತನೆ

ಆರೋಪಿಸಿದ್ದಾರೆ. ಈ ಆರೋಪಗಳನ್ನು ನಿರಾಕರಿಸಿದ ಡಿಕೆ ಶಿವಕುಮಾರ್, ಜನರು ಯಾವುದೇ ಕಾರಣವಿಲ್ಲದೆ ನಾಯಕರನ್ನು ಹನಿಟ್ರ್ಯಾಪ್ ಮಾಡಲು ಪ್ರಯತ್ನಿಸುವುದಿಲ್ಲ ಎಂದಿದ್ದಾರೆ. ಸಮಸ್ಯೆಯ ಗಂಭೀರತೆಯನ್ನು ಅರಿತ ಹೈಕಮಾಂಡ್, ದೂರು ದಾಖಲಿಸುವುದಕ್ಕೆ ತಡೆ ನೀಡಿದ್ದು, ಮುಂದಿನ ನಿರ್ದೇಶನಗಳಿಗಾಗಿ ಕಾಯುವಂತೆ ಸಚಿವ ರಾಜಣ್ಣ ಅವರಿಗೆ ಸೂಚಿಸಿದೆ ಎಂದು ಮೂಲಗಳು ಹೇಳಿವೆ.

ರಾಹುಲ್ ಭೇಟಿಗೆ ದೆಹಲಿಗೆ ದೌಡು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರೂ ಆಗಿರುವ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಹನಿಟ್ರ್ಯಾಪ್ ವಿವಾದದ ಬಗ್ಗೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಮಾಹಿತಿ ಹಂಚಿಕೊಳ್ಳಲು ಶೀಘ್ರದಲ್ಲೇ ದೆಹಲಿಗೆ ತೆರಳಲಿದ್ದಾರೆ ಎಂದು ಮೂಲಗಳು ದೃಢಪಡಿಸಿವೆ.

ಜಾರಕಿಹೊಳಿ ಅವರು ರಾಹುಲ್ ಗಾಂಧಿ ಅವರೊಂದಿಗೆ ಸಭೆ ನಡೆಸಲು ಮೂರು ದಿನಗಳ ಕಾಲ ದೆಹಲಿಯಲ್ಲಿಯೇ ಇರುತ್ತಾರೆ ಎಂದು ವರದಿಯಾಗಿದೆ. ಹೆಚ್ಚುವರಿಯಾಗಿ, ಸಚಿವರು ಮತ್ತು ಶಾಸಕರ ಗುಂಪೊಂದು ಅವರೊಂದಿಗೆ ತೆರಳುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ರಾಜಣ್ಣ, ನಾನು ಸೂಕ್ತ ಸಮಯದಲ್ಲಿ ದೂರು ಸಲ್ಲಿಸುತ್ತೇನೆ. ಅದಕ್ಕೆ ನಿರ್ದಿಷ್ಟ ಸಮಯವನ್ನು ನಿಗದಿಪಡಿಸಿಲ್ಲ ಎಂದು ಹೇಳಿದರು. ಹನಿ ಟ್ರ್ಯಾಪ್ ಪ್ರಯತ್ನದ ಹಿಂದೆ ಉಪ ಮುಖ್ಯಮಂತ್ರಿ ಶಿವಕುಮಾರ್ ಅವರ ಕೈವಾಡವಿದೆ ಎಂಬ ಬಿಜೆಪಿ ಶಾಸಕ ಮುನಿರತ್ನ ಅವರ ಆರೋಪಕ್ಕೆ ಸಂಬಂಧಿಸಿದಂತೆ, ಸಚಿವ ರಾಜಣ್ಣ, ಅದರ ಬಗ್ಗೆ ನನಗೆ ತಿಳಿದಿಲ್ಲ ಎಂದು ಪ್ರತಿಕ್ರಿಯಿಸಿದರು.

ರಾಜಣ್ಣ ಅವರನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕೆಂಬ ಮುನಿರತ್ನ ಅವರ ಬೇಡಿಕೆ ಬಗ್ಗೆ ಕೇಳಿದಾಗ, ಮೊದಲು, ಬಿಜೆಪಿ ಶಾಸಕ ಮುನಿರತ್ನ ಅವರು ಉಪ ಮುಖ್ಯಮಂತ್ರಿ ಶಿವಕುಮಾರ್ ಅವರಿಗೆ ಆಪ್ತರಾಗಿದ್ದರು. ಆದ್ದರಿಂದ ಅವರು ಪರೀಕ್ಷೆಗೆ ಒಳಗಾಗಬೇಕು ಎಂದು ಹೇಳಿದರು.

ರಾಜ್ಯದಲ್ಲಿ ನ್ಯಾಯಾಧೀಶರು ಮತ್ತು ಕೇಂದ್ರ ನಾಯಕರು ಸೇರಿದಂತೆ ಸುಮಾರು 48 ವ್ಯಕ್ತಿಗಳನ್ನು ಹನಿಟ್ರ್ಯಾಪ್ ಮಾಡಲಾಗಿದೆ ಎಂದು ರಾಜಣ್ಣ ಈ ಹಿಂದೆ ಸದನದಲ್ಲೇ ಹೇಳಿಕೆ ನೀಡಿದ್ದರು.

ಹನಿಟ್ರ್ಯಾಪ್ ಬಗ್ಗೆ ಪೊಲೀಸರಿಗೆ ದೂರು ನೀಡುವಂತೆ ರಾಜಣ್ಣನಿಗೆ ಹೇಳಿದ್ದೇನೆ !

ಬೆಂಗಳೂರು, ಮಾ. 24(ಕೆಎಂಶಿ)–ಕರ್ನಾಟಕದಲ್ಲಿ ಸಚಿವರು ಮತ್ತು ಶಾಸಕರನ್ನು ಹನಿಟ್ರ್ಯಾಪ್‌ನಲ್ಲಿ ಸಿಲುಕಿಸುವ ಯತ್ನ ನಡೆದಿದೆ ಎಂಬ ಆರೋಪಗಳ ಕುರಿತು ಪ್ರತಿಕ್ರಿಯಿಸಲು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ನಿರಾಕರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನ ಕರ್ನಾಟಕ ಘಟಕದ ಮುಖ್ಯಸ್ಥನಾಗಿ ಸಚಿವ ರಾಜಣ್ಣ ಅವರೊಂದಿಗೆ ಮಾತನಾಡಿದ್ದೇನೆ ಮತ್ತು ದೂರು ದಾಖಲಿಸುವಂತೆ ಹೇಳಿದ್ದೇನೆ. ಅವರು ನನಗೆ ಏನು ಹೇಳಿದರು ಎಂಬುದನ್ನು ವಿವರಿಸಲು ಸಾಧ್ಯವಿಲ್ಲ. ಸಚಿವ ರಾಜಣ್ಣ ಪುತ್ರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಕುರಿತು ಪ್ರತಿಕ್ರಿಯಿಸಿ, ಮುಖ್ಯಮಂತ್ರಿ ಅವರನ್ನು ಯಾರು ಬೇಕಾದರೂ ಭೇಟಿಯಾಗಬಹುದು. ಅನೇಕ ಸಂಸದರು, ಶಾಸಕರು ಮತ್ತು ಜನರೂ ಮುಖ್ಯಮಂತ್ರಿ ಮತ್ತು ನನ್ನನ್ನು ಭೇಟಿಯಾಗುತ್ತಾರೆ. ಹನಿಟ್ರ್ಯಾಪ್ ವಿಷಯದ ಬಗ್ಗೆ ನಾನು ಪ್ರತಿಕ್ರಿಯಿಸುವುದಿಲ್ಲ, ಆ ಬಗ್ಗೆ ನನ್ನನ್ನು ಕೇಳಬೇಡಿ, ಆ ಬಗ್ಗೆ ನಾನು ಯಾವುದಕ್ಕೂ ಉತ್ತರಿಸುವುದಿಲ್ಲ. ಸುಳ್ಳು ಸುದ್ದಿಗಳ ಬಗ್ಗೆ ಪಕ್ಷದ ಹೈಕಮಾಂಡ್ ಜೊತೆ ಚರ್ಚಿಸುವ ಅಗತ್ಯವಿಲ್ಲ, ಪಕ್ಷಕ್ಕೆ ಮುಜುಗರ ಆಗಿರುವ ಕುರಿತು ಮುಖ್ಯಮಂತ್ರಿ ಅವರನ್ನು ಕೇಳಿ ಎಂದರು.

ಮೈಸೂರು ಜಿಲ್ಲೆ ಕ್ಷಯ ಮುಕ್ತ

ಹಳ್ಳಿಗಳಲ್ಲಿ ಬಹಿರ್ದೆಸೆಯನ್ನು ಮುಕ್ತ ಮಾಡಲಾಗಿದೆ. ಅದೇ ರೀತಿಯ ಟಿಬಿ ರೋಗ ಕೂಡ ಮುಕ್ತ ಮಾಡಲಾಗುವುದು ಎಂದರು. ಕ್ಷಯ ರೋಗದ ನಿರ್ಮೂಲನೆಗೆ ದೊಡ್ಡ ಸವಾಲು ಎಂದರೆ ರೋಗ ಬಂದಿರುವ ವ್ಯಕ್ತಿ ವೈದ್ಯರಿಗೆ ತೋರಿಸಲು ಹಿಂಜರಿಯುತ್ತಾನೆ. ರೋಗ ಲಕ್ಷಣಗಳೇನು ಎಂದು ಹೇಳಿದರೆ ಆರಂಭಿಕ ಹಂತದಲ್ಲೇ ಈ ರೋಗವನ್ನು ಗುಣಪಡಿಸಬಹುದು ಎಂದು ಹೇಳಿದರು. ಕ್ಷಯರೋಗವನ್ನು ಗುಣಪಡಿಸಬೇಕು, ಇಲ್ಲವೆಂದರೆ ಇಡೀ ದೇಶವೇ ಕ್ಷಯರೋಗ ಮಯವಾಗಿ ಪರಿವರ್ತನೆಯಾಗುವ ಅಪಾಯವಿದೆ ಎಂದು ಡಾ.ಪ್ರಸಾದ್ ಎಚ್ಚರಿಸಿದರು.

ಇದೇ ವೇಳೆ ಮಾತನಾಡಿದ ಸಿಇಟಿಐ ಎನ್‌ಜಿಓ ರಮಣ್ ಅರೋರ ಮಾತನಾಡಿ, ಕ್ಷಯ ರೋಗ ನಿಯಂತ್ರಣಕ್ಕೆ ಹಣ ಹಾಗೂ ಔಷಧಿ ಕೊರತೆ ಇಲ್ಲ. ಆದರೆ, ಬದ್ಧತೆ ಇದ್ದರೆ ಬಹುಬೇಗನೆ ಗುಣಪಡಿಸಬಹುದು ಎಂದರು.

ಆಕರ್ಷಕ ಜಾಥಾ: ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ಕ್ಷಯರೋಗದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಜಾಥಕ್ಕೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಚಾಲನೆ ನೀಡಿದರು. ಹೌದು, ನಾವು ಕ್ಷಯರೋಗ ಕೊನೆ ಗಾಣಿಸಬಹುದು (ಬದ್ಧತೆ, ಹೂಡಿಕೆ, ವಿತರಣ) ಎಂಬುದು ಈ ಬಾರಿಯ ವಿಶ್ವ ಕ್ಷಯ ರೋಗ ಘೋಷ ವಾಕ್ಯವಾಗಿದೆ.

ಸಂಸತ್‌ನಲ್ಲಿ ಕೋಲಾಹಲ

ಕಾಂಗ್ರೆಸ್ ನಡುವೆ ಭಾರೀ ಮಾತಿನ ಚಕಮಕಿ ನಡೆದು ಸದನದ ಕಲಾಪವನ್ನು ಎರಡು ಬಾರಿ ಮುಂದೂಡಲಾಯಿತು. ಇದಕ್ಕೂ ಮುನ್ನ, ಲೋಕಸಭೆಯಲ್ಲಿ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹಾಗೂ ರಾಜ್ಯ ಸಭೆಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರೂ ಆದ ಕೇಂದ್ರ ಸಚಿವ ಜೆ.ಪಿ.ನಡ್ಡ ವಿಷಯ ಪ್ರಸ್ತಾಪಿಸಿ, ಸಂವಿಧಾನದ ಹುದ್ದೆಯಲ್ಲಿರುವವರೇ ಸಂವಿಧಾನ ಬದಲಾಯಿಸುವುದಾಗಿ ನೀಡಿರುವ ಹೇಳಿಕೆ ಸ್ವೀಕಾರಾರ್ಹವಲ್ಲ. ಆ ವ್ಯಕ್ತಿಯನ್ನು ಸರ್ಕಾರದಿಂದ ವಜಾಗೊಳಿಸುವ ನಿರ್ಧಾರ ವನ್ನು ಕಾಂಗ್ರೆಸ್ ತೆಗೆದುಕೊಳ್ಳಬೇಕು. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರ ಮತ್ತು ಸಂವಿಧಾನದ ಪ್ರತಿಯನ್ನು ಜೇಬಿನಲ್ಲಿ ಇಟ್ಟುಕೊಂಡು ನಾಟಕವಾಡುತ್ತಿದ್ದೀರಿ ಎಂದು ಪ್ರತಿಪಕ್ಷ ಕಾಂಗ್ರೆಸ್ ಮೇಲೆ ಗದಾ ಪ್ರಹಾರ ಮಾಡಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್ ನೀಡಿರುವ ಹೇಳಿಕೆಯನ್ನು ಹಗುರವಾಗಿ ತೆಗೆದುಕೊಳ್ಳುವುದಿಲ್ಲ, ಇದರ ಬಗ್ಗೆ ಕಾಂಗ್ರೆಸ್ ಅಧ್ಯಕ್ಷರು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು. ಸಂಸತ್‌ನಲ್ಲಿ ಕೋಲಾಹಲಕ್ಕೆ ಕಾರಣವಾದ ಬೆನ್ನಲ್ಲೇ ಪಕ್ಷದ ಹಿರಿಯ ನಾಯಕ ಪಿ.ಚಿದಂಬರಂ ದೂರವಾಣಿ ಮೂಲಕ ಶಿವ ಕುಮಾರ್ ಅವರನ್ನು ಸಂಪರ್ಕಿಸಿ, ಮಾಹಿತಿ ಪಡೆದುಕೊಂಡರು.

ನಾನು ಹಾಗೆ ಹೇಳಿಯೇ ಇಲ್ಲ: ವರಿಷ್ಠರು ಈ ವಿಷಯದಲ್ಲಿ ಮಧ್ಯೆ ಪ್ರವೇಶ ಮಾಡಿದ ಬೆನ್ನಲ್ಲೇ ಡಿ.ಕೆ.ಶಿವಕುಮಾರ್ ಪತ್ರಿಕಾಗೋಷ್ಠಿ ಕರೆದು, ಮುಸ್ಲಿಮರಿಗೆ ಮೀಸಲಾತಿ ಕಲ್ಪಿಸಲು ಸಂವಿಧಾನ ಬದಲಾವಣೆ ಮಾಡುವುದಾಗಿ ಹೇಳಿಯೇ ಇಲ್ಲ ಎಂದರು. ನನ್ನ ಹೇಳಿಕೆಯನ್ನು ಬಿಜೆಪಿ ತಿರುಚಿದೆ, ಕಳೆದ 36 ವರ್ಷಗಳಿಂದ ಶಾಸಕನಾಗಿ ವಿಧಾನಸಭೆಯಲ್ಲಿದ್ದೇನೆ, ನನಗೂ ಸಾಮಾನ್ಯ ಜ್ಞಾನವಿದೆ. ಇಂತಹ ವಿಚಾರದಲ್ಲಿ ಜೆ.ಪಿ. ನಡ್ಡಾ ಅವರಿಗಿಂತಲೂ ನಾನು ಉತ್ತಮ ಸೂಕ್ಷ್ಮತೆ ಇರುವ ರಾಜಕಾರಣಿ, ಬಿಜೆಪಿ ಜನಸಾಮಾನ್ಯರ ದಾರಿ ತಪ್ಪಿಸುತ್ತಿದೆ.

ನಮ್ಮದು ರಾಷ್ಟ್ರೀಯ ಪಕ್ಷ, ಸುಳ್ಳು ಹೇಳಿಕೆ ಸೃಷ್ಟಿಸಿ, ನನ್ನ ಹೆಸರನ್ನು ಎಳೆದು ತರಲಾಗುತ್ತಿದೆ. ನಾನು ಈ ಬಗ್ಗೆ ಎಲ್ಲಿಯೂ ಹೇಳಿಕೆ ನೀಡಿಲ್ಲ, ನ್ಯಾಯಾಲಯಗಳ ತೀರ್ಪಿನ ಅನುಸಾರ ತಿದ್ದುಪಡಿ ತಂದಿರು ವುದಾಗಿ ಎಲ್ಲಿಯೂ ಹೇಳಿಲ್ಲ. ನನ್ನ ಹೇಳಿಕೆ ಯನ್ನು ತಿರುಚಿರುವ ಬಗ್ಗೆ ಕಾನೂನು ಹೋರಾಟ ಮಾಡುತ್ತೇನೆ ಎಂದರು. ಸಂವಿಧಾನವನ್ನು ಜಾರಿಗೆ ತಂದಿದ್ದೇ ನಮ್ಮ ಪಕ್ಷ, ಸಂವಿಧಾನದ ಮಹತ್ವ ಬೇರೆಲ್ಲರಿಗಿಂತ ನಮಗೆ ಚೆನ್ನಾಗಿ ಗೊತ್ತಿದೆ, ಕೇಂದ್ರ ಸರ್ಕಾರ ತನ್ನ ಬಜೆಟ್‌ನಲ್ಲಿ ವಿಫಲವಾಗಿದೆ, ಬಜೆಟ್ ಮೇಲೆ ಮಾತನಾಡಲು ಏನೂ ಇಲ್ಲದ ಕಾರಣ ಇಲ್ಲಸಲ್ಲದ ವಿಚಾರ ಪ್ರಸ್ತಾಪ ಮಾಡುತ್ತಿದೆ, ಇದೊಂದು ನನ್ನ ಹಾಗೂ ಕಾಂಗ್ರೆಸ್ ಪಕ್ಷದ ವಿರುದ್ಧ ಮುಂದು ವರೆದ ರಾಜಕೀಯ ಪಿತೂರಿ ಎಂದರು. ರಾಜ್ಯದ ಹಿಂದುಳಿದ ವರ್ಗಗಳ ವರದಿ ಆಧಾರದ ಮೇಲೆ ಮುಸ್ಲಿಮರಿಗೆ ಶೇ.4ರಷ್ಟು ಮೀಸಲಾತಿ ನೀಡಲಾಗಿದೆ. ಮಹಾರಾಷ್ಟ್ರ, ಹರಿಯಾಣ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಮೀಸಲಾತಿ ವಿಚಾರ ನ್ಯಾಯಾಲಯಗಳ ಮೆಟ್ಟಿಲೇರಿದ್ದು, ನ್ಯಾಯಾಲಯಗಳ ತೀರ್ಪಿನ ಆಧಾರದ ಮೇಲೆ ಕೆಲವು ಬದಲಾವಣೆ ಮಾಡಿ ಅವಕಾಶ ನೀಡಲಾಗಿದೆ ಎಂದರು.

ನಡ್ಡಾ ವಿರುದ್ಧ ಹಕ್ಕುಚ್ಯುತಿ ನೋಟಿಸ್

ಹಕ್ಕುಚ್ಯುತಿ ನೋಟಿಸ್ ನೀಡಿದ್ದಾರೆ. ಸದನ ದಲ್ಲಿ ಸುಳ್ಳು ಮತ್ತು ದಾರಿತಪ್ಪಿಸುವ ಹೇಳಿಕೆ ಗಳನ್ನು ನೀಡುವುದು ಸವಲತ್ತು ಉಲ್ಲಂಘನೆ ಮತ್ತು ಸದನದ ಹಕ್ಕುಚ್ಯುತಿ ಎಂಬುದು ಇದರಿಂದ ಸ್ಥಾಪಿತವಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು, ಕಿರಣ್ ರಿಜಿಜು ಮತ್ತು ಜೆಪಿ ನಡ್ಡಾ ಅವರ ವಿರುದ್ಧ ಹಕ್ಕು ಚ್ಯುತಿ ಪ್ರಕ್ರಿಯೆಗಳನ್ನು ಆರಂಭಿಸಬೇಕು ಎಂದು ರಾಜ್ಯಸಭೆ ಸಭಾಪತಿ ಜಗದೀಪ್ ಧಂಕರ್ ಅವರಿಗೆ ಸಲ್ಲಿಸಿದ ನೋಟಿಸ್ ನಲ್ಲಿ ತಿಳಿಸಲಾಗಿದೆ. ನಡ್ಡಾ ಅವರ ಹೇಳಿಕೆಯು ಸಂಪೂರ್ಣವಾಗಿ ಸುಳ್ಳು, ವಾಸ್ತವಿಕ ಆಧಾರಗಳ ಕೊರತೆ ಇದೆ. ಕಾಂಗ್ರೆಸ್ ಮತ್ತು ಅದರ ನಾಯಕರ ಹೆಸರು ಹಾಳು ಮಾಡುವ ಪೂರ್ವಯೋಜಿತ ಉದ್ದೇಶದಿಂದ ಹೇಳಿಕೆ ನೀಡಲಾಗಿದೆ ಎಂದು ಜೈರಾಮ್ ರಮೇಶ್ ನೋಟಿಸ್ ನಲ್ಲಿ ಹೇಳಿದ್ದಾರೆ.

ನಾನು ಸಂವಿಧಾನ ಬದಲಾಯಿಸುವ ಹೇಳಿಕೆ ನೀಡಿಲ್ಲ. ನನ್ನ ಹೇಳಿಕೆಯನ್ನು ತಿರುಚಲಾಗಿದೆ ಎಂದು ಡಿಕೆ ಶಿವ ಕುಮಾರ್ ಅವರು ಹೇಳಿದ್ದಾರೆ. ಹೀಗಾಗಿ ಕಿರಣ್ ರಿಜಿಜು ಅವರ ಹೇಳಿಕೆ ಸುಳ್ಳು ಮತ್ತು ದಾರಿತಪ್ಪಿಸುವಂತಿದ್ದು, ಇದು ಸದನದ ಹಕ್ಕುಚ್ಯುತಿ ಮತ್ತು ಸವಲತ್ತುಗಳ ಉಲ್ಲಂಘನೆಯಾಗಿದೆ ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಮುಸ್ಲಿಮರಿಗೆ ಶೇ. 4 ರಷ್ಟು ಮೀಸಲಾತಿ ನೀಡಲು ಸಂವಿಧಾನ ಬದಲಾಯಿಸುತ್ತೇವೆ ಎಂದು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿದ್ದಾರೆ ಎಂದು ಆಡಳಿತಾರೂಢ ಬಿಜೆಪಿ ಸೋಮವಾರ ಸಂಸತ್ತಿನ ಉಭಯ ಸದನಗಳಲ್ಲಿ ಆರೋಪಿಸಿದ್ದರಿಂದ ಗದ್ದಲ, ಕೋಲಾಹಲ ಉಂಟಾಯಿತು. ಲೋಕಸಭೆಯನ್ನು ಪದೇ ಪದೇ ಮುಂದೂಡಲಾಯಿತು.

ವಿಮಾನಯಾನ ಯೋಜನೆಗೆ ಚಿಂತನೆ

ಮಾಡಿಕೊಂಡಿದ್ದಾರೆ. ಮೈಸೂರು ವಿಮಾನ ನಿಲ್ದಾಣಕ್ಕೆ ಸಮೀಪವಿರುವುದರಿಂದ ಪ್ರವಾಸೋದ್ಯಮವನ್ನು ಗಮನದಲ್ಲಿರಿಸಿಕೊಂಡು ಕೆಆರ್‌ಎಸ್ ಬದಲಿಗೆ ಕಬಿನಿ ಯನ್ನು ಆಯ್ಕೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಈ ಹಿಂದೆ ಕೆಆರ್‌ಎಸ್ ಹಿನ್ನೀರಿನಲ್ಲಿ ಜಲ ವಿಮಾನ ಹಾರಾಟಕ್ಕೆ ಸಂಬಂಧಿಸಿದಂತೆ ಟ್ರಯಲ್ ರನ್ ಮಾಡಿ ಅಲ್ಲಿನ ಮೂಲ ಸೌಕರ್ಯವನ್ನು ಪರಿಶೀಲಿಸಲಾಗಿತ್ತು. ಆದರೆ ವಿಮಾನ ಟೇಕಾಫ್ ಮತ್ತು ಲ್ಯಾಂಡಿಂಗ್ ಆಗಲು ಕೆಲ ತಾಂತ್ರಿಕ ತೊಂದರೆಗಳು ಅಡ್ಡಿಯಾಗಲಿವೆ. ಹಾಗೂ ಅಲ್ಲಿ ಅಗತ್ಯ ಮೂಲಸೌಕರ್ಯಗಳ ಕೊರತೆ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟ ಹಿನ್ನೆಲೆಯಲ್ಲಿ ಅಲ್ಲಿನ ಯೋಜನೆ ಯನ್ನು ಕೈಬಿಡಲಾಗಿದೆ ಎಂದೂ ಅಧಿಕೃತ ಮೂಲಗಳಿಂದ ತಿಳಿದುಬಂದಿದೆ.

ಸರ್ಕಾರವು ಕಬಿನಿ ಜಲಾಶಯವಲ್ಲದೆ, ಮಂಗಳೂರಿನ ಗಣೇಶಗುಡಿ ಪ್ರದೇಶದ ಸುಪಾ ಜಲಾಶಯ, ಸಿಗಂಧೂರಿನ ಲಿಂಗನ ಮಕ್ಕಿ ಜಲಾಶಯದಲ್ಲೂ ಸೀ ಪ್ಲೇನ್ ಯೋಜನೆಗೆ ಸ್ಥಳ ಗುರುತಿಸಲಾಗಿದ್ದು, 2025ರ ಡಿಸೆಂಬರ್ ಮಾಹೆಯೊಳಗಾಗಿ ವಿಮಾನಗಳ ಹಾರಾಟ ಆರಂಭವಾಗಬ ಹುದೆಂಬ ನಿರೀಕ್ಷೆ ಇದೆ. ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಅಧಿಕಾರಿಗಳು ಈ ಸಂಬಂಧ ವಿಮಾನ ಆಪರೇಟರ್‌ಗಳೊಂದಿಗೆ ಚರ್ಚಿಸಿದ್ದು, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಗಮ (ಕೆಎಸ್‌ಐ ಐಡಿಸಿ) ಈ ಯೋಜನೆಗೆ ಕೈಜೋಡಿಸಲಿದೆ. ಸ್ಪೈಸ್ ಜೆಟ್ ಸಂಸ್ಥೆಯು ಕಬಿನಿಯಲ್ಲಿ ಜಲ ವಿಮಾನ ಆಪರೇಟ್ ಮಾಡಲು ಆಸಕ್ತಿ ತೋರಿದ್ದು, ಈ ಕುರಿತಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಅಧಿಕಾರಿಗ ಳೊಂದಿಗೆ ತೀವ್ರ ಚರ್ಚೆ ನಡೆಯುತ್ತಿದೆ. ನಾಗರಿಕ ವಿಮಾನಯಾನ ಸಚಿವಾಲಯವು ದೇಶದ ವಿವಿಧ ಭಾಗಗಳಲ್ಲಿ ಏರೋ ಡ್ರೋಮ್ ಯೋಜನೆಯನ್ನು ಅನುಷ್ಠಾನ ಗೊಳಿಸಲು ಆಸಕ್ತಿ ತೋರಿರುವುದರಿಂದ ಕರ್ನಾಟಕದ ಕಬಿನಿ ಮತ್ತು ಇತರ ಸ್ಥಳಗಳಿಗೂ ಅವಕಾಶ ನೀಡಲು ಗ್ರೀನ್ ಸಿಗ್ನಲ್ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರದ ಈ ಯೋಜನೆಗೆ ರಾಜ್ಯ ಸರ್ಕಾರವು ಅಗತ್ಯ ಮೂಲ ಸೌಕರ್ಯ ಗಳನ್ನು ಒದಗಿಸಲಿದೆ. ಹಂತ ಹಂತವಾಗಿ ಯೋಜನೆ ಅನುಷ್ಠಾನಗೊಳಿಸಲು ಕನಿಷ್ಠ 6 ತಿಂಗಳ ಕಾಲಾವಕಾಶದ ಅವಶ್ಯಕತೆ ಇದ್ದು, ಕೇಂದ್ರದ ತಜ್ಞರ ತಂಡವೊಂದು ಕಬಿನಿ ಜಲಾಶಯಕ್ಕೆ ಕಳೆದ 6 ತಿಂಗಳ ಹಿಂದೆ ಭೇಟಿ ನೀಡಿ, ಅಲ್ಲಿನ ಸ್ಥಿತಿಗತಿಗಳ ಬಗ್ಗೆ ಪರಿಶೀಲನೆ ನಡೆಸಿತ್ತು. ಏರೋ ಡ್ರೋಮ್‌ಗೆ ಅಗತ್ಯವಿರುವ ಸಾರಿಗೆ, ವಾಹನ ನಿಲುಗಡೆ ವ್ಯವಸ್ಥೆ ಹಾಗೂ ಇನ್ನಿತರ ಸೌಲಭ್ಯಗಳ ಬಗ್ಗೆ ಅಧ್ಯಯನ ನಡೆಸಲಾಗಿತ್ತು ಎಂದು ಹೇಳಲಾಗಿದೆ. ಕೆಆರ್‌ಎಸ್ ಹಿನ್ನೀರಲ್ಲಿ ಉದ್ದೇಶಿತ ಸೀ ಪ್ಲೇನ್ ಯೋಜನೆ ಅನುಷ್ಠಾನ ಕುರಿತಂತೆ ಯಾವುದೇ ಪ್ರಕ್ರಿಯೆ ನಡೆಯದ ಕಾರಣ ಇಲ್ಲಿನ ಯೋಜನೆಯನ್ನು ಕೈಬಿಟ್ಟಿರುವ ಸಾಧ್ಯತೆ ಇದೆ ಎಂದು ಕಾವೇರಿ ನೀರಾವರಿ ನಿಗಮದ ಮೂಲಗಳು 'ಮೈಸೂರು ಮಿತ್ರ'ನಿಗೆ ತಿಳಿಸಿವೆ.

ಸಂವಿಧಾನ ಬದಲಾಯಿಸಲು ಬಯಸುತ್ತಿರುವುದು ನಮ್ಮ ಸಚಿವರಲ್ಲ, ಅಧಿಕಾರದಲ್ಲಿರುವವರು

ಡಿಕೆಶಿ ಬೆನ್ನಿಗೆ ನಿಂತ ಖರ್ಗೆ



ಖರ್ಗೆ

ನವದೆಹಲಿ: ಸಂವಿಧಾನದಲ್ಲಿ ಕೆಲ ಬದಲಾವಣೆಗಳನ್ನು ಮಾಡಲಾಗುವುದು ಎಂಬ ಕರ್ನಾಟಕದ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಹೇಳಿಕೆ ಇದೀಗ ವಿವಾದಕ್ಕೆ ಕಾರಣವಾಗಿದ್ದು, ವಿಪಕ್ಷಗಳು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿವೆ. ಇದೇ ವಿಚಾರವಾಗಿ ಸೋಮವಾರ ರಾಜ್ಯಸಭೆಯಲ್ಲಿ ಮತ್ತೆ ಕೋಲಾಹಲ ಉಂಟಾಗಿದ್ದು, ಕಾಂಗ್ರೆಸ್ ಪಕ್ಷವು ಈ ಆರೋಪವನ್ನು ಆಧಾರರಹಿತ ಎಂದಿದೆ.

ಈ ಆರೋಪಗಳಿಗೆ ಪ್ರತಿಕ್ರಿಯಿಸಿದ ವಿರೋಧ ಪಕ್ಷದ ನಾಯಕ (ಎಲ್‌ಒಪಿ) ಮಲ್ಲಿಕಾರ್ಜುನ ಖರ್ಗೆ, ಇಂದು ಬೆಳಿಗ್ಗೆ, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಸೇರಿದಂತೆ ಕೆಲವು ಸದಸ್ಯರು ಸಂವಿಧಾನವನ್ನು ಬದಲಾಯಿಸುವ ವಿಷಯವನ್ನು ಎತ್ತಿದರು. ಸದನದ ನಾಯಕ ಜೆಪಿ ನಡ್ಡಾ ಅವರು ಇದನ್ನು ಬೆಂಬಲಿಸಿದರು. ಆದರೆ, ಕರ್ನಾಟಕದ ಸಚಿವರು ಸಂವಿಧಾನವನ್ನು ಬದಲಾಯಿಸುವ ಬಗ್ಗೆ ಎಂದಿಗೂ ಮಾತನಾಡಿಲ್ಲ ಎಂದು ನಾನು ಸ್ಪಷ್ಟಪಡಿಸಲು ಬಯಸುತ್ತೇನೆ ಎಂದು ಹೇಳಿದರು.

ಇದರಿಂದಾಗಿ ಸದನದಲ್ಲಿ ಗದ್ದಲ ಉಂಟಾಯಿತು. ಮಧ್ಯಾಹ್ನ 2 ಗಂಟೆಯವರೆಗೆ ಕಲಾಪವನ್ನು ಮುಂದೂಡಬೇಕಾಯಿತು. ಕಲಾಪ ಪುನರಾರಂಭವಾದಾಗ ಖರ್ಗೆ, ಕಾಂಗ್ರೆಸ್ ಪಕ್ಷದ ನಿಲುವನ್ನು ಪುನರುಚ್ಚರಿಸಿದರು. ಸಂವಿಧಾನವನ್ನು ಬದಲಾಯಿಸುವ ಆಲೋಚನೆಯನ್ನು ತರುತ್ತಿರುವವರು ನಮ್ಮ ಸಚಿವರಲ್ಲ, ಬದಲಿಗೆ ಈಗ ಅಧಿಕಾರದಲ್ಲಿರುವವರು ಸಂವಿಧಾನ ಬದಲಿಸುವ ಚಿಂತನೆ ಮಾಡುತ್ತಿದ್ದಾರೆ' ಎಂದು ಹೇಳಿದರು.

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಸಂವಿಧಾನವನ್ನು ಬದಲಾಯಿಸುವ ಬಗ್ಗೆ ಮಾತನಾಡಲಿಲ್ಲವೇ? ಆರ್‌ಎಸ್‌ಎಸ್ ಮತ್ತು ಬಿಜೆಪಿ ನಾಯಕರು ಮೂರನೇ ಎರಡರಷ್ಟು ಬಹುಮತವನ್ನು ಪಡೆದರೆ ಅದನ್ನು ತಿದ್ದುಪಡಿ ಮಾಡುತ್ತೇವೆ ಎಂದು ಬಹಿರಂಗವಾಗಿ ಹೇಳಿದ್ದಾರೆ. ಆದರೆ, ಯಾವುದೇ ಬೆಲೆ ತೆತ್ತಾದರೂ ಸರಿ ನಾವು ಸಂವಿಧಾನವನ್ನು ರಕ್ಷಿಸಲು ಬದ್ಧರಾಗಿದ್ದೇವೆ ಎಂದು ಹೇಳಿದರು.

ಮೆಟ್ಟಿಲೇರಿದ ಹನಿಟ್ರ್ಯಾಪ್ ಪ್ರಕರಣ

ಹನಿಟ್ರ್ಯಾಪ್ ಪ್ರಕರಣ ನಡೆದಿದೆ ಎಂದು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯಲ್ಲಿ ಉಲ್ಲೇಖಿಸ ಲಾಗಿದ್ದು, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ನೇತೃತ್ವದ ಪೀಠಕ್ಕೆ ಅರ್ಜಿ ಸಲ್ಲಿಸಲಾಗಿದೆ. ನಾಳೆ ವಿಚಾರಣೆ ನಡೆಯುವ ಸಾಧ್ಯತೆಯಿದೆ.

ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರು ವಿಧಾನಸಭೆ ಅಧಿವೇಶನದಲ್ಲಿ ಹನಿಟ್ರ್ಯಾಪ್‌ನಲ್ಲಿ ತಮ್ಮನ್ನು ಗುರಿಯಾಗಿಸಿಕೊಂಡಿದ್ದಾರೆ ಎಂದು ಹೇಳಿಕೆ ನೀಡಿ ವಿವಾದ ಭುಗಿಲೆದ್ದಿತ್ತು. ಈ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಸಮಾಧಾನಗೊಂಡಿದ್ದಾರೆ ಎಂಬ ಮಾಹಿತಿ ಕೂಡ ಕೇಳಿಬಂದಿತ್ತು. ವಿರೋಧ ಪಕ್ಷದ ಬಿಜೆಪಿ ಸದಸ್ಯರು ಸದನದ ಬಾವಿಗಿಳಿದು ಆಕ್ರೋಶ ವ್ಯಕ್ತಪಡಿ ಸಿದರು. ಕಾಂಗ್ರೆಸ್ ಸರ್ಕಾರದ ಅಡಿಯಲ್ಲಿ ನಡೆಸಲಾಗುತ್ತಿದೆ ಎನ್ನಲಾದ ಹನಿ–ಟ್ರ್ಯಾಪ್ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು, ಸಿಬಿಐ ಅಥವಾ ಹಾಲಿ ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ತನಿಖೆ ವಹಿಸಬೇಕೆಂದು ಬಿಜೆಪಿ ನಾಯಕರು ಒತ್ತಾಯಿಸಿದ್ದಾರೆ. ಈ ಬಗ್ಗೆ ಸದನದಲ್ಲಿಯೇ ಹೇಳಿಕೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಒಂದು ವೇಳೆ ಹನಿಟ್ರ್ಯಾಪ್ ಪ್ರಕರಣದಲ್ಲಿ ಯಾರೇ ಭಾಗಿಯಾಗಿರುವುದು ದೃಢಪಟ್ಟರೆ ಅವರನ್ನು ಶಿಕ್ಷಿಸದೆ ಬಿಡುವುದಿಲ್ಲ. ಈ ವಿಷಯದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸುವುದಾಗಿ ಭರವಸೆ ನೀಡಿದ್ದರು.

ಪಾಲಿಕೆಗೆ ಶೀಘ್ರ ಚುನಾವಣೆ ಸಂಭವ

ಚುನಾವಣಾ ತಹಸೀಲ್ದಾರ್‌ರಿಂದ ಪಡೆದುಕೊಂಡರು. ಮತದಾರರ ಪಟ್ಟಿ ತಯಾರಿಸುವಾಗ ಅನುಸರಿಸಿದ ಕ್ರಮ, ಪರಿಷ್ಕರಣೆ ವೇಳೆ ಪಟ್ಟಿಯಿಂದ ಹೆಸರು ಕೈಬಿಡುವುದು, ಸೇರ್ಪಡೆ, ಯುವ ಮತದಾರರ ನೋಂದಣಿ, ವಿಳಾಸ ಬದಲಾವಣೆ, ತಿದ್ದುಪಡಿಗಳನ್ನು ನಿಯಮಾನುಸಾರ ಮಾಡಲಾಗಿದೆಯೋ ಎಂಬುದರ ಬಗ್ಗೆಯೂ ಅಧಿಕಾರಿಗಳು ಚುನಾವಣಾ ಆಯುಕ್ತರಿಗೆ ಮಾಹಿತಿ ನೀಡಿದರು.

ಪ್ರಸ್ತುತ ವಾರ್ಡ್‌ವಾರು ಮತದಾರರ ಸಂಖ್ಯೆ, ನೋಂದಾಯಿತ ಮತದಾರರ ಸಂಖ್ಯೆ, ಹೊಸದಾಗಿ ನೋಂದಾಯಿಸಿಕೊಂಡಿರುವ ಯುವ ಮತದಾರರು, 80 ವರ್ಷ ದಾಟಿದ ಹಿರಿಯ ಮತದಾರರ ಸಂಖ್ಯೆ, ಚುನಾವಣೆಗೆ ಸೂಕ್ತ ವೇಳೆ, ಮೂಲ ಸೌಕರ್ಯ ಮತ್ತಿತರ ವಿಷಯಗಳ ಕುರಿತಂತೆಯೂ ಸಂಗ್ರೇಶಿ ಮಾಹಿತಿ ಸಂಗ್ರಹಿಸಿದರು.

ನಂತರ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಜಿ.ಎಸ್. ಸಂಗ್ರೇಶಿ, ಮೇ. 31ರೊಳಗಾಗಿ ಮೈಸೂರು ಸೇರಿದಂತೆ ರಾಜ್ಯದಲ್ಲಿ ಅವಧಿ ಮುಗಿದ ಪಾಲಿಕೆಗಳು, ನಗರಸಭೆ, ಪುರಸಭೆ, ಪಪಂ, ಜಿಪಂ, ತಾಪಂಗಳಿಗೆ ಮೀಸಲಾತಿ ಪ್ರಕಟಿಸಿ ಅಧಿಸೂಚನೆ ಹೊರಡಿಸುವಂತೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ತಿಳಿಸಲಾಗಿದೆ. ಒಂದು ವೇಳೆ ಮೀಸಲಾತಿ ಪ್ರಕಟವಾದಲ್ಲಿ ಶೀಘ್ರ ಚುನಾವಣೆ ನಡೆಸಬಹುದು ಎಂದರು.

ಭಾರಿ ರಿಯಾಯಿತಿ ದರದಲ್ಲಿ ಮಾರಾಟ



ಮೈಸೂರು, ಮಾ. 24– ಮೈಸೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಎದುರಿಗಿರುವ ಹೋಟೆಲ್ ಪೈ ವಿಸ್ತಾದಲ್ಲಿ ಯುಗಾದಿ ಮತ್ತು ರಂಜಾನ್ ಹಬ್ಬದ ಪ್ರಯುಕ್ತ ಮಹಿಳೆಯರ ಸೀರೆಗಳು, ಪುರುಷರ ಮತ್ತು ಮಕ್ಕಳ ಉಡುಪುಗಳನ್ನು ಶೇ. 90ರವರೆಗಿನ ಭಾರೀ ರಿಯಾಯಿತಿ ದರದಲ್ಲಿ ಮಾರಾಟ ಏರ್ಪಡಿಸಲಾಗುತ್ತಿದೆ.

ಸಾವಿರಾರು ಶಾಪಿಂಗ್ ಮಾಲ್‌ಗಳಿಗೆ ಪೂರೈಕೆದಾರರಾಗಿರುವ ಈ ಕಂಪನಿಯು ಮೈಸೂರಲ್ಲಿ ಮೊದಲ ಬಾರಿಗೆ ಶೇ. 90ರವರೆಗಿನ ರಿಯಾಯಿತಿ ದರದಲ್ಲಿ ಬ್ರಾಂಡೆಡ್ ರೆಡಿಮೇಡ್ ಉಡುಪುಗಳ ತಾಜಾ ಸ್ಟಾಕ್ ಅನ್ನು ಮಾರಾಟ ಮಾಡುತ್ತಿದೆ.

ಮಕ್ಕಳ ಉಡುಪುಗಳು ಕೇವಲ 99 ರೂ.ಗಳಿಂದ ಪ್ರಾರಂಭವಾಗುತ್ತದೆ. ಮಹಿಳೆಯರ ಉಡುಪುಗಳು (ಕುರ್ತಿ) ಕೇವಲ ರೂ. 149ರಿಂದ, ಪುರುಷರ ಪ್ರೀಮಿಯಂ ಉಡುಪುಗಳು ಕೇವಲ ರೂ. 349, ಪುರುಷರ ಶರ್ಟ್ ಮತ್ತು ಟಿ–ಶರ್ಟ್ ಕೇವಲ 199, ರೂ. 8999ಗಳ ಪ್ರೀಮಿಯಂ ಬ್ರಾಂಡೆಡ್ ಬ್ಲೇಜರ್‌ಗಳು ಈಗ ಕೇವಲ 999 ರೂ.ಗಳಿಗೆ, 2 ಸಾವಿರ ರೂ.ಗಳ ಸೀರೆಗಳು ಈಗ ಕೇವಲ 149ರಿಂದ 199 ರೂ.ಗಳಿಗೆ ಮಾರಾಟವಾಗುತ್ತಿದ್ದು, ಈ ಮಾರಾಟ ಮೇಳವು ಮಾರ್ಚ್ 30ರವರೆಗೆ ಇರುತ್ತದೆ.

ಮಹೇಶ್‌ಗೌಡರಿಗೆ ಅಭಿನಂದನೆ



ಕುಂಬಾರಕೊಪ್ಪಲಿನ ಮಹದೇಶ್ವರ ವಿವಿಧೋದ್ದೇಶ ಸಹಕಾರ ಸಂಘದ ಆಡಳಿತ ಮಂಡಳಿಗೆ ಬಿಸಿಬಿ ವಿಭಾಗದಿಂದ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದ ಮಹೇಶ್‌ಗೌಡ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎನ್.ಯೋಗಾನಂದ, ಪಡುವಾರಹಳ್ಳಿ ಎಂ.ರಾಮಕೃಷ್ಣ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಸಿ.ಸಂತೋಷ್, ನಿರ್ದೇಶಕ ಎಸ್ ಕೃಷ್ಣಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಹೊಸಬೆಳಕು ಸೇವಾ ಟ್ರಸ್ಟ್ ಉದ್ಘಾಟನೆ, ವಿವಿಧ ಕ್ಷೇತ್ರದ ಸಾಧಕರಿಗೆ ಸೇವಾ ರತ್ನ ಪ್ರಶಸ್ತಿ ಪ್ರದಾನ



ಸಾಧಕರಿಗೆ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಮಾ. 24– ಮೈಸೂರಿನ ಹೋಟೆಲ್ ಮೌರ್ಯ ರೆಸಿಡೆನ್ಸಿಯಲ್ಲಿ ಹೊಸ ಬೆಳಕು ಸೇವಾ ಟ್ರಸ್ಟ್ ಉದ್ಘಾಟನೆ ಹಾಗೂ ಸಾಧಕರಿಗೆ ಸೇವಾ ರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು.

ಬಿಜೆಪಿ ನಗರ ಅಧ್ಯಕ್ಷ ಎಲ್.ನಾಗೇಂದ್ರ ಕಾರ್ಯಕ್ರಮ ಉದ್ಘಾಟಿಸಿ, ಸಾಧಕರಿಗೆ ಪ್ರಶಸ್ತಿ ನೀಡಿ, ಸನ್ಮಾನಿಸಿದರು.

ಬಳಿಕ ಮಾತನಾಡಿದ ಅವರು, ನಿಸ್ವಾರ್ಥ ಸಮಾಜಮುಖಿ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ಸಂಘ ಸಂಸ್ಥೆಗಳ ಸ್ಥಾಪನೆಯ ಸದುದ್ದೇಶ ಈಡೇರುವಂತೆ ನೋಡಿಕೊಳ್ಳಬೇಕು. ಸೇವಾ ಮನೋಭಾವ ಇದ್ದಲ್ಲಿ ಮಾತ್ರ ಸಂಘ ಸಂಸ್ಥೆಗಳ ಕಾರ್ಯ ಚಟುವಟಿಕೆಗಳು ಸಾರ್ವಜನಿಕರಿಗೆ ತಲುಪಲು ಸಾಧ್ಯವಾಗಲಿದೆ ಎಂದು ಹೇಳಿದರು.

ಕರಾಟೆ ಮಾಸ್ಟರ್ ದಿಲೀತ್ತು ಉತ್ತಪ್ಪ, ರಕ್ತದಾನಿ ಮಹದೇವಸ್ವಾಮಿ, ಖೋ ಖೋ ಆಟಗಾರ್ತಿ ಚೈತ್ರ, ಪೊಲೀಸ್ ಇಲಾಖೆಯ ದಿವಾಕರ್, ಆರ್ಟಿಸ್ಟ್ ಗೌರಿ, ಸಮಾಜ ಸೇವಕರಾದ ಪ್ರಭುಮಣಿ, ಮಾದೇವಯ್ಯ, ಕಾಂತರಾಜು, ಮಾಲಂಬಿಕ, ಸೌಮ್ಯ ಆರ್ ರವಿ., ಇಬ್ರಾಹಿಂ ರಫೀಕ್ ಅವರಿಗೆ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿಜೆಪಿ ನಗರ ಉಪಾಧ್ಯಕ್ಷ ಹೇಮನಂದೀಶ್ ನಡೆಸಿಕೊಟ್ಟರು. ಹೊಸಬೆಳಕು ಸೇವಾ ಟ್ರಸ್ಟ್ ಸಂಸ್ಥಾಪಕರಾದ ಎಂ.ಎನ್.ಗೀತಾ, ಶಿವಪ್ರಸಾದ್, ಬಿಜೆಪಿ ರಾಜ್ಯ ವಕ್ತಾರ ಎಂ.ಜೆ. ಮಹೇಶ್, ಯೋಗ ನರಸಿಂಹ ಸ್ವಾಮಿ ದೇವಸ್ಥಾನದ ಆಡಳಿತ ಅಧಿಕಾರಿ ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ರಫ್ತು ಕೇಂದ್ರದ ಕಟ್ಟಡ ಕಾಮಗಾರಿ ಪುನಾರಂಭಿಸಲು ಆಗ್ರಹ

ರಾಜ್ಯ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್‌ರಿಗೆ ಮನವಿ ಸಲ್ಲಿಸಿದ ಮೈಸೂರು ಕೈಗಾರಿಕೆಗಳ ಸಂಘದ ಪದಾಧಿಕಾರಿಗಳು



ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ರಫ್ತು ಕೇಂದ್ರ ನಿರ್ಮಾಣ ಕಾಮಗಾರಿ ಪುನಾರಂಭಿಸುವಂತೆ ಮೈಸೂರು ಕೈಗಾರಿಕೆಗಳ ಸಂಘದ ಪದಾಧಿಕಾರಿಗಳು, ರಾಜ್ಯ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರಿಗೆ ಮನವಿ ಸಲ್ಲಿಸಿದರು.

ಮೈಸೂರು, ಮಾ.24(ಆರ್‌ಕೆ)– ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ನನೆಗುದಿಗೆ ಬಿದ್ದಿರುವ ರಫ್ತು ಕೇಂದ್ರ ನಿರ್ಮಾಣ ಕಾಮಗಾರಿಯನ್ನು ಪುನಾರಂಭಿಸುವಂತೆ ಮೈಸೂರು ಕೈಗಾರಿಕೆಗಳ ಸಂಘದ ಪದಾಧಿಕಾರಿಗಳು ರಾಜ್ಯ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರಲ್ಲಿ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಗೆ ಭೇಟಿ ನೀಡಿದ್ದ ಮುಖ್ಯ ಕಾರ್ಯದರ್ಶಿಗಳನ್ನು ಭೇಟಿ ಮಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ ನೇತೃತ್ವದ ನಿಯೋಗ, ಮೈಸೂರು ಭಾಗದಲ್ಲಿ ರಫ್ತು ಉದ್ಯಮ ಉತ್ತೇಜನ ಮತ್ತು ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ಅಸೈಡ್ ಯೋಜನೆಯಡಿ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ರಿಂಗ್ ರೋಡ್ ಸಮೀಪವಿರುವ ಮೈಸೂರು ಕೈಗಾರಿಕೆಗಳ ಸಂಘದ ಸಿಎ ನಿವೇಶನದಲ್ಲಿ ರಫ್ತು ಕೇಂದ್ರ ನಿರ್ಮಾಣ ಯೋಜನೆಗಾಗಿ ಕೇಂದ್ರ ಸರ್ಕಾರವು ಮೂರು ಕೋಟಿ ಹಾಗೂ ರಾಜ್ಯ ಸರ್ಕಾರ 1 ಕೋಟಿ ಅನುದಾನವನ್ನು ಬಜೆಟ್‌ನಲ್ಲಿ ಪ್ರಕಟಿಸಿದ್ದವು.

ರಾಜ್ಯ ಸರ್ಕಾರವು ಪ್ರಕಟಿಸಿದ್ದ ಅನುದಾನದ ಪೈಕಿ 30 ಲಕ್ಷ ರೂ. ಹಾಗೂ ಮೈಸೂರು ಕೈಗಾರಿಕೆಗಳ ಸಂಘದ 50 ಸಾವಿರ ರೂ. ಬಳಸಿಕೊಂಡು ರಫ್ತು ಕೇಂದ್ರದ ಕಟ್ಟಡ ಕಾಮಗಾರಿಯನ್ನು ಕೈಗೊಳ್ಳಲಾಗಿತ್ತು. ಗುತ್ತಿಗೆದಾರರು 2019ರ ಮೇ 28ರಂದು ಕಾಮಗಾರಿಗೆ ಕಾರ್ಯಾದೇಶ ಪಡೆದು 2021ರ ಜನವರಿ ತಿಂಗಳಲ್ಲಿ ಬೇಸ್‌ಮೆಂಟ್ ಕೆಲಸ ಮಾಡಿ ಈಗ ಸ್ಥಗಿತಗೊಳಿಸಿದ್ದಾರೆ. ಕೊರೊನಾ ಕಾರಣದಿಂದಾಗಿ 2022ರ ಮಾರ್ಚ್ 21ರವರೆಗೆ ಕೆಐಎಡಿಬಿಯು ಗುತ್ತಿಗೆ ಅವಧಿ ವಿಸ್ತರಿಸಿದ್ದರೂ ಗುತ್ತಿಗೆದಾರರು ಮಾತ್ರ ಕಾಮಗಾರಿ ಪುನರಾರಂಭಿಸಿಲ್ಲ. ಕಳೆದ ಮೂರು ವರ್ಷಗಳಿಂದ ನಿರ್ಮಾಣ ಹಂತದ ಕಟ್ಟಡ ಮಳೆ, ಗಾಳಿಗೆ ಶಿಥಿಲಗೊಂಡಿದ್ದು, ಕಾಮಗಾರಿ ಪುನರಾರಂಭಿಸುವಂತೆ ಕೆಐಎಡಿಬಿಗೆ ನಿರ್ದೇಶನ ನೀಡಬೇಕೆಂದು ಅವರು ಮುಖ್ಯ ಕಾರ್ಯದರ್ಶಿಗಳನ್ನು ಒತ್ತಾಯಿಸಿದ್ದಾರೆ.

ಮನವಿ ಸ್ವೀಕರಿಸಿದ ಶಾಲಿನಿ ರಜನೀಶ್ ಅವರು, ಈ ಕುರಿತು ಜಿಲ್ಲಾಧಿಕಾರಿಗಳ ಮೂಲಕ ಪರಿಶೀಲನೆ ನಡೆಸಿ, ಕೆಐಎಡಿಬಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವುದಾಗಿ ತಿಳಿಸಿದರು.

ಈ ಸಂದರ್ಭ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಉದ್ಯಮಿಯಾದ ಕವೀಶ್‌ಗೌಡ ಹಾಗೂ ಇತರರಿದ್ದರು.

ಮಾ.28ರಂದು ಮೈಸೂರಲ್ಲಿ ಶ್ರೀ ಅಗ್ನಿಬನ್ನಿರಾಯ ಜಯಂತಿ

ಮೈಸೂರು,ಮಾ.24–ಜಿಲ್ಲಾಡಳಿತ, ಮೈಸೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶ್ರೀ ಅಗ್ನಿಬನ್ನಿರಾಯ ಜಯಂತಿಯನ್ನು ಮಾ.28ರಂದು ಮಧ್ಯಾಹ್ನ 12 ಗಂಟೆಗೆ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದು, ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಹಾಗೂ ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಗೌರವ ಉಪಸ್ಥಿತರಿರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಒಡೆಯರ್, ಸುನಿಲ್ ಬೋಸ್ ಆಗಮಿಸಲಿದ್ದಾರೆ. ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್, ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಜಿ.ಡಿ.ಹರೀಶ್‌ಗೌಡ, ಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ. ಮಾದೇಗೌಡ, ಡಾ.ಯತೀಂದ್ರ ಎಸ್. ಮತ್ತು ಕೆ. ವಿವೇಕಾನಂದ ಸಮಾರಂಭದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕಂತೆ ಕಂತೆ ಹಣ ಪತ್ತೆ ಪ್ರಕರಣ

ನ್ಯಾ.ಯಶವಂತ್ ವರ್ಮಾ ಕರ್ತವ್ಯ ನಿರ್ವಹಿಸದಂತೆ ಹೈಕೋರ್ಟ್ ಆದೇಶ





ನವದೆಹಲಿ: ನ್ಯಾಯಮೂರ್ತಿ ಯಶವಂತ್ ವರ್ಮಾ ಅವರು ನ್ಯಾಯಾಂಗ ಕರ್ತವ್ಯ ನಿರ್ವಹಿಸದಂತೆ ದೆಹಲಿ ಹೈಕೋರ್ಟ್ ಆದೇಶ ನೀಡಿದೆ. ಇತ್ತೀಚಿನ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು, ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ನ್ಯಾಯಾಂಗ ಕೆಲಸವನ್ನು ಮುಂದಿನ ಆದೇಶದವರೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಿಂತೆಗೆದುಕೊಳ್ಳಲಾಗುತ್ತದೆ ಎಂದು ನೋಟಿಸ್‌ನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಆದಾಗ್ಯೂ, ಈ ನಿರ್ಧಾರವನ್ನು ಏಕೆ ತೆಗೆದುಕೊಳ್ಳಲಾಗಿದೆ ಎಂಬುದು ಈ ಸೂಚನೆಯಲ್ಲಿ ಸ್ಪಷ್ಟವಾಗಿಲ್ಲ.

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ (CJI) ಸಂಜೀವ್ ಖನ್ನಾ ಅವರ ನಿರ್ದೇಶನದ ನಂತರ ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆ) ದೇವೇಂದ್ರ ಕುಮಾರ್ ಉಪಾಧ್ಯಾಯ ಅವರು ಈ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ವಾಸ್ತವವಾಗಿ, ಸಂಜೀವ್ ಖನ್ನಾ ಅವರು ಈ ಘಟನೆ ಸಂಬಂಧ ಒಂದು ನಿರ್ಧಾರ ತೆಗೆದುಕೊಳ್ಳುವವರೆಗೂ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರನ್ನು ಯಾವುದೇ ನ್ಯಾಯಾಂಗ ಕೆಲಸವನ್ನು ನಿಯೋಜಿಸಬೇಡಿ ಎಂದು ದೆಹಲಿ ಹೈಕೋರ್ಟ್‌ಗೆ ನಿರ್ದೇಶನ ನೀಡಿದ್ದರು.

ವಿಷಯದ ಗಂಭೀರತೆಯನ್ನು ಪರಿಗಣಿಸಿ ಸಂಜೀವ್ ಖನ್ನಾ ಅವರು ಶನಿವಾರ ಮೂವರು ಸದಸ್ಯರ ಆಂತರಿಕ ತನಿಖಾ ಸಮಿತಿಯನ್ನು ರಚಿಸಿದರು.

ಸಮಿತಿಯಲ್ಲಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು, ಹಿಮಾಚಲ ಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜಿ.ಎಸ್.ಸಂಧವಾಲಿಯಾ ಮತ್ತು ಕರ್ನಾಟಕ ಹೈಕೋರ್ಟ್‌ನ ನ್ಯಾಯಾಧೀಶರಾದ ಅನು ಶಿವರಾಮನ್ ಇದ್ದಾರೆ.

ನ್ಯಾಯಮೂರ್ತಿ ಯಶವಂತ್ ವರ್ಮಾ ತಮ್ಮ ವಿರುದ್ಧದ ಆರೋಪಗಳಿಗೆ ಪ್ರತಿಕ್ರಿಯಿಸಿದ್ದು ಈ ಹಣವು ತಮಗೆ ಅಥವಾ ತಮ್ಮ ಕುಟುಂಬದ ಸದಸ್ಯರಿಗೆ ಸೇರಿಲ್ಲ ಎಂದು ಹೇಳಿದ್ದರು.

ನಾಯಕ ಸಮುದಾಯದ ನಾಯಕರ ಹತ್ತಿಕ್ಕುವ ಯತ್ನ; ಹೋರಾಟದ ಎಚ್ಚರಿಕೆ

ಮೈಸೂರು,ಮಾ.24(ಎಂಟಿವೈ)– ರಾಜ್ಯದಲ್ಲಿ ನಾಯಕ ಸಮುದಾಯದ ನಾಯಕರನ್ನು ತೇಜೋವಧೆ ಮಾಡುವ ಸಂಚು ನಿರಂತರವಾಗಿ ನಡೆಯುತ್ತಿದ್ದು, ರಾಜಕೀಯವಾಗಿ ಬೆಳೆಯದಂತೆ ಮಾಡುತ್ತಿರುವ ಕುತಂತ್ರ ನಿಲ್ಲಿಸದಿದ್ದರೆ ಹೋರಾಟ ಮಾಡಬೇಕಾಗುತ್ತದೆ ಎಂದು ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ ಎಚ್ಚರಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ನಾಯಕ ಸಮುದಾಯ 60 ಲಕ್ಷ ಜನಸಂಖ್ಯೆ ಹೊಂದಿರುವ ಒಂದು ಪ್ರಬಲ ಸಮುದಾಯವಾಗಿದೆ. ರಾಜ್ಯದಲ್ಲಿ ನಾಲ್ಕನೇ ಅತಿ ದೊಡ್ಡ ಸಮುದಾಯ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಆದರೂ ಸಮುದಾಯದ ಮುಖಂಡರನ್ನು ತುಳಿಯುವ ಕೆಲಸ ಎಲ್ಲ ಪಕ್ಷಗಳೂ ಮಾಡುತ್ತಿರುವುದು ಖಂಡನೀಯ. ಈ ಹಿಂದೆ ಬಿಜೆಪಿ ಸರ್ಕಾರದ ವೇಳೆ ಸಚಿವರಾಗಿದ್ದ ರಮೇಶ್ ಜಾರಕಿಹೊಳಿ ಅವರ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಿಸಿದರು. ಅದೇ ರೀತಿ ಶ್ರೀರಾಮುಲು ಅವರಿಗೂ ಸೂಕ್ತವಾದ ಸ್ಥಾನಮಾನ ಕೊಡದೆ ಅನ್ಯಾಯ ಮಾಡಿದರು. ಈಗ ಕಾಂಗ್ರೆಸ್ ಸರ್ಕಾರದಲ್ಲಿ ನಾಗೇಂದ್ರ ಅವರ ಮೇಲೆ ಆರೋಪ ಹೊರಿಸಿ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಿಸಿದ್ದಾರೆ. ಪ್ರಸ್ತುತ ಸಹಕಾರ ಸಚಿವ ಕೆಎನ್.ರಾಜಣ್ಣ ಅವರ ವಿರುದ್ಧ ಷಡ್ಯಂತರ ಮಾಡುತ್ತಿದ್ದಾರೆ. ಇದನ್ನು ಸಮುದಾಯ ತೀವ್ರವಾಗಿ ಖಂಡಿಸುತ್ತದೆ ಎಂದರು.

ನಾಯಕ ಸಮುದಾಯದ ರಾಜಕೀಯ ಮುಖಂಡರ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿ ರಾಜಕೀಯದಲ್ಲಿ ತುಳಿಯುವ ಪ್ರಯತ್ನ ಮಾಡುವುದು ಮುಂದುವರಿದಲ್ಲಿ ರಾಜ್ಯಾದ್ಯಂತ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ. ಹೀಗಾಗಿ ಇದಕ್ಕೆ ಅವಕಾಶ ನೀಡದೆ ಸಮುದಾಯದ ರಾಜಕೀಯ ಮುಖಂಡರ ಮೇಲೆ ಆರೋಪ ಮಾಡುವುದನ್ನು ನಿಲ್ಲಿಸಬೇಕೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಮುಖಂಡರಾದ ಮಯೂರ ಕಲ್ಕುಣಿಕೆ, ಪ್ರಭಾಕರ್ ಹುಣಸೂರು, ಮೂರ್ತಿ, ರಾಜು ಮಾರ್ಕೆಟ್, ಶ್ರೀಧರ್ ಚಾಮುಂಡಿಬೆಟ್ಟ ಉಪಸ್ಥಿತರಿದ್ದರು.

ನಾಳೆ 'ಜಾನಪದ ಬಹುಮುಖಿ ನೆಲೆಗಳು' ವಿಚಾರ ಸಂಕಿರಣ

ಮೈಸೂರು,ಮಾ.24(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಬಿಎಂಶ್ರೀ ಸಭಾಂಗಣದಲ್ಲಿ ಮಾ.26 ರಂದು ಬೆಳಗ್ಗೆ 10.30ಕ್ಕೆ 'ಜಾನಪದ: ಬಹುಮುಖಿ ನೆಲೆಗಳು' ಕುರಿತ ಒಂದು ದಿನದ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಹಾರಾಜ ಕಾಲೇಜು ಜಾನಪದ ವಿಭಾಗ, ಬೆಳಗಾವಿಯ ಶ್ರೀಮತಿ ಕುಸುಮಾವತಿ ಮಿರಜಿ ಕಲಾ, ವಾಣಿಜ್ಯ ಮಹಾವಿದ್ಯಾಲಯದ ಕನ್ನಡದ ವಿಭಾಗ ಹಾಗೂ ಕರ್ನಾಟಕ ಜಾನಪದ ಸಂಶೋಧಕರ ಒಕ್ಕೂಟ ಸಹಯೋಗದಲ್ಲಿ ವಿಚಾರ ಸಂಕಿರಣ ಆಯೋಜಿಸಲಾಗಿದೆ. ವಿಚಾರ ಸಂಕಿರಣವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಲಿದ್ದು, ಜಾನಪದ ವಿದ್ವಾಂಸ ಪ್ರೊ.ಕೃಷ್ಣಮೂರ್ತಿ ಕೃತಿ ಬಿಡುಗಡೆ ಮಾಡಲಿದ್ದಾರೆ. ಪ್ರೊ.ಎನ್.ಕೆ. ಲೋಲಾಕ್ಷಿ ಅಧ್ಯಕ್ಷತೆ ವಹಿಸಲಿದ್ದಾರೆ.


ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ, ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು, ಪ್ರೊ.ಹೆಚ್.ಆರ್.ಚೇತನ, ಪ್ರೊ.ವಿಜಯಲಕ್ಷ್ಮೀ ಮನಾಪುರ, ಡಾ.ಹೊಂಬಯ್ಯ ಹೊನ್ನಲಗೆರೆ ಭಾಗವಹಿಸಲಿದ್ದಾರೆ.

ಮಧ್ಯಾಹ್ನ 4 ಗಂಟೆಗೆ ಸಮಾರೋಪ ಸಮಾರಂಭದಲ್ಲಿ ಜಾನಪದ ವಿದ್ವಾಂಸ ಪ್ರೊ.ಪಿ.ಕೆ.ರಾಜಶೇಖರ್ ಸಮಾರೋಪ ನುಡಿಗಳನ್ನಾಡಲಿದ್ದಾರೆ. ಪ್ರಾಧ್ಯಾಪಕಿ ಪ್ರೊ.ವಿಜಯಕುಮಾರಿ ಎಸ್.ಕರಿಕಲ್ ಭಾಗವಹಿಸಲಿದ್ದು, ಪ್ರೊ.ಎಂ. ನಂಜಯ್ಯ ಹೊಂಗನೂರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಕರ್ನಾಟಕ ಜಾನಪದ ಸಂಶೋಧಕರ ಒಕ್ಕೂಟದ ಅಧ್ಯಕ್ಷ ಕಲ್ಲಹಳ್ಳಿ ಕುಮಾರ್ ತಿಳಿಸಿದ್ದಾರೆ.

ಛತ್ತೀಸ್‌ಗಢದಲ್ಲಿ 22 ನಕ್ಸಲೀಯರ ಶರಣಾಗತಿ

ಬಿಜಾಪುರ: ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ ತಲೆಗೆ 13 ಲಕ್ಷ ರೂ. ಇನಾಮು ಹೊಂದಿದ್ದ 6 ಮಂದಿ ಸೇರಿದಂತೆ 22 ನಕ್ಸಲೀಯರು ಭಾನುವಾರ ಶರಣಾಗಿದ್ದಾರೆ. ಇವರಲ್ಲಿ ಐದು ಮಂದಿ ತಲೆಗೆ ರೂ. 2 ಲಕ್ಷ ಇನಾಮು ಹೊಂದಿದ್ದರೆ, ಒಬ್ಬರ ತಲೆಗೆ ರೂ. 1 ಲಕ್ಷ ಬಹುಮಾನ ಘೋಷಿಸಲಾಗಿತ್ತು. ಈ ವರ್ಷ ಇಲ್ಲಿವರೆಗೆ 107 ನಕ್ಸಲೀಯರು ಶಸ್ತ್ರಾಸ್ತ್ರಗಳನ್ನು ತ್ಯಜಿಸಿದ್ದು, 82 ಮಂದಿಯನ್ನು ಹೊಡೆದುರುಳಿಸಲಾಗಿದೆ. 143 ನಕ್ಸಲೀಯರನ್ನು ಬಿಜಾಪುರದಲ್ಲಿ ಬಂಧಿಸಲಾಗಿದೆ ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ. ಶರಣಾಗಿರುವ ನಕ್ಸಲೀಯರು ಅಮಾನವೀಯ ಮತ್ತು ಪೊಳ್ಳು ನಕ್ಸಲ್ ಸಿದ್ಧಾಂತವನ್ನು ಖಂಡಿಸಿದ್ದು, ರಾಜ್ಯ ಸರ್ಕಾರದ ನಕ್ಸಲಿಸಂ ನಿರ್ಮೂಲನೆ ನೀತಿ ಮತ್ತು ಪೊಲೀಸರ ಪುನರ್ವಸತಿ ಅಭಿಯಾನವನ್ನು ಶ್ಲಾಘಿಸಿದ್ದಾರೆ. ಅವರು ಸರ್ಕಾರದ ಶರಣಾಗತಿ ಮತ್ತು ಪುನರ್ವಸತಿ ನೀತಿಯ ಪ್ರಕಾರ ಪ್ರಯೋಜನಗಳನ್ನು ಪಡೆಯುತ್ತಾರೆ" ಎಂದು ಅವರು ಹೇಳಿದರು.

ಭಗೀರಥ ಉಪ್ಪಾರ ಸಮಾಜದ ನೂತನ ಪದಾಧಿಕಾರಿಗಳಿಗೆ ಸನ್ಮಾನ



ಮೈಸೂರು ಜಿಲ್ಲಾ ಭಗೀರಥ ಉಪ್ಪಾರ ಸಮಾಜಕ್ಕೆ ಜಿಲ್ಲಾಧ್ಯಕ್ಷರಾಗಿ ಮರು ಆಯ್ಕೆಯಾದ ಎಸ್.ಯೋಗೀಶ ಉಪ್ಪಾರ ಹಾಗೂ ಪದಾಧಿಕಾರಿಗಳನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಸನ್ಮಾನಿಸಲಾಯಿತು.

ಮೈಸೂರು,ಮಾ.24(ಎಸ್‌ಪಿಎನ್)– ಮೈಸೂರು ಜಿಲ್ಲಾ ಭಗೀರಥ ಉಪ್ಪಾರ ಸಮಾಜಕ್ಕೆ ಜಿಲ್ಲಾಧ್ಯಕ್ಷರಾಗಿ ಮರು ಆಯ್ಕೆಯಾದ ಎಸ್.ಯೋಗೀಶ ಉಪ್ಪಾರ ಹಾಗೂ ಪದಾಧಿಕಾರಿಗಳನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಸನ್ಮಾನಿಸಲಾಯಿತು.

ಮೈಸೂರು ಜಲದರ್ಶನ ಅತಿಥಿಗೃಹದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಂ ನೇತೃತ್ವದಲ್ಲಿ ಸನ್ಮಾನಿಸಿದರು. ಈ ವೇಳೆ ಜಿಲ್ಲಾ ಕುಂಬಾರ ಸಮಾಜದ ಅಧ್ಯಕ್ಷ ಎಚ್.ಎಸ್.ಪ್ರಕಾಶ್, ಜಿಲ್ಲಾ ಮಡಿವಾಳ ಮಾಚಿದೇವರ ಸಮಾಜದ ಅಧ್ಯಕ್ಷ ರವಿನಂದನ್, ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಮಂಜುನಾಥ್, ಜಿಲ್ಲಾ ಆರ್ಯ ಈಡಿಗರ ಸಮಾಜದ ಮುಖಂಡ ಅಧ್ಯಕ್ಷ ಶೇಖರ್ ನಂಜನಗೂಡು, ಎಸ್.ಟಿ. ಸಮಾಜದ ಅಧ್ಯಕ್ಷ ದೇವಪ್ಪ ನಾಯಕ, ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಮೊಗಣ್ಣಚಾರ್, ಉಪ್ಪಾರ ಸಮಾಜದ ಪದಾಧಿಕಾರಿಗಳಾದ ರಾಮಕೃಷ್ಣ, ಮಂಜುನಾಥ್ ಕಂಟ್ರಾಕ್ಟರ್, ರಾಜೇಶ್, ಶಿವಲಿಂಗಪ್ಪ, ಗೋವಿಂದ ಶೆಟ್ಟಿ, ಬಸವರಾಜು, ಶಿವಮಲ್ಲು, ಚಂದ್ರಪ್ಪ, ಅಹಿಂದ ಲೋಕೇಶ್‌ಕುಮಾರ್ ಮಾದಾಪುರ, ದೀಪಕ್ ಪುಟ್ಟಸ್ವಾಮಿ, ಮಹೇಂದ್ರ ಕಾಗಿನೆಲೆ, ಕುರುಬ ಸಮುದಾಯದ ಮಹಿಳಾ ಮುಖಂಡರಾದ ಶೋಭಾ, ರವಿಕುಮಾರ್, ಕೇಶವ ನಂಜುಂಡ, ದಲಿತ ಮುಖಂಡರಾದ ರಾಜ ಶೇಖರ್, ರಾಜ್ಯ ಬುಡಕಟ್ಟು ಸಮಾಜದ ಕಾರ್ಯದರ್ಶಿ ಶಿಂಶ ದಿನೇಶ್, ಕಾಂಗ್ರೆಸ್‌ನ ಮುಖಂಡ ಸುನಿಲ್ ನಾರಾಯಣ್, ನಜರ್‌ಬಾದ್ ರವಿಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಟ್ರಂಪ್ ಮಾಜಿ ಸೊಸೆ ಜೊತೆ ಸಂಬಂಧ ದೃಢಪಡಿಸಿದ ಟೈಗರ್ ವುಡ್ಸ್!



ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಾಜಿ ಸೊಸೆ ವನೆಸ್ಸಾ ಟ್ರಂಪ್ ಅವರ ಜೊತೆ ತಮ್ಮ ಸಂಬಂಧವನ್ನು ಅಮೆರಿಕದ ವೃತ್ತಿಪರ ಗಾಲ್ಫರ್ ಟೈಗರ್ ವುಡ್ಸ್ ದೃಢಪಡಿಸಿದ್ದಾರೆ. ಸೋಷಿಯಲ್ ಮೀಡಿಯಾದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ವುಡ್ಸ್ ಎರಡು ಇಮೇಜ್‌ಗಳೊಂದಿಗೆ 'ಎಲ್ಲೆಡೆ ಪ್ರೀತಿ ತುಂಬಿದೆ' ಎಂದು ಬರೆದುಕೊಂಡಿದ್ದಾರೆ. ಪ್ರೀತಿ ಎಲ್ಲೆಡೆ ಕಾಣುತ್ತಿದೆ, ನೀನು ನನ್ನ ಪಕ್ಕದಲ್ಲಿದ್ದರೆ ಜೀವನ ಇನ್ನಷ್ಟು ಉತ್ತಮವಾಗಿದೆ. ನಾವು ಒಟ್ಟಿಗೆ ಜೀವನದ ಮೂಲಕ ನಮ್ಮ ಭವಿಷ್ಯದ ಪ್ರಯಾಣವನ್ನು ಎದುರು ನೋಡುತ್ತಿದ್ದೇವೆ ಎಂದು ಟೈಗರ್ ವುಡ್ಸ್ ಎಕ್ಸ್ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ. ಒಂದು ಫೋಟೋದಲ್ಲಿ ವುಡ್ಸ್ ಮತ್ತು ವನೆಸ್ಸಾ ಟ್ರಂಪ್ ಒಟ್ಟಿಗೆ ಪೋಸ್ ನೀಡುತ್ತಿದ್ದರೆ, ಇನ್ನೊಂದು ಫೋಟೋದಲ್ಲಿ ಅವರು ತೂಗು ಮಂಚದಲ್ಲಿ ಮಲಗಿ ಎದೆಯ ಮೇಲೆ ತೋಳು ಕಟ್ಟಿಕೊಂಡು ಆಕಾಶದತ್ತ ನೋಡುತ್ತಿದ್ದಾರೆ. ವುಡ್ಸ್ ಮತ್ತು ವನೆಸ್ಸಾ ಟ್ರಂಪ್ ಕಳೆದ ಕೆಲವು ವಾರಗಳಿಂದ ಗಾಸಿಪ್ ಮಾಧ್ಯಮಗಳಲ್ಲಿ ಕಾಣಿಸಿಕೊಂಡಿದ್ದರು. ಅವರು ಡೊನಾಲ್ಡ್ ಟ್ರಂಪ್ ಜೂನಿಯರ್ ಅವರನ್ನು ಮದುವೆಯಾಗಿ 12 ವರ್ಷ ಸಂಸಾರ ನಡೆಸಿ 5 ಮಕ್ಕಳನ್ನು ಹೊಂದಿದ್ದಾರೆ.

ಎಂಟು ಸಿಪಿಐ(ಎಂ) ಕಾರ್ಯಕರ್ತರಿಗೆ ಜೀವಾವಧಿ ಶಿಕ್ಷೆ



ಕಣ್ಣೂರು: ಸುಮಾರು ಎರಡು ದಶಕಗಳ ಹಿಂದೆ ಕೇರಳದ ಕಣ್ಣೂರಿನಲ್ಲಿ ನಡೆದಿದ್ದ ಬಿಜೆಪಿ ಕಾರ್ಯಕರ್ತನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಂಟು ಸಿಪಿಐ(ಎಂ) ಕಾರ್ಯಕರ್ತರಿಗೆ ಕೇರಳದ ನ್ಯಾಯಾಲಯ ಸೋಮವಾರ ಜೀವಾವಧಿ ಶಿಕ್ಷೆ ವಿಧಿಸಿದೆ.

ಬಿಜೆಪಿ ಕಾರ್ಯಕರ್ತ ಎಳಂಬಿಲಾಯಿ ಸೂರಜ್ ಹತ್ಯೆ ಪ್ರಕರಣದಲ್ಲಿ ಒಂಬತ್ತು ಸಿಪಿಐ(ಎಂ) ಕಾರ್ಯಕರ್ತರು ತಪ್ಪಿತಸ್ಥರೆಂದು ತಲಶ್ಶೇರಿ ಪ್ರಧಾನ ಸೆಷನ್ಸ್ ನ್ಯಾಯಾಧೀಶ ಕೆ ಟಿ ನಿಸಾರ್ ಅಹಮ್ಮದ್ ಶುಕ್ರವಾರ ತೀರ್ಪು ನೀಡಿದ್ದಾರೆ. 8 ಜನರಿಗೆ ಜೀವಾವಧಿ ಶಿಕ್ಷೆ ಮತ್ತು ತಲಾ 50,000 ರೂ. ದಂಡ ವಿಧಿಸಿದರೆ, ಮತ್ತೊಬ್ಬ ಅಪರಾಧಿಗೆ 3 ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು 25,000 ರೂ. ದಂಡ ವಿಧಿಸಲಾಗಿದೆ. ಸಿಪಿಐ(ಎಂ) ತೊರೆದು ಬಿಜೆಪಿ ಸೇರಿದ ನಂತರ ರಾಜಕೀಯ ವೈಷಮ್ಯದಿಂದಾಗಿ ಸೂರಜ್‌ನನ್ನು ಕೊಲೆ ಮಾಡಲಾಗಿದೆ. 2012ರಲ್ಲಿ ನಡೆದಿದ್ದ ಟಿಪಿ ಚಂದ್ರಶೇಖರನ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈನಲ್ಲಿ ಬಂಧನಕ್ಕೊಳಗಾದ ರಾಜೇಶ್ ಪೊಲೀಸರಿಗೆ ನೀಡಿದ ಹೇಳಿಕೆಯನ್ನು ಆಧರಿಸಿ ರಾಜೇಶ್ ಮತ್ತು ಮನೋರಾಜ್ ಅವರನ್ನು ಪ್ರಕರಣದಲ್ಲಿ ಹೆಸರಿಸಲಾಗಿದೆ.

ಏ.28ಕ್ಕೆ ಕೆನಡಾ ಸಂಸತ್‌ಗೆ ಅವಧಿಪೂರ್ವ ಚುನಾವಣೆ



ಒಟ್ಟಾವಾ: ಕೆನಡಾದ ಪ್ರಧಾನಿಯಾಗಿ ಜಸ್ಟಿನ್ ಟ್ರುಡೊ ಅವರ ನಂತರ ಅಧಿಕಾರ ವಹಿಸಿಕೊಂಡ ಮಾರ್ಕ್ ಕಾರ್ನಿ ಅವರು ಏಪ್ರಿಲ್ 28 ರಂದು ದಿಢೀರ್ ಚುನಾವಣೆ ಘೋಷಿಸಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೂತನ ಸುಂಕ ನೀತಿಗಳ ಘೋಷಣೆಗಳಿಂದ ಆರ್ಥಿಕತೆಗೆ ಎದುರಾಗಿರುವ ಬೆದರಿಕೆಯನ್ನು ಎದುರಿಸಲು ಪ್ರಬಲ ಜನಾದೇಶವನ್ನು ಕೋರಿದ್ದಾರೆ. ಟ್ರಂಪ್ ಅವರ ಸುಂಕ ನೀತಿಗಳನ್ನು ಕೆನಡಾ ಎದುರಿಸುವ ಅಗತ್ಯವಿದೆ. ಅಂತಹ ನಿರ್ಣಾಯಕ ಕ್ಷಣಗಳಲ್ಲಿ ದೇಶವನ್ನು ಯಾರು ಮುನ್ನಡೆಸಬೇಕು ಎಂಬುದರ ಕುರಿತು ಕೆನಡಿಯನ್ನರು ನಿರ್ಧರಿಸಬೇಕು ಎಂದು ಕಾರ್ನಿ ಹೇಳಿದರು. ಸಂಸತ್ ವಿಸರ್ಜಿಸಿರುವ ಲಿಬರಲ್ ಪಕ್ಷದ ಮುಖ್ಯಸ್ಥರಾಗಿರುವ ಪ್ರಧಾನಿ ಮಾರ್ಕ್ ಕಾರ್ನಿ, ಆರು ತಿಂಗಳು ಮೊದಲೇ ಅಂದರೆ ಏಪ್ರಿಲ್ 28ಕ್ಕೆ ಸಂಸತ್‌ಗೆ ಚುನಾವಣೆ ನಡೆಯಲಿದೆ ಎಂದು ಪ್ರಕಟಿಸಿದ್ದಾರೆ. ಗವರ್ನರ್ ಜನರಲ್ (ಬ್ರಿಟನ್ ದೊರೆ ಚಾರ್ಲ್ಸ್ ಪ್ರತಿನಿಧಿ) ಅವರನ್ನು ಭೇಟಿಯಾದ ಪ್ರಧಾನಿ ಕಾರ್ನಿ, ಸಂಸತ್ ವಿಸರ್ಜನೆಗೆ ಮನವಿ ಸಲ್ಲಿಸಿದರು. ಚುನಾವಣೆ ನಡೆಸಲು ಪ್ರಕ್ರಿಯೆಯನ್ನು ಆರಂಭಿಸಲು ಚುನಾವಣಾ ಆಯೋಗಕ್ಕೆ ಸೂಚನೆ ನೀಡಿದರು.

ಅತ್ಯಾಚಾರ ಯತ್ನ; ರೈಲಿನಿಂದ ಜಿಗಿದ ಮಹಿಳೆ ಗಂಭೀರ



ಹೈದರಾಬಾದ್: 25 ವರ್ಷದ ಯುವಕನೊಬ್ಬ ಅತ್ಯಾಚಾರಕ್ಕೆ ಯತ್ನಿಸಿದ ನಂತರ ಚಲಿಸುತ್ತಿದ್ದ ರೈಲಿನಿಂದ ಜಿಗಿದ 23 ವರ್ಷದ ಮಹಿಳೆಯೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಶನಿವಾರ ರಾತ್ರಿ ಕೊಂಪಲ್ಲಿ ಬಳಿ ಈ ಘಟನೆ ನಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಮಹಿಳೆ ಮರುದಿನ ಸರ್ಕಾರಿ ರೈಲ್ವೆ ಪೊಲೀಸರಿಗೆ (ಜಿಆರ್‌ಪಿ) ದೂರು ಸಲ್ಲಿಸಿದ್ದಾರೆ. ಅನಂತಪುರ ಜಿಲ್ಲೆಯ ಸಂತ್ರಸ್ತೆ ಹೈದರಾಬಾದಿನ ಖಾಸಗಿ ಸಂಸ್ಥೆಯೊಂದರ ಉದ್ಯೋಗಿಯಾಗಿದ್ದಾರೆ. ತನ್ನ ಮೊಬೈಲ್ ಡಿಸ್ ಪ್ಲೇ ರಿಪೇರಿ ಮಾಡಿಸಲು ಮಾರ್ಚ್ 22 ರಂದು ಮಧ್ಯಾಹ್ನ 3 ಗಂಟೆಯಲ್ಲಿ ಮೆಡ್ಚಲ್‌ನಿಂದ ಸಿಕಂದರಾಬಾದ್‌ಗೆ ತೆರಳುತ್ತಿದ್ದಾಗ ತನ್ನ ಮೇಲೆ ಅತ್ಯಾಚಾರದ ಯತ್ನ ನಡೆದಿರುವುದಾಗಿ ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ರಿಪೇರಿ ಮುಗಿಸಿ ಸಿಕಂದರಾಬಾದ್ ರೈಲು ನಿಲ್ದಾಣಕ್ಕೆ ಹೋಗಿ, ಮೇಡ್ಚಲ್‌ಗೆ ಸಾಮಾನ್ಯ ಟಿಕೆಟ್ ಖರೀದಿಸಿದ್ದು, ಸಂಜೆ 7.15ಕ್ಕೆ ಮಹಿಳೆಯರ ಎಂಎಂಟಿಎಸ್ ರೈಲಿನ ಮಹಿಳೆಯರ ಬೋಗಿಯಲ್ಲಿ ಚಲಿಸುತ್ತಿದ್ದಾಗ ಸುಮಾರು 25 ವರ್ಷದ ಅಪರಿಚಿತ ಯುವಕ ಆಕೆಯೊಂದಿಗೆ ಲೈಂಗಿಕವಾಗಿ ಕಿರುಕುಳ ನೀಡಲು ಪ್ರಾರಂಭಿಸಿ ದ್ದಾನೆ. ಆಕೆ ನಿರಾಕರಿಸಿದ್ದು, ಅತ್ಯಾಚಾರದಿಂದ ಪಾರಾಗಲು ಚಲಿಸುತ್ತಿದ್ದ ರೈಲಿನಿಂದ ಜಿಗಿದಿದ್ದು, ತನ್ನ ತಲೆ, ಕೈ,ಮೊಣಕಾಲಿಗೆ ತೀವ್ರವಾಗಿ ಗಾಯಗೊಂಡಿರುವುದಾಗಿ ಪೊಲೀಸರಿಗೆ ಸಂತ್ರಸ್ತೆ ಮಾಹಿತಿ ನೀಡಿದ್ದಾರೆ.

ನೊಬೆಲ್ ಶಾಂತಿ ಪ್ರಶಸ್ತಿ ಪಟ್ಟಿಯಲ್ಲಿರುವ ಬಲೂಚ್‌ಗೆ 'ಉಗ್ರ' ಪಟ್ಟ

ಇಸ್ಲಾಮಾಬಾದ್: ಪಾಕಿಸ್ತಾನದ ಶಹಬಾಜ್ ಸರ್ಕಾರವು ಬಲೂಚಿಗಳ ವಿರುದ್ಧ ಉಗ್ರ ರೂಪ ತಾಳಿದ್ದು, ಕಠಿಣ ಕ್ರಮ ಕೈಗೊಳ್ಳಲು ಹೊಸ ಸಿದ್ಧತೆ ಆರಂಭಿಸಿದೆ. ಅದರಂತೆ ಬಲೂಚ್ ಯಕ್ಜೆತಿ ಸಮಿತಿ ಮುಖ್ಯಸ್ಥೆ ಮೆಹ್ರಾಂಗ್ ಬಲೂಚ್ ಮತ್ತು ಇತರ ಕಾರ್ಯಕರ್ತರ ಮೇಲೆ ಭಯೋತ್ಪಾದನೆಯ ಆರೋಪ ಹೊರಿಸಲಾಗಿದೆ.

2025ರ ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿರುವ ಬಲೂಚಿಸ್ತಾನದ ಮಾನವ ಹಕ್ಕುಗಳ ಕಾರ್ಯಕರ್ತೆ ಮೆಹ್ರಾಂಗ್ ಬಲೂಚ್ ಅವರ ವಿರುದ್ಧ ಪಾಕಿಸ್ತಾನವು ಭಯೋತ್ಪಾದನೆ ಆರೋಪ ಹೊರಿಸಿ ಪ್ರಕರಣ ದಾಖಲಿಸಿ, ಬಂಧಿಸಿದೆ. ಶಾಂತಿಯುತ ಪ್ರತಿಭಟನೆಗಳಿಗಾಗಿ ಬಂಧಿಸಲ್ಪಟ್ಟಿರುವ ಮೆಹ್ರಾಂಗ್ ಬಲೂಚ್ ಮತ್ತು ಇತರರನ್ನು ಪಾಕಿಸ್ತಾನಿ ಅಧಿಕಾರಿಗಳು ತಕ್ಷಣ ಬಿಡುಗಡೆ ಮಾಡಬೇಕು ಮತ್ತು ಬಲೂಚ್ ಕಾರ್ಯಕರ್ತರನ್ನು ಕಾನೂನುಬಾಹಿರವಾಗಿ ಬಂಧಿಸಲು ಕ್ಷುಲ್ಲಕ ಪ್ರಕರಣಗಳನ್ನು ಬಳಸುವುದನ್ನು ತಪ್ಪಿಸಬೇಕು ಎಂದು ಬಲೂಚ್ ಯಕ್ಜೆತಿ ಸಮಿತಿ ಆಗ್ರಹಿಸಿದೆ. ಡಾ.ಮೆಹ್ರಾಂಗ್ ಬಲೂಚ್ ಅವರು ಪ್ರಮುಖ ಬಲೂಚ್ ಮಹಿಳಾ ಮಾನವ ಹಕ್ಕುಗಳ ಕಾರ್ಯಕರ್ತೆಯಾಗಿದ್ದಾರೆ. ಜೊತೆಗೆ ಅವರು 2025ರ ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ.

ನಿವೃತ್ತ ಸೈನಿಕರ ಬೃಹತ್ ಸಮಾವೇಶ

ಮಡಿಕೇರಿ,ಮಾ.24: ಭಾರತೀಯ ಭೂ ಸೇನಾ ದಕ್ಷಿಣ ವಲಯದ ಸೇನಾ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಧೀರಜ್ ಸೇತ್ ಪಿವಿಎಸ್‌ಎಂ, ಎವಿಎಸ್‌ಎಂ ನೇತೃತ್ವದಲ್ಲಿ ನಗರದ ಕ್ರಿಸ್ಟಲ್ ಕೋರ್ಟ್ ಸಭಾಂಗಣದಲ್ಲಿ ನಿವೃತ್ತ ಸೈನಿಕರ ಕುಂದು ಕೊರತೆಗಳನ್ನು ಪರಿಹರಿಸುವ ಬೃಹತ್ ಸಮಾವೇಶ ನಡೆಯಿತು.

ಕೊಡಗಿನಲ್ಲಿ ನೆಲೆಸಿರುವ ಮಾಜಿ ಯೋಧರು, ವೀರನಾರಿಯರು, ಮಾಸಿಕ ಪಿಂಚಣಿ, ಸೇವೆ ಸಲ್ಲಿಸಿದ ದಾಖಲೆಗಳಲ್ಲಿನ ಲೋಪದೋಷ, ಪಿಂಚಣಿ ಸಮಸ್ಯೆಗಳನ್ನು ಪರಿಹರಿಸಲು ಸ್ಥಳದಲ್ಲೇ ವ್ಯವಸ್ಥೆ ಮಾಡಲಾಗಿತ್ತು. ಭಾರತೀಯ ಸೇನೆಯ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸಿದವರಿಗೆ, ಅವರವರ ವಿಭಾಗದಲ್ಲಿನ ದಾಖಲೆಗಳನ್ನು ಸರಿಪಡಿಸಿಕೊಳ್ಳುವ ಸಲುವಾಗಿ ಭಾರತೀಯ ಸೇನೆಯ 8 ವಿಭಾಗಗಳ ಅಧಿಕಾರಿಗಳು ಸ್ಥಳದಲ್ಲೇ ಹಾಜರಿದ್ದು, ನಿವೃತ್ತ ಸೈನಿಕರು ಮತ್ತು ಅವರ ಅವಲಂಬಿತರಿಗೆ ಸೇವೆ ಒದಗಿಸಿದರು. ಎ.ಎಸ್.ಸಿ, ಎಂ.ಇ.ಜಿ, ಡಿ.ಎಸ್‌ಸಿ, ಇ.ಎಂ.ಇ, ಎಂಆರ್‌.ಸಿ, ಎ.ಎಂ.ಸಿ, ಸಿಗ್ನಲ್ಸ್, ಅಗ್ನಿವೀರ್, ಭೂ ಸೇನಾ ಕೇಂದ್ರಾಲಯದ ಅಧಿಕಾರಿಗಳು ಸಿಬ್ಬಂದಿ ಶಿಬಿರದಲ್ಲಿ ಪಾಲ್ಗೊಂಡಿದ್ದರು. ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ನಿವೃತ್ತ ಯೋಧರು ಮತ್ತು ಅವರ ಅವಲಂಬಿತರು ಶಿಬಿರದ ಪ್ರಯೋಜನ ಪಡೆದರು.



ನಿವೃತ್ತ ಸೈನಿಕರ ಬೃಹತ್ ಸಮಾವೇಶವನ್ನು ಲೆ.ಜ.ಧೀರಜ್ ಸೇತ್ ಉದ್ಘಾಟಿಸಿದರು.

ನಿವೃತ್ತರ ಸೇವೆ ಲಭಿಸಲಿ: ಭಾರತೀಯ ಭೂ ಸೇನೆ ತನ್ನ ನಿವೃತ್ತ ಯೋಧರು ಮತ್ತವರ ಅವಲಂಬಿತರ ಕುಂದುಕೊರತೆಗಳನ್ನು ಆಲಿಸಲು ದೇಶದಾದ್ಯಂತ ಇಂತಹ ಶಿಬಿರಗಳನ್ನು ಆಯೋಜಿಸುತ್ತಿದೆ. ಆ ಮೂಲಕ ಸೇನೆ ಮತ್ತು ನಿವೃತ್ತರ ನಡುವೆ ನಿರಂತರ ಸಂಪರ್ಕ ಬೆಳೆಸಿಕೊಳ್ಳುತ್ತಿದೆ. ದೈಹಿಕ ಕ್ಷಮತೆ ಹೊಂದಿರುವ ನಿವೃತ್ತ ಸೈನಿಕರ ಸೇವೆ ಸಮಾಜ ಮತ್ತು ದೇಶಕ್ಕೆ ಲಭ್ಯವಾಗಬೇಕು. ಈ ನಿಟ್ಟಿನಲ್ಲಿ ಅಗತ್ಯವಿರುವ ಕೌಶಲ್ಯಾಭಿವೃದ್ಧಿ ಯೋಜನೆ ಜಾರಿಗೆ ತರುವಂತೆ ರಾಜ್ಯದ ಮುಖ್ಯಮಂತ್ರಿಗಳಿಗೂ ಪತ್ರ ಬರೆಯಲಾಗಿದೆ. ಈ ಯೋಜನೆಯಿಂದ ಸಮಾಜ ಮತ್ತು ದೇಶದ ಅಭಿವೃದ್ಧಿಯೂ ಸಾಧ್ಯವಾಗಲಿದೆ ಎಂದು ಲೆಫ್ಟಿನೆಂಟ್ ಜನರಲ್ ಧೀರಜ್ ಸೇತ್ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ರ‍್ಯಾಂಕ್‌ಗಳ ಸೇನಾಧಿಕಾರಿಗಳು, ಜಿಲ್ಲಾ ಉಪ ವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಜಿಲ್ಲಾ ಸೈನಿಕ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ಆರ್.ಶೆಟ್ಟಿ, ನಿವೃತ್ತ ಮೇಜರ್ ಜನರಲ್ ಬಿ.ಎ.ಕಾರ್ಯಪ್ಪ, ಕೊಡಗು ಜಿಲ್ಲಾ ಮಾಜಿ ಸೈನಿಕರ ಸಂಘದ ಪ್ರಮುಖರಾದ ಮೇಜರ್ ಓ.ಎಸ್. ಚಿಂಗಪ್ಪ, ಪ್ರಮುಖರಾದ ಸುಬೇದಾರ್ ಮೇಜರ್ ವಾಸಪ್ಪ ಅಗರಿಮನೆ, ಹವಾಲ್ದಾರ್ ಕುಟ್ಟಂಡ ನಂದಾ ಮಾದಪ್ಪ(ನಿವೃತ್ತ), ಹವಾಲ್ದಾರ್ ಮಾದೆಯಂಡ ನಾಚಪ್ಪ, ಸುಬೇದಾರ್ ಮೇಜರ್ ನಾಟೋಳಂಡ ಸೋಮಯ್ಯ, ಹವಾಲ್ದಾರ್ ಕೂಪದಿರ ಮುತ್ತಣ್ಣ ಮತ್ತಿತರರು ಉಪಸ್ಥಿತರಿದ್ದರು.

ಸೇನಾ ಪದಕದ ಗೌರವ

ಸೇನಾ ನಿವೃತ್ತಿಯ ನಂತರ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಸಾಧನೆ ತೋರಿದ 5 ಮಂದಿಗೆ ಸೇನಾ ಗೌರವದ ಪದಕ ನೀಡಿ ಗೌರವಿಸಲಾಯಿತು. ಪರಿಸರ ರಕ್ಷಣೆಗಾಗಿ ಕರ್ನಲ್ ಸಿ.ಪಿ.ಮುತ್ತಣ್ಣ, ಜನರಲ್ ತಿಮ್ಮಯ್ಯ ಮ್ಯೂಸಿಯಂ ಸ್ಥಾಪನೆಗೆ ಶ್ರಮ ವಹಿಸಿದ ಮೇಜರ್ ಬಿ.ಎ.ನಂಜಪ್ಪ, ಜನರಲ್ ತಿಮ್ಮಯ್ಯ ಮ್ಯೂಸಿಯಂ ಮೇಲ್ವಿಚಾರಕ ಸುಬೇದಾರ್ ಮೇಜರ್ ಜಿ.ಕೆ. ತಿಮ್ಮಯ್ಯ, ಕೊಡಗು ಬಾಕ್ಸಿಂಗ್ ಅಸೋಷಿಯೇಶನ್ ಸ್ಥಾಪನೆಗಾಗಿ ಹವಾಲ್ದಾರ್ ಬಿ.ಕೆ. ಮೇದಪ್ಪ ಪರವಾಗಿ ಅವರ ಪತ್ನಿ ರಾಣಿ ಮೇದಪ್ಪ, ಕೌಶಲ್ಯ ವಿಕಸನ ಶಿಬಿರ ಆಯೋಜನೆಗಾಗಿ ಡ್ರಾಫ್ಟ್‌ಮೆನ್ ಎಂ.ಕೆ. ಪೊನ್ನಪ್ಪ ಅವರು ಲೆಫ್ಟಿನೆಂಟ್ ಜನರಲ್ ಧೀರಜ್ ಸೇತ್ ಅವರಿಂದ ಗೌರವ ಪದಕ ಸ್ವೀಕರಿಸಿದರು.

ಬೋರ್‌ವೆಲ್ ಲಾರಿ ಉರುಳಿ ಮೂವರಿಗೆ ಗಾಯ

ಮಡಿಕೇರಿ,ಮಾ.24– ಮಡಿಕೇರಿ–ಕುಶಾಲನಗರ ರಾಜ್ಯ ಹೆದ್ದಾರಿಯ ಗುಡ್ಡೆಹೊಸೂರು–ಬಸವನಹಳ್ಳಿ ನಡುವೆ ಬೋರ್‌ವೆಲ್ ಲಾರಿಯೊಂದು ರಸ್ತೆ ಬದಿಯ ಕಿರುಸೇತುವೆಗೆ ಡಿಕ್ಕಿಯಾಗಿ ಉರುಳಿ ಬಿದ್ದಿದೆ. ಅಪಘಾತದಲ್ಲಿ ಪಾದಚಾರಿ ನಂಜುಂಡ ಸ್ವಾಮಿ, ಲಾರಿಯಲ್ಲಿದ್ದ ಚಾಲಕ ಸೇರಿ ಮೂವರಿಗೆ ಗಾಯಗಳಾಗಿದೆ. ಗಾಯಾಳುಗಳನ್ನು ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಗಿದೆ. ಸ್ಥಳಕ್ಕೆ ಕುಶಾಲನಗರ ಪೊಲೀಸರು, ಅಗ್ನಿಶಾಮಕ ಠಾಣೆ ಸಿಬ್ಬಂದಿಗಳು ಭೇಟಿ ನೀಡಿ ಡೀಸೆಲ್ ಸೋರಿಕೆಯಿಂದ ಬೆಂಕಿ ಅವಘಡ ತಪ್ಪಿಸಲು ಕ್ರಮ ಕೈಗೊಂಡು ಲಾರಿಯನ್ನು ಮೇಲೆತ್ತಿದರು. ಘಟನೆ ಬಗ್ಗೆ ಕುಶಾಲನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕಿರು ಸೇತುವೆಗೆ ಡಿಕ್ಕಿಯಾಗಿ ಬೋರ್‌ವೆಲ್ ಲಾರಿ ಉರುಳಿ ಬಿದ್ದಿದೆ.

ಈಜುಕೊಳ ದುರಂತ : ಯುವ ಉದ್ಯಮಿ ಸಾವು

ಕುಶಾಲನಗರ: ಚಿಕ್ಕಮಗಳೂರಿನಲ್ಲಿ ನಡೆದ ಸ್ವಿಮ್ಮಿಂಗ್ ಪೂಲ್ ದುರಂತದಲ್ಲಿ ಗಾಯಗೊಂಡಿದ್ದ ಕುಶಾಲನಗರದ ಮೊಬೈಲ್ ಶಾಪ್ ಮಾಲೀಕ ಚಿಕಿತ್ಸೆ ಫಲಕಾರಿಯಾಗದೆ ನಿಧನರಾದ ಘಟನೆ ನಡೆದಿದೆ.



ನಿಶಾಂತ್

ಮೊಬೈಲ್ ಗ್ಯಾಲೆರಿ ಮಾಲೀಕ ನಿಶಾಂತ್(35) ಮೃತ ದುರ್ದೈವಿ. ಪ್ರವಾಸಕ್ಕೆಂದು 10 ಮಂದಿಯೊಂದಿಗೆ ಚಿಕ್ಕಮಗಳೂರಿಗೆ ತೆರಳಿದ್ದಾಗ ಹೋಂ ಸ್ಟೇ ಒಂದರಲ್ಲಿ ಶನಿವಾರ ಈ ಘಟನೆ ಸಂಭವಿಸಿತ್ತು. ಈಜಲು 4.5 ಅಡಿ ಆಳದ ಸ್ವಿಮ್ಮಿಂಗ್ ಪೂಲ್‌ಗೆ ಧುಮುಕಿದಾಗ ಸ್ಪೈನಲ್ ಕಾರ್ಡ್‌ಗೆ ಪೆಟ್ಟು ಬಿದ್ದಿತ್ತು. ತಕ್ಷಣ ಸಮೀಪದ ಆಸ್ಪತ್ರೆಗೆ ದಾಖಲಿಸಿ ಹೆಚ್ಚಿನ ಚಿಕಿತ್ಸೆಗೆ ಮಂಗಳೂರಿನ ಎನಪೋಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೈದ್ಯರಿಂದ ಸಕಾರಾತ್ಮಕ ಸ್ಪಂದನೆ ದೊರೆಯದ ಕಾರಣ ಆಸ್ಪತ್ರೆಯಿಂದ ಕುಶಾಲನಗರಕ್ಕೆ ರವಾನಿಸುವ ಮಾರ್ಗ ಮಧ್ಯೆ ನಿಶಾಂತ್ ಭಾನುವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ತಾಯಿ ಹಾಗೂ ಸಹೋದರನನ್ನು ಅಗಲಿದ್ದಾರೆ.

ಹೊಂಬೆಳಕು ಕಿರಣ ಮಾಸಿಕ ತತ್ತ್ವಚಿಂತನಾಗೋಷ್ಠಿ



ಹೊಂಬೆಳಕು ಕಿರಣ 229ನೇ ಮಾಸಿಕ ತತ್ತ್ವಚಿಂತನಾಗೋಷ್ಠಿಯನ್ನು ಸಾಹಿತಿ ವಿಮಲಾ ದಶರಥ್ ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು.

ವಿರಾಜಪೇಟೆ, ಮಾ.24– ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆದ ಮಹಾ ಕುಂಭಮೇಳ ಸುಂದರವಾದ ಅನುಭವ ಎಂದು ಮೂರ್ನಾಡು ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಕಿಗ್ಗಾಲು ಜಿ.ಹರೀಶ್ ಹೇಳಿದರು.

ಇಲ್ಲಿಗೆ ಸಮೀಪದ ಅರಮೇರಿ ಕಳಂಚೇರಿ ಶ್ರೀ ಮಠದ ಸಭಾಂಗಣದಲ್ಲಿ ನಡೆದ 'ಹೊಂಬೆಳಕು ಕಿರಣ 229ನೇ ಮಾಸಿಕ ತತ್ತ್ವಚಿಂತನಾಗೋಷ್ಠಿ ಕಾರ್ಯಕ್ರಮ'ದಲ್ಲಿ 2025 ಪವಿತ್ರ ಪ್ರಯಾಗ್‌ರಾಜ್‌ನಲ್ಲಿ ನಡೆದ ಮಹಾ ಕುಂಭಮೇಳದಲ್ಲಿ ಭಾಗವಹಿಸಿದ್ದ ಕೊಡಗಿನ ಯಾತ್ರಾರ್ಥಿಗಳ ಅನುಭವ ಮತ್ತು ಕಿಗ್ಗಾಲು ಗಿರೀಶ್ ವಿರಚಿತ 5ನೇ ಪತ್ತೇದಾರಿ ಕಾದಂಬರಿ 'ಶೆಡ್ಡಿನಲ್ಲಿ ಮಾಡಿದ ಷಡ್ಯಂತ್ರ' ಎಂಬ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕುಂಭಮೇಳ ನಡೆಯುವಲ್ಲಿ ಗಂಗಾ ನದಿ, ಯಮುನೆ ಮತ್ತು ಸರಸ್ವತಿ ನದಿಗಳು ಸಂಗಮವಾಗುವಂತ ಪವಿತ್ರ ಸಳ್ಥವಾಗಿದೆ, ನಾವು ಕಂಡಂತೆ ಅಲ್ಲಿ ಸುಮಾರು 26 ಪುರಾತನ ದೇವಾಲಯಗಳಿವೆ, ನದಿಗಳಲ್ಲಿ ನುರಾರು ದೋಣಿಗಳು ಭಕ್ತರನ್ನು ಕೊಂಡೊಯ್ಯುವುದು, ಹೆಲಿಕ್ಯಾಪ್ಟರ್‌ಗಳ ಹಾರಾಟ, ಪೊಲೀಸ್ ರಕ್ಷಣಾ ಅಧಿಕಾರಿಗಳ ಸೌಜನ್ಯತೆಯ ಸಹಕಾರ, ಕುಡಿಯುವ ನೀರಿನ ಸೌಲಭ್ಯ, ಸದಾ ಸ್ವಚ್ಛತೆಯಲ್ಲಿರುವ ಪವಿತ್ರಸ್ಥಳ ನೋಡುಗರಿಗೆ ಮತ್ತೊಮ್ಮೆ ನೋಡಬೇಕೆನ್ನುವ ಸ್ಥಳವಾಗಿದೆ ಎಂದರು.

ವಿರಾಜಪೇಟೆ ಸಾಹಿತಿ ವಿಮಲಾ ದಶರಥ್ ಮೊದಲಿಗೆ ಜ್ಯೋತಿ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿದರೆ, ಶಿಕ್ಷಣ ಇಲಾಖೆಯ ಬಿ.ಆರ್.ಪಿ. ಶೈಲವೆಂಕಟೇಶ್ ಮಾತನಾಡಿದರು. ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀ ಮಠದ ಅಧ್ಯಕ್ಷ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಕಿಗ್ಗಾಲು ಗಿರೀಶ್ ಬರೆದ ಪತ್ತೆದಾರಿ ಕಾದಂಬರಿ ಪುಸ್ತಕ ಲೋಕಾರ್ಪಣೆ ಮಾಡಿ ಮಾತನಾಡಿ, ಎಲ್ಲರು ಒಂದೇ ಎಂಬ ಭಾವನೆಯಿಂದ ಪರಮಾತ್ಮನ ಧ್ಯಾನ ಸ್ಮರಣೆ ಮಾಡಿದರೆ, ಆತ್ಮಶುದ್ಧಿಯಿಂದ ತೃಪ್ತಿ ತರುತ್ತದೆ ಎಂದು ನುಡಿದರು.

ವಿರಾಜಪೇಟೆ ವೈದ್ಯ ಡಾ.ಎಸ್.ವಿ.ನರಸಿಂಹನ್, 2025 ಪ್ರಯಾಗ್‌ರಾಜ್‌ನಲ್ಲಿ ನಡೆದ ಪವಿತ್ರ ಮಹಾಕುಂಭಮೇಳ ಯಾತ್ರೆಯಲ್ಲಿ ನಡೆದ ವಿಚಾರಗಳ ಬಗ್ಗೆ ಸಾಕ್ಷಚಿತ್ರ ತೋರಿಸುವ ಮೂಲಕ ಸಭೆಗೆ ಮಾಹಿತಿ ನೀಡಿದರು. ಸಾಹಿತಿ ಕಿಗ್ಗಾಲು ಗಿರೀಶ್ ಮತ್ತಿತರರು ವೇದಿಕೆಯಲ್ಲಿದ್ದರು.

ಮೂರ್ನಾಡು ಬ್ಲೇಜ್‌ಗೆ ಹಾಕಿ ಕ್ಲಬ್ ಚಾಂಪಿಯನ್ ಟ್ರೋಫಿ



ಗೋಣಿಕೊಪ್ಪ ಕಾವೇರಿ ಕಾಲೇಜು ಮೈದಾನದಲ್ಲಿ ನಡೆದ ನೆಸ್‌ಕೆಫೆ ಕೊಡಗು ಹಾಕಿ ಕಪ್‌ನಲ್ಲಿ ಮೂರ್ನಾಡು ಬ್ಲೇಜ್ ಹಾಕಿ ಕ್ಲಬ್ ಚಾಂಪಿಯನ್ ಟ್ರೋಫಿ ಗೆದ್ದುಕೊಂಡಿದೆ.

ಗೋಣಿಕೊಪ್ಪ; ನೆಸ್ಲೆ ಇಂಡಿಯ ಲಿಮಿಟೆಡ್ ಹಾಗೂ ಹಾಕಿ ಕೂರ್ಗ್ ಸಹಯೋಗದಲ್ಲಿ ಗೋಣಿಕೊಪ್ಪ ಕಾವೇರಿ ಕಾಲೇಜು ಮೈದಾನದಲ್ಲಿ ನಡೆದ ನೆಸ್‌ಕೆಫೆ ಕೊಡಗು ಹಾಕಿ ಕಪ್‌ನಲ್ಲಿ ಮೂರ್ನಾಡು ಬ್ಲೇಜ್ ಹಾಕಿ ಕ್ಲಬ್ ಚಾಂಪಿಯನ್ ಸ್ಥಾನ ಉಳಿಸಿಕೊಂಡಿದ್ದು, ಬೊಟ್ಟಿಯತ್ತ್ನಾಡ್ ಕುಂದ ತಂಡ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ.

ಬೆಸ್ಟ್ : ಮೂರ್ನಾಡು ಬ್ಲೇಜ್ ತಂಡದ ಸೋಮಣ್ಣ ಬೆಸ್ಟ್ ಗೋಲ್ ಕೀಪರ್, ಬೊಟ್ಟಿಯತ್ತ್ನಾಡ್ ಕುಂದ ತಂಡದ ಗ್ಯಾನ್ ಬೆಸ್ಟ್ ಡಿಫೆಂಡರ್, ಕೋಣಕಟ್ಟೆ ಇಲೆವೆನ್ ತಂಡದ ರಾಮ ಬೆಸ್ಟ್ ಮಿಡ್ ಫೀಲ್ಡರ್, ಬೊಟ್ಟಿಯತ್ತ್ನಾಡ್ ಕುಂದ ತಂಡದ ಹರ್ಮನ್ ದೀಪ್ ಬೆಸ್ಟ್ ಸ್ಟ್ರೈಕರ್ ಪ್ರಶಸ್ತಿ ಪಡೆದರು.

ಸನ್ಮಾನ; 14 ವಯೋಮಿತಿಯ ಕರ್ನಾಟಕ ಮಿನಿ ಒಲಿಂಪಿಕ್ಸ್ ಚಿನ್ನದ ಪದಕ ಸಾಧನೆ ಮಾಡಿರುವ ಕೆ.ಎನ್.ಜೋಯಪ್ಪ, ಪ್ರಜ್ವಲ್ ಪೊನ್ನಣ್ಣ, ಸಾಯಿ ದೇವಯ್ಯ, ತರುಣ್ ಕರುಂಬಯ್ಯ, ರಿಶಿ ಕಾವೇರಪ್ಪ, ಎನ್.ಪಿ. ಬೋಪಣ್ಣ, ಕೆ.ಎನ್.ಸೋಮಯ್ಯ ಕೆ.ಎಂ. ದರ್ಶನ್, ಪ್ರದ್ಯೋತ್ ಪೊನ್ನಣ್ಣ, ಸಂಚಯ್ ಪೂವಯ್ಯ, ಪ್ರಥಮ್ ಪೂವಯ್ಯ, ಎಚ್.ಎಚ್. ಪ್ರೀಥಮ್, ಆಯನ್ ಅಯ್ಯಪ್ಪ, ಗೌರವ್ ಗಣಪತಿ, ಅಮ್ಮಾಂಡೀರ ದೈವಿಕ್ ಪೊನ್ನಣ್ಣ, ವೀರ್ ಕೌಟಿಲ್ಯ ಸನ್ಮಾನ ಸ್ವೀಕರಿಸಿದರು. ಒಲಿಂಪಿಯನ್‌ಗಳಾದ ಸಣ್ಣುವಂಡ ಕೆ.ಉತ್ತಪ್ಪ, ವಿ.ಆರ್.ರಘುನಾಥ್ ಹಾಕಿ ಸ್ಟಿಕ್ ನೀಡುವ ಮೂಲಕ ಪ್ರೋತ್ಸಾಹಿಸಿದರು. ವಿಜೇತ ಪ್ರಥಮ ತಂಡಕ್ಕೆ 75 ಸಾವಿರ ನಗದು, ದ್ವಿತೀಯ ತಂಡಕ್ಕೆ 50 ಸಾವಿರ, ಸೆಮಿಗೆ ಪ್ರವೇಶಿಸಿದ ಎರಡು ತಂಡಗಳಿಗೆ ತಲಾ 25 ಸಾವಿರ, ಉಳಿದ 4 ತಂಡಗಳಿಗೆ ತಲಾ 10 ಸಾವಿರ ಬಹುಮಾನ ನೀಡಲಾಯಿತು.

ಸಂಸದ ಯದುವೀರ್ ಒಡೆಯರ್ ಅಂತಿಮ ಪಂದ್ಯವನ್ನು ಉದ್ಘಾಟಿಸಿದರು. ಒಲಿಂಪಿಯನ್‌ಗಳಾದ ವಿ.ಆರ್. ರಘುನಾಥ್, ಸಣ್ಣುವಂಡ ಕೆ.ಉತ್ತಪ್ಪ ಮಾತನಾಡಿದರು.

ನೆಸ್ಲೆ ಇಂಡಿಯ ಲಿಮಿಟೆಡ್ ಮುಖ್ಯಸ್ಥ ಸುರೇಶ್ ನಾರಾಯಣ್, ಸಿಇಒ ಮನೀಶ್ ತಿವಾರಿ, ನೆಸ್ಲೆ ಮಿಡ್ಲ್ ಈಸ್ಟ್ ಮತ್ತು ನಾರ್ತ್ ಆಫ್ರಿಕ ವ್ಯವಹಾರಿಕ ಅಭಿವೃದ್ಧಿ ಮಾಜಿ ವ್ಯವಸ್ಥಾಪಕ ಕರ್ತಮಾಡ ವಿಕ್ರಂ ಸುಬ್ಬಯ್ಯ, ಹಿರಿಯರಾದ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ, ಉದ್ಯಮಿ ಕಿಲನ್ ಗಣಪತಿ, ಹಾಕಿ ಕೂರ್ಗ್ ಅಧ್ಯಕ್ಷ ಪಳಂಗಂಡ ಲವಕುಮಾರ್, ಉಪಾಧ್ಯಕ್ಷೆ ಮಾಪಂಗಡ ಯಮುನಾ ಚೆಂಗಪ್ಪ, ಪ್ರಧಾನ ಕಾರ್ಯದರ್ಶಿ ಅಮ್ಮಾಂಡೀರ ಚೇತನ್, ಮುದ್ದಂಡ ಹಾಕಿ ಕಪ್ ಅಧ್ಯಕ್ಷ ಮುದ್ದಂಡ ರಿಶಿನ್ ಇದ್ದರು.

ಮಡಿಕೇರಿಯಲ್ಲಿ ಮಳೆ

ಮಡಿಕೇರಿ,ಮಾ.24– ಕಾದ ಬಾಣಲೆಯಂತಾಗಿದ್ದ ಮಡಿಕೇರಿಯಲ್ಲಿ ಸೋಮವಾರ ಸಂಜೆ ಉತ್ತಮ ಮಳೆಯಾಗಿದೆ. ಬೆಳಗಿನಿಂದ ಸುಡು ಬಿಸಿಲಿನ ಹವಾಮಾನ ಇತ್ತಾದರೂ ಸಂಜೆ ವೇಳೆಗೆ ಗುಡುಗುಸಹಿತ ಮಳೆಯಾಗಿದೆ. ಕೆಲ ದಿನಗಳ ಹಿಂದೆ ಇಲ್ಲಿನ ಸುತ್ತಮುತ್ತಲಿನ ಪ್ರದೇಶಗಳಿಗೆ ಮಳೆ ಸುರಿದಿತ್ತಾದರೂ ಜಿಲ್ಲಾ ಕೇಂದ್ರಕ್ಕೆ ವರುಣ ಕೃಪೆ ತೋರಿರಲಿಲ್ಲ. ಒಂದೆಡೆ ಸುಡು ಬಿಸಿಲು, ಸೆಕೆಯ ವಾತಾವರಣ, ಸೊಳ್ಳೆ ಕಾಟದಿಂದ ನಗರದ ಜನತೆ ಹೈರಾಣಾಗಿದ್ದರು. ಅದರ ಜೊತೆಯಲ್ಲೇ ನಗರದ ಕುಡಿಯುವ ನೀರಿನ ಜಲ ಮೂಲಗಳು ಕೂಡ ಬಿಸಿಲಿನ ಬೇಗೆಗೆ ಬತ್ತುವ ಹಂತಕ್ಕೆ ಹೊರಳಿದ್ದವು. ಇದೀಗ ಸುರಿದ ಮಳೆಯಿಂದ ನಗರ ಮಂದಿ ತುಸು ನಿಟ್ಟುಸಿರು ಬಿಡುವಂತಾಗಿದೆ. ನಗರದ ರಾಜಾಸೀಟು ಕೆಳಭಾಗ, ಸ್ಟುವರ್ಟ್ ಹಿಲ್ ವೀವ್ ಪಾಯಿಂಟ್ ಮತ್ತಿತ್ತರ ಬೆಟ್ಟ ಪ್ರದೇಶಗಳಲ್ಲಿ ಹುಲ್ಲು ಕೂಡ ಒಣಗಿ ನಿಂತಿದ್ದು, ಕಿಡಿಗೇಡಿಗಳ ಕೃತ್ಯದಿಂದ ಬೆಂಕಿ ತಗುಲುವ ಸಂಭವ ಕೂಡ ಅಧಿಕವಾಗಿತ್ತು. ವರುಣ ಕರುಣೆ ತೋರಿದ ಪರಿಣಾಮ ಬೆಂಕಿ ತಗುಲುವ ಆತಂಕ ಸದ್ಯದ ಮಟ್ಟಿಗೆ ದೂರವಾಗಿದೆ.

ಇಂದಿನಿಂದ ವಿಜ್ಞಾನ–ತಂತ್ರಜ್ಞಾನ ಸಮ್ಮೇಳನ

ಮಡಿಕೇರಿ ಮಾ.24– ಕೊಡಗು ವಿಶ್ವವಿದ್ಯಾಲಯ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ವತಿಯಿಂದ ಮಡಿಕೇರಿಯ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಮಹಾವಿದ್ಯಾಲಯದ ಅಮೃತ ಮಹೋತ್ಸವದ ಅಂಗವಾಗಿ ಸುಸ್ಥಿರ ಅಭಿವೃದ್ಧಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಎಂಬ ಶೀರ್ಷಿಕೆಯಡಿ ಕನ್ನಡದಲ್ಲಿ 5ನೇ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನವು ಮಾ.25 ರಿಂದ 3 ದಿನಗಳ ಕಾಲ ಇಲ್ಲಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಮಹಾವಿದ್ಯಾಲಯದಲ್ಲಿ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು, ಕೊಡಗು ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಶಾಸಕರಾದ ಡಾ.ಮಂತರ್ ಗೌಡ, ಎ.ಎಸ್.ಪೊನ್ನಣ್ಣ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ವಿಧಾನ ಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಡಾ.ಧನಂಜಯ ಸರ್ಜಿ ಇತರರು ಪಾಲ್ಗೊಳ್ಳಲಿದ್ದಾರೆ.

ಪರಿಶ್ರಮದಿಂದ ಕೆಲಸ ಮಾಡಿದರೆ ಸಾಧನೆ ಸಾಧ್ಯ



ಸಾಧಕರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಅನನ್ಯ ಪ್ರಸಾದ್ ಅವರನ್ನು ಸನ್ಮಾನಿಸಲಾಯಿತು.

ಚಾಮರಾಜನಗರ, ಮಾ.24–ಆತ್ಮವಿಶ್ವಾಸ, ಪರಿಶ್ರಮದಿಂದ ಕೆಲಸ ಮಾಡಿದರೆ ಸಾಧನೆ ಸಾಧ್ಯ ಎಂದು ಕನಸಿನ ಅಟ್ಲಾಂಟಿಕ್ ಮಹಾಸಾಗರವನ್ನು ಒಬ್ಬಂಟಿಯಾಗಿ ದಾಟಿದ ಭಾರತದ ಪ್ರಥಮ ಮಹಿಳೆ ಅನನ್ಯ ಪ್ರಸಾದ್ ತಿಳಿಸಿದರು.

ಚಾಮರಾಜನಗರ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಹಿರಿಯ ವಿದ್ಯಾರ್ಥಿನಿಯರ ಸಂಘದಿಂದ ನಡೆದ ಕನಸಿನ ಅಲೆ ಮಾತನಾಡಿದಾಗ ಸಾಧಕರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನ್ನ ಈ ಪ್ರಯಾಣದಲ್ಲಿ ಯಾವುದೇ ಭಯ ಇಲ್ಲದೆ ಪ್ರಯಾಣ ಮಾಡಿದ್ದೇನೆ. ಹಡಗು ಸ್ವಲ್ಪ ರಿಪೇರಿಯಾದಾಗ ನಾನೇ ಸ್ವಂತ ರಿಪೇರಿ ಮಾಡಿ ಮುಂದಿನ ಪ್ರಯಾಣ ಮಾಡಿದ್ದೇನೆ. ಹಗಲು, ರಾತ್ರಿ ಎನ್ನದೆ ದೇಶಕ್ಕೆ ಏನಾದರು ಒಂದು ಸಾಧನೆ ಮಾಡಬೇಕು. ಒಬ್ಬ ಯುವತಿಯಾಗಿ ಈ ಸಾಧನೆ ಮಾಡಿದ್ದೇನೆ. ಇದಕ್ಕೆ ನಮ್ಮ ಪೋಷಕರು, ಹಿತೈಷಿಗಳು ಸಹಕಾರ ನೀಡಿದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ದೀನಬಂಧು ಸಂಸ್ಥೆ ಸಂಸ್ಥಾಪಕ ಜಯದೇವ ಮಾತನಾಡಿ, ಅನನ್ಯ ನಮ್ಮ ಸಹೋದರನ ಮಗಳು. ಈ ವಿಷಯ ಮನೆಯಲ್ಲಿ ಪ್ರಸ್ತಾಪ ಮಾಡಿದಾಗ ನಮ್ಮ ಕುಟುಂಬದಲ್ಲಿ ಸ್ವಲ್ಪ ಗಾಬರಿ ಆಯ್ತು. ಆದರೆ ಅನನ್ಯ ಛಲ ಬಿಡದೆ ಅಟ್ಲಾಂಟಿಕ್ ಸಾಗರದ ಅಲೆಗಳ ನಡುವೆ ಉತ್ತಮ ಸಾಧನೆ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಪ್ರಾಚಾರ್ಯ ಪ್ರೊಡಾ.ಎನ್.ಮಹದೇವ ಸ್ವಾಮಿ, ಜೆಎಸ್‌ಎಸ್ ಸಾರ್ವಜನಿಕ ಸಂಪರ್ಕಾಧಿಕಾರಿ ಆರ್.ಎಂ.ಸ್ವಾಮಿ, ವಿದ್ಯಾರ್ಥಿನಿಯರ ಸಂಘದ ಅಧ್ಯಕ್ಷೆ ಕೆ.ಎಸ್. ಸುಮ, ಉಪನ್ಯಾಸಕರಾದ ಕೆ.ಎಸ್.ಅರುಣ, ಸೌಮ್ಯ, ಜಮುನಾ, ಜಿಲ್ಲಾ ವೀರಶೈವ ನೌಕರರ ಸಂಘದ ಅಧ್ಯಕ್ಷ ಸಿದ್ದಮಲ್ಲಪ್ಪ, ಶ್ರೀವರಮಹಾಲಕ್ಷ್ಮೀ ಸಾಂಸ್ಕೃತಿಕ ಕ್ರೀಡಾ ಸೇವಾ ಸಂಸ್ಥೆಯ ಅಧ್ಯಕ್ಷ ಜಿ.ಬಂಗಾರು, ಉಪನ್ಯಾಸಕರು, ವಿದ್ಯಾರ್ಥಿಗಳು ಹಾಜರಿದ್ದರು.

ಕೊಳ್ಳೇಗಾಲ ನಗರಸಭೆ ಸಾಮಾನ್ಯ ಸಭೆಯಲ್ಲಿ

ಆಯುಕ್ತರ ಕಾರ್ಯವೈಖರಿಗೆ ಶಾಸಕರು ಗರಂ

ಕೊಳ್ಳೇಗಾಲ, ಮಾ.24– ಸರ್ಕಾರಿ ಕೆಲಸ ನಿರ್ವಹಿಸುವಲ್ಲಿ ಕರ್ತವ್ಯಲೋಪ, ಮೃದು ಧೋರಣೆ ತೋರುವ ಕೆಲ ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡ ಶಾಸಕ ಎ.ಆರ್.ಕೃಷ್ಣಮೂರ್ತಿ, ಉತ್ತಮ ರೀತಿ ಕೆಲಸ ನಿರ್ವಹಿಸುವ ಅಧಿಕಾರಿ, ನೌಕರರನ್ನು ಪ್ರಶಂಸಿಸಿದ ಘಟನೆಗೆ ನಗರಸಭೆ ಸಾಮಾನ್ಯ ಸಭೆ ಸಾಕ್ಷಿಯಾಯಿತು.

ನಗರಸಭೆ ಸಭಾಂಗಣದಲ್ಲಿ ಇಂದು ಅಧ್ಯಕ್ಷೆ ರೇಖಾ ರಮೇಶ್ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಶಾಸಕ ಎ.ಆರ್. ಕೃಷ್ಣಮೂತಿ, ಮೊದಲಿಗೆ ಸಭೆಗೆ ತಡವಾಗಿ ಆಗಮಿಸಿದ್ದಕ್ಕೆ ಕ್ಷಮೆ ಕೋರಿ ಆಯುಕ್ತರ ವಿರುದ್ಧ ಪ್ರಾರಂಭದಲ್ಲೆ ಅಸಮಾಧಾನ ಹೊರಹಾಕಿದರು. ಇಂದಿನ ಸಭೆಯ ಅಜೆಂಡಾ ಪ್ರತಿ ನನಗೆ ತಲುಪಿಲ್ಲ, ಇದೇನಾ ಶಾಸಕನಾದ ನನಗೆ ಜವಾಬ್ದಾರಿಯುತವಾದ ಅಧಿಕಾರಿಯಾದ ನೀಡುವ ಗೌರವ ಎಂದು ಖಾರವಾಗಿ ಪ್ರಶ್ನಿಸಿದರು.

ನಿಮ್ಮ ಕಾರ್ಯವೈಖರಿ ಸರಿಯಿಲ್ಲ, ಮುಂದೆ ಈ ರೀತಿ ಆಗಬಾರದು ಎಂದು ಎಚ್ಚರಿಕೆ ಸಂದೇಶ ರವಾನಿಸಿದರು.

ಬಳಿಕ ಎಂಜಿನಿಯರ್ ಸುರೇಶ್ ಕಡೆ ವಾಲಿದ ಶಾಸಕರು, ನಿಮಗೆ ಇಲ್ಲಿ ಕೆಲಸ ಮಾಡಬೇಕು ಎಂಬ ಇಚ್ಛಾಶಕ್ತಿ ಇದ್ದರೆ ಕೆಲಸ ಮಾಡಿ ಇಲ್ಲದಿದ್ದರೆ ನನಗೆ ಇಲ್ಲಿ ಕೆಲಸ ಮಾಡಲು ಆಗಲ್ಲ ಎಂದು ಪತ್ರ ನೀಡಿ ಹೊರಟುಹೋಗಿ, ಬೇರೆಯವರನ್ನು ಹಾಕಿಸಿಕೊಳ್ಳುವೆ, ಸಭೆಯ ವಿಚಾರಕ್ಕೆ ಅನುಗುಣವಾಗಿ ನೀವು ಕಾರ್ಯನಿರ್ವಹಿಸಿಲ್ಲ ಎಂದು ಗರಮ್ಮಾದರು. ಇದೆ ವೇಳೆ ನಗರಸಭೆ ಮಾಜಿ ಅಧ್ಯಕ್ಷ ಶಾಂತರಾಜು ಸಹ ಆಯುಕ್ತರ ಕಾರ್ಯವೈಖರಿ ವಿರುದ್ಧ ಆಕ್ರೋಶ ಹೊರಹಾಕಿದರು. ಸದಸ್ಯೆ ಸುಮ ಸುಬ್ಬಣ್ಣ ಶಾಸಕರ ಮಾತಿಗೆ ದನಿಗೂಡಿಸಿದರು.



ಕೊಳ್ಳೇಗಾಲ ನಗರಸಭೆಯಲ್ಲಿ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿದರು.

ಆಯುಕ್ತರು ಮುಂದಿನ ದಿನಗಳಲ್ಲಿ ಈ ರೀತಿ ಆಗದಂತೆ ಕಾರ್ಯನಿರ್ವಹಿಸುವೆ, ಶಾಸಕರಿಗೆ ಪ್ರತ್ಯೇಕ ಅಜೆಂಡಾ ಪ್ರತಿ ನೀಡಿ ಕರೆಯಲು ಆಗಲಿಲ್ಲ, ಆದರೆ ಕಚೇರಿಗೆ ತಲುಪಿಸಿದ್ದೆ, ನಾನು ಕರೆ ಮಾಡಿ ಹೇಳಲಿಲ್ಲ, ಹಾಗಾಗಿ ಮುಂದಿನ ದಿನಗಳಲ್ಲಿ ಜಾಗ್ರತಿಯಿಂದ ಕಾರ್ಯನಿರ್ವಹಿಸುವೆ ಎಂದರು

ನೌಕರನಿಗೆ ಶಾಸಕರ ಪ್ರಶಂಸೆ : ಉತ್ತಮ ಕೆಲಸಗಾರರನ್ನು ನಾನು ಬೆನ್ನುತಟ್ಟುವೆ, ನೀನು ನಗರಸಭೆ ಆಸ್ತಿಗಳನ್ನು ನ್ಯಾಯಾಲಯದಲ್ಲಿ ಉಳಿಸುವಲ್ಲಿ ಮುಂದಾಗು, ನಿನ್ನ ಜೊತೆಗೆ ನಾನಿರುವೆ ಎಂದು ನಗರಸಭೆ ಆಸ್ತಿ ರೆಕಾರ್ಡ್ ನೀಡಿದ ನೌಕರ ರಾಘವೇಂದ್ರ ಅವರನ್ನು ಪ್ರಶಂಸಿಸಿದರು. ನಗರಸಭೆ ಆಸ್ತಿ ಪುಸ್ತಕವನ್ನು ಮುಂದಿನ ದಿನಗಳಲ್ಲಿ ಜೋಪಾನವಾಗಿಟ್ಟುಕೊಳ್ಳಿ ಎಂದು ಅಧಿಕಾರಿಗಳಿಗೆ ಶಾಸಕರು ಇದೆ ವೇಳೆ ಕಿವಿಮಾತು ಹೇಳಿದರು.

ಸಭೆಯಲ್ಲಿ ಉಪಾಧ್ಯಕ್ಷ ಎ.ಪಿ.ಶಂಕರ್, ಸ್ಥಾಯಿ ಸಮಿತಿ ಅಧ್ಯಕ್ಷ ಸುರೇಶ್, ಸದಸ್ಯ ಮಂಜುನಾಥ್, ರಾಘವೇಂದ್ರ ಶಾಂತರಾಜು, ಜಿ.ಪಿ.ಶಿವಕುಮಾರ್, ಧರಣೀಶ್, ರಾಮಕೃಷ್ಣ, ಪ್ರಶಾಂತ್, ಮನೋಹರ್, ಸ್ವಾಮಿ ನಂಜಪ್ಪ, ಅನ್ಸರ್ ಬೇಗ್, ಶಿವಮಲ್ಲು, ನಾಗಸುಂದ್ರಮ್ಮ, ಕವಿತಾ ಇನ್ನಿತರರಿದ್ದರು.

ಬರೀ 3 ವರ್ಷ ಅವಧಿಗೆ ಶಾಸಕ ಅನ್ನಬೇಡಿ

ನನ್ನನ್ನು ಬರೀ 3 ವರ್ಷದ ಅವಧಿಗೆ ಶಾಸಕ ಅನ್ನಬೇಡಿ, ಬರೀ ಮೂರು ವರ್ಷ ಸಾಕಾ ಎಂದು ನಗರಸಭೆ ಸಾಮಾನ್ಯ ಸಭೆಯಲ್ಲಿ ಶಾಸಕ ಎಆರ್‌ಕೆ ಪ್ರಶ್ನಿಸುವ ಮೂಲಕ ಸಭೆ ನಗೆಗಡಲಲ್ಲಿ ಮುಳುಗಿಸಿದರು.

ರಾಜ್‌ಕುಮಾರ್, ಅಂಬೇಡ್ಕರ್ ರಸ್ತೆ ಅಗಲೀಕರಣ ವಿಚಾರದಲ್ಲಿ ಕೆಲ ಸದಸ್ಯರು ತಮ್ಮ ಮೂರು ವರ್ಷ ಅವಧಿಯಲ್ಲಿ ಈ ಕೆಲಸ ಪೂರ್ಣಗೊಳಿಸಿ ಎಂದು ಹೇಳುತ್ತಿದ್ದಂತೆ 3 ವರ್ಷಗಳಿಗೆ ಮಾತ್ರ ಶಾಸಕರ ಅನ್ನುತ್ತೀರಲ್ಲಪ್ಪ ಎಂದು ಮಾತನಾಡುತ್ತಿದ್ದಂತೆ ಸಭೆ ನಗೆಗಡಲಲ್ಲಿ ತೇಲಿತಲ್ಲದೆ ಕೆಲ ಸದಸ್ಯರು ಇಲ್ಲ ಸರ್, ಈ ಅವಧಿಯಲ್ಲ, ಮುಂದೆಯೂ ನೀವೇ ಶಾಸಕರಾಗಿ ಅಭಿವೃದ್ಧಿಗೆ ಸ್ಪಂದಿಸಿ ಎಂದರು.

ಉಪ್ಪಿನಮೋಳೆಯಲ್ಲಿ ವಿಜೃಂಭಣೆಯ ಸಿದ್ದಪ್ಪಾಜಿ ಕೊಂಡೋತ್ಸವ

ಯಳಂದೂರು: ತಾಲೂಕಿನ ಉಪ್ಪಿನಮೋಳೆ ಗ್ರಾಮದಲ್ಲಿ ಸೋಮವಾರ ಶ್ರೀ ಮಂಟೇಸ್ವಾಮಿ ಮತ್ತು ಸಿದ್ಧಪ್ಪಾಜಿ ಕೊಂಡೋತ್ಸವವು ವಿಜೃಂಭಣೆಯಿಂದ ಜರುಗಿತು.

ಜಾನಪದ ಸಂಸ್ಕೃತಿಯ ಪ್ರತೀಕವಾದ ಕೊಂಡೋತ್ಸವಕ್ಕೆ ಜಿಲ್ಲೆಯು ಪ್ರಸಿದ್ಧಿಯಾಗಿದ್ದು, ಗ್ರಾಮದಲ್ಲಿ ಕೊಂಡೋತ್ಸವದ ಪ್ರಯುಕ್ತ ತಳಿರು ತೋರಣ ಹಾಗೂ ವಿದ್ಯುತ್ ದೀಪಾಲಂಕಾರಗಳಿಂದ ಕಂಗೊಳಿಸುತ್ತಿದ್ದವು. ಭಾನುವಾರ ಸಂಜೆಯೇ ಮಂಟೇಸ್ವಾಮಿ ದೇವಾಲಯದ ಮುಂದಿನ ಮರದ ರಾಶಿಗೆ ಪೂಜೆ ಸಲ್ಲಿಸಿ ಬೆಂಕಿ ಹೊತ್ತಿಸಿದರು. ಇಂದು ಬೆಳಿಗ್ಗೆಯಿಂದಲೇ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು. ನಂತರ ಪಟ್ಟಣದ ಸುವರ್ಣಾವತಿ ನದಿಯ ಜಪದಕಟ್ಟೆ ಬಳಿ ಹೂವಿನ ಪಲ್ಲಕ್ಕಿಯಲ್ಲಿ ಉತ್ಸವಮೂರ್ತಿಯನ್ನಿಟ್ಟು, ಕಂಡಾಯ, ಸತ್ತಿಗೆ–ಸೂರಿಪಾನಿಗಳನ್ನು ಹೂಗಳಿಂದ ಅಲಂಕರಿಸಿ ಪೂಜೆ ಸಲ್ಲಿಸಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಗ್ರಾಮಕ್ಕೆ ತೆರಳಲಾಯಿತು. ಮಾರ್ಗದುದ್ದಕ್ಕೂ ಭಕ್ತಾದಿಗಳು ಎಡೆಕೊಟ್ಟು ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾರಿಕುಣಿತ, ವೀರಗಾಸೆ, ದೊಣ್ಣೆವರಸೆ, ಹುಲಿವೇಷ, ಗಾರುಡಿ ಗೊಂಬೆ ಕುಣಿತಗಳು ಕಣ್ಮನ ಸೆಳೆದವು. ನಂತರ ಸಂಜೆ ದೇವಾಲಯದ ಮುಂದಿನ ಕೊಂಡದ ರಾಶಿಯನ್ನು ಕಂಡಾಯಯೊತ್ತ ನೀಲಗಾರರು ಹಾಯ್ದರು. ಕೊಂಡ ಹಾಯ್ದ ನಂತರ ಭಕ್ತಾದಿಗಳು ಕೊಂಡಕ್ಕೆ ಧೂಪ ಹಾಕಿ ಪ್ರಾರ್ಥಿಸಿದರು. ಭಕ್ತಾದಿಗಳು ಹಾಜರಿದ್ದರು.



ಶ್ರೀ ಮಂಟೇಸ್ವಾಮಿ ಮತ್ತು ಸಿದ್ಧಪ್ಪಾಜಿ ಕೊಂಡೋತ್ಸವವು ವಿಜೃಂಭಣೆಯಿಂದ ನಡೆಯಿತು.

ವಿಜೃಂಭಣೆಯಿಂದ ನಡೆದ ತಂಪು, ಮಡೆ ಉತ್ಸವ

ಚಾಮರಾಜನಗರ,ಮಾ 24–ಮುದುಕು ಮಾರಮ್ಮ ಹಬ್ಬದ ಅಂಗವಾಗಿ ತಂಪು, ಮಡೆ ಉತ್ಸವ ವಿಜೃಂಭಣೆಯಿಂದ ನೆರವೇರಿತು. ರಾತ್ರಿಯಿಂದ ಮಂಗಳವಾರ ಬೆಳಗ್ಗೆಯವರೆಗೆ ಮಾರಮ್ಮನ ದೇವಸ್ಥಾನದ ಮುಂಭಾಗ ಹಬ್ಬದ ಸಂಭ್ರಮ ಕಳೆಗಟ್ಟಿತ್ತು. ಹಬ್ಬದ ಅಂಗವಾಗಿ ಸಂತೇಮರಹಳ್ಳಿ ವೃತ್ತ, ನಾಯಕರ ಬೀದಿ ಹಾಗೂ ಉಪ್ಪಾರ ಬೀದಿಗಳಲ್ಲಿ ದೀಪಾಲಂಕಾರ ಹಾಗೂ ಧ್ವನಿವರ್ಧಕ ಅಳವಡಿಸಲಾಗಿತ್ತು. ಹಳೆಯ ಬಸ್ ನಿಲ್ದಾಣದ ಬಳಿ ಇರುವ ಮಾರಿಗುಡಿ ದೇವಸ್ಥಾನದ ಮುಂಭಾಗವನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ಹಬ್ಬದ ಅಂಗವಾಗಿ ದೇವಸ್ಥಾನದ ಸುತ್ತ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಮಾರಮ್ಮನಿಗೆ ಹರಕೆ ಹೊತ್ತ ಮಂದಿ ರಾತ್ರಿ ಸಾವಿರಾರು ಸಂಖ್ಯೆಯಲ್ಲಿ ಸಾಮೂಹಿಕವಾಗಿ ಮೆರವಣಿಗೆಯಲ್ಲಿ ಬಂದು ಮಾರಮ್ಮನಿಗೆ ತಂಪು ಮತ್ತು ಮಡೆ ಸೇವೆ ಸಲ್ಲಿಸಿದರು.

ಮಾರನೇ ದಿನವಾದ ಮಂಗಳವಾರ ಸೂರ್ಯೋದಯಕ್ಕೂ ಮುನ್ನ ದೇವಸ್ಥಾನದ ಆವರಣದಲ್ಲಿ ಮಡೆ ಸೇವೆಯನ್ನು ನೂರಾರು ಮಹಿಳೆಯರು ಸಲ್ಲಿಸಲಿದ್ದಾರೆ. ಬಳಿಕ, ನಗರದ ಸುತ್ತಲಿನ ಗ್ರಾಮಗಳಿಂದ ಆಗಮಿಸಿರುವ ಸತ್ತಿಗೆ, ಸೂರಾ ಪಾನಿಗಳ ವಿಜೃಂಭಣೆಯ ಮೆರವಣಿಗೆ ನಡೆಸಲಾಗುವುದು.

ಇಂದು ಬೇಗೂರು ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಮಾ.24– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಬೇಗೂರು ಉಪವಿಭಾಗ ವ್ಯಾಪ್ತಿಯಲ್ಲಿ 4ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಮಾ.25 ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.



ಹಿರಿಕಾಟಿ, ನಿಟ್ರೆ, ಬೇಗೂರು, ವಾಟರ್‌ಸಪ್ಲೈ, ಹೆಗ್ಗಡಹಳ್ಳಿ, ಮಂಚಳ್ಳಿ ಎನ್.ಜೆ.ವೈ. ಶೆಟ್ಟಿಹಳ್ಳಿ, ದೇಸಿಪುರ, ಇಂಡಸ್ಟ್ರಿಯಲ್ ಮತ್ತು ಹೊರೆಯಾಲ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಾರ್ವಜನಿಕರು ನಿಗಮದ ಜೊತೆ ಸಹಕರಿಸಬೇಕು. ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಗ್ರಾಹಕರು ಉಚಿತ ದೂ.ಸಂ.1912 ಗೆ ಕರೆ ಮಾಡುವಂತೆ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುಂಡ್ಲಾ ಬಳಿ ಚಿರತೆ ಹೆಜ್ಜೆ ಗುರುತು–ರೈತರ ಆತಂಕ

ಬೇಗೂರು: ಸಮೀಪದ ಸೋಮಹಳ್ಳಿ ಗುಂಡ್ಲಾ ಬಳಿ ಚಿರತೆ ಹೆಜ್ಜೆ ಗುರುತು ಕಾಣಿಸಿಕೊಂಡಿದ್ದು, ರೈತರು ಆತಂಕಗೊಂಡಿದ್ದಾರೆ.

ಸೋಮವಾರ ಜಮೀನಿಗೆ ತೆರಳುತ್ತಿದ್ದ ರೈತರು ಹಾಗೂ ದಾರಿಹೋಕರಿಗೆ ಸೋಮಹಳ್ಳಿ ಗುಂಡ್ಲಾ ಬಳಿ ಚಿರತೆ ಕಂಡು ಗಾಬರಿಗೊಂಡಿದ್ದಾರೆ.ಅಲ್ಲದೆ ಗುಂಡ್ಲಾ ಬಳಿ ಚಿರತೆ ನಡೆದು ಹೋದ ಹೆಜ್ಜೆಯ ಗುರುತು ಕಾಣಿಸಿಕೊಂಡಿದೆ.

ಚಿರತೆ ಗುಂಡ್ಲಾ ಬಳಿ ಚಿರತೆ ಇದೆ ಎಂಬ ಮಾಹಿತಿ ಕೇಳಿದ ಜನರು ಬೇಗೂರು–ಸೋಮಹಳ್ಳಿ ರಸ್ತೆಯಲ್ಲಿ ಸಂಚರಿಸಲು ಹೆದರುತ್ತಿದ್ದಾರೆ. ಇಲ್ಲಿ ಪೊದೆಗಳಿದ್ದು, ಚಿರತೆ ಹೋದರೂ ಕಾಣುತ್ತಿಲ್ಲ. ಅರಣ್ಯ ಇಲಾಖೆ ಎಚ್ಚೆತ್ತು ಚಿರತೆ ಸೆರೆ ಹಿಡಿದು ಆತಂಕ ದೂರ ಮಾಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.



ಗುಂಡ್ಲುಪೇಟೆ ತಾಲೂಕಿನ ಸೋಮಹಳ್ಳಿ ಗುಂಡ್ಲಾ ಬಳಿ ಚಿರತೆಯ ಹೆಜ್ಜೆ ಗುರುತು.

ಸುಲೋಚನಾ ನಿಧನ



ಕೊಳ್ಳೇಗಾಲ: ಪಟ್ಟಣದ ಕ್ರೈಸ್ತ ಬೀದಿ ನಿವಾಸಿ, ನಿವೃತ್ತ ಶಿಕ್ಷಕಿ ಸುಲೋಚನಾ (92) ಅವರು ಸೋಮವಾರ ನಿಧನರಾದರು. ಮೃತರು ಐವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಪಟ್ಟಣದ ಮಹದೇಶ್ವರ ಕಾಲೇಜು ಸಮೀಪವಿರುವ ಕ್ರೈಸ್ತರ ರುದ್ರಭೂಮಿಯಲ್ಲಿ ಮಂಗಳವಾರ ಬೆಳಗ್ಗೆ 8 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಳೆ ನಗರಸಭೆ ಆಯ–ವ್ಯಯ ಸಭೆ

ಚಾಮರಾಜನಗರ: ಚಾಮರಾಜನಗರ ನಗರಸಭೆಯ 2024–25 ನೇ ಸಾಲಿನ ಪರಿಷ್ಕೃತ ಹಾಗೂ 2025–26ನೇ ಸಾಲಿನ ಆಯ–ವ್ಯಯ ಸಭೆಯನ್ನು ನಗರಸಭೆ ಅಧ್ಯಕ್ಷರಾದ ಸುರೇಶ್ ಅವರ ಅಧ್ಯಕ್ಷತೆಯಲ್ಲಿ ಮಾರ್ಚ್ 26 ರಂದು ಬೆಳಿಗ್ಗೆ 11 ಗಂಟೆಗೆ ನಗರಸಭಾ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಟ್ಟದ ರಥೋತ್ಸವ: ಖಾಸಗಿ ವಾಹನಗಳಿಗೆ ಅವಕಾಶವಿಲ್ಲ

ಚಾಮರಾಜನಗರ, ಮಾ.24 – ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಮಾ.25 ರಂದು ನಡೆಯಲಿರುವ ರಥೋತ್ಸವ, ದೇವರ ದರ್ಶನಕ್ಕೆ ಭಕ್ತಾದಿಗಳು ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಹೊರತುಪಡಿಸಿ ದ್ವಿಚಕ್ರ, 4 ಚಕ್ರ, ಮಿನಿ ವಾಹನ ಮತ್ತು ಇತರೆ ವಾಹನಗಳಲ್ಲಿ ತೆರಳಲು ಅವಕಾಶವಿರುವುದಿಲ್ಲ. ವಾಹನಗಳನ್ನು ಅರಣ್ಯ ಇಲಾಖೆಯ ಚೆಕ್‌ಪೋಸ್ಟ್ ಮೈದಾನದಲ್ಲಿ ಪಾರ್ಕಿಂಗ್ ಮಾಡಬೇಕು. ಅಲ್ಲಿಂದ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ನಿಗದಿತ ದರ ಪಾವತಿಸಿ ದೇವರ ದರ್ಶನಕ್ಕೆ ಹೋಗಿ ಬರುವ ವ್ಯವಸ್ಥೆ ಮಾಡಲಾಗಿದ್ದು, ಸಾರ್ವಜನಿಕರು, ಭಕ್ತಾದಿಗಳು ಸಹಕರಿಸಬೇಕೆಂದು ಗುಂಡ್ಲುಪೇಟೆ ತಹಸೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಗುಚಿ ಬಿದ್ದ ಗೂಡ್ಸ್ ವಾಹನದಲ್ಲಿ ಗೋಮಾಂಸ ಪತ್ತೆ

ಕ್ರೈಂ ಬಾಕ್ಸ್

ಮೈಸೂರು, ಮಾ.24(ಎಸ್‌ಬಿಡಿ)– ಗೋಮಾಂಸ ಸಾಗಿಸುತ್ತಿದ್ದ ವಾಹನ ಮಗುಚಿ ಬಿದ್ದಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.

ನಗರದ ಹೆಬ್ಬಾಳು ರಿಂಗ್ ರಸ್ತೆ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಮುಂಭಾಗ ಭಾನುವಾರ ಮುಂಜಾನೆ ಮಹೀಂದ್ರಾ ಬೊಲೆರೋ ಗೂಡ್ಸ್ ವಾಹನ(ಕೆಎ–40, ಎ–8240) ಮಗುಚಿ ಬಿದ್ದಿದ್ದು, ಅದರಲ್ಲಿ ಒಂದು ಟನ್‌ಗಿಂತಲೂ ಹೆಚ್ಚು ಪ್ರಮಾಣದ ಗೋಮಾಂಸ ಪತ್ತೆಯಾಗಿದೆ.

ಅಪಘಾತದ ಬಗ್ಗೆ ಮಾಹಿತಿ ತಿಳಿದ ಹೆಬ್ಬಾಳ್ ಠಾಣೆ ಪೊಲೀಸರು, ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಅದರಲ್ಲಿ ಗೋಮಾಂಸ ಸಾಗಿಸುತ್ತಿರುವುದು ಗೊತ್ತಾಗಿದೆ. ಘಟನೆ ಬಳಿಕ ವಾಹನದಲ್ಲಿದ್ದವರು ಪರಾರಿಯಾಗಿದ್ದಾರೆ. ಅತೀ ವೇಗ ಹಾಗೂ ಅಜಾಗರೂಕ ಚಾಲನೆಯಿಂದ ಅಪಘಾತ ಸಂಭವಿಸಿರಬಹುದು ಎನ್ನಲಾಗಿದೆ.

ಯಾವುದೋ ಜಾಗದಲ್ಲಿ ಗೋವುಗಳನ್ನು ಹತ್ಯೆ ಮಾಡಿ, ಮಾಂಸವನ್ನು ವಾಹನದಲ್ಲಿ ತುಂಬಿಕೊಂಡು ಬೇರೆಡೆಗೆ ಸಾಗಿಸಲಾಗುತ್ತಿದ್ದ ಆರೋಪದಡಿ ವಾಹನದ ಚಾಲಕ ಹಾಗೂ ಮಾಲೀಕನ ವಿರುದ್ಧ ಹೆಬ್ಬಾಳ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ವಾಹನ ಮಗುಚಿ ರಸ್ತೆಗೆ ಅಡ್ಡಲಾಗಿ ಬಿದ್ದಿರುವುದರಿಂದ ಅದು ಯಾವ ದಿಕ್ಕಿಗೆ ಸಂಚರಿಸುತ್ತಿತ್ತು ಎಂದು ತಿಳಿಯಲಾಗಿಲ್ಲ. ಈ ಬಗ್ಗೆ ತನಿಖೆ ಮುಂದುವರೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಾಡಹಗಲೇ ಮನೆ ಬಾಗಿಲು ಮೀಟಿ ಕಳವಿಗೆ ಯತ್ನ



ಮೈಸೂರು, ಮಾ.24(ಎಸ್‌ಬಿಡಿ)– ಹಾಡಹಗಲೇ ಬಾಗಿಲು ಮೀಟಿ, ಕಳ್ಳತನಕ್ಕೆ ಯತ್ನಿಸಿರುವ ಘಟನೆ ಮೈಸೂರಿನ ಹೆಬ್ಬಾಳು ಬಡಾವಣೆಯಲ್ಲಿ ನಡೆದಿದೆ.

ಇಲ್ಲಿನ ಸುಬ್ರಮಣ್ಯನಗರ ನಿವಾಸಿ ಸುಂದರರಾಜು ಎಂಬುವವರ ಮನೆಯಲ್ಲಿ ಕಳ್ಳತನ ಯತ್ನ ನಡೆದಿದೆ. ಖದೀಮ ಮುಂಬಾಗಿಲು ಮೀಟುವಾಗ ಒಳಗಿದ್ದ ಮಹಿಳೆ ಕಿರುಚಿಕೊಂಡಿದ್ದರಿಂದ ಆತ ಪರಾರಿಯಾಗಿದ್ದಾನೆ.

ಸುಂದರರಾಜು ಅವರು ಮಾ.20ರಂದು ಬೆಳಗ್ಗೆ ಮಗಳನ್ನು ಶಾಲೆಗೆ ಹಾಗೂ ಸಹ ಪ್ರಾಧ್ಯಾಪಕಿಯಾಗಿರುವ ಪತ್ನಿಯನ್ನು ಕಾಲೇಜಿಗೆ ಬಿಟ್ಟು, ಕೆ.ಜಿ.ಕೊಪ್ಪಲಿನಲ್ಲಿರುವ ತಮ್ಮ ಕಂಪ್ಯೂಟರ್ ಸೇಲ್ಸ್ ಅಂಡ್ ಸರ್ವೀಸಸ್ ಅಂಗಡಿಗೆ ತೆರಳಿದ್ದರು. ಬಳಿಕ ಮನೆಗೆ ಹೋಗಿ ಉಪಾಹಾರ ಮಾಡಿಕೊಂಡು ಮಧ್ಯಾಹ್ನ 12.30ಕ್ಕೆ ಮತ್ತೆ ಅಂಗಡಿಗೆ ಹೊರಟರು. ಅತ್ತೆಯವರಿಗೆ ವಯಸ್ಸಾಗಿರುವುದರಿಂದ ಸುಂದರರಾಜು ತಾವೇ ಡೋರ್‌ಲಾಕ್ ಮಾಡಿಕೊಂಡು ಹೋಗಿದ್ದರು.

ಬಳಿಕ ಮಧ್ಯಾಹ್ನ 3.30ರ ವೇಳೆಗೆ ಮಗಳನ್ನು ಶಾಲೆಯಿಂದ ಮನೆಗೆ ಬಿಡಲು ಬಂದಾಗ ಶಾಕ್ ಕಾದಿತ್ತು. ಮನೆಯ ಮುಂಬಾಗಿಲನ್ನು ಮೀಟಲಾಗಿತ್ತು. ಡೋರ್ ಲಾಕ್ ಹಾಗೂ ಬಾಗಿಲು ಚೌಕಟ್ಟಿನ ಸ್ವಲ್ಪ ಭಾಗ ಮುರಿದು ಬಿದ್ದಿತ್ತು. ಬಾಗಿಲು ತೆರೆದಿದ್ದರಿಂದ ಆತಂಕದಿಂದ ಒಳಹೋದಾಗ ಅವರ ಅತ್ತೆಯವರು ಆತಂಕದಲ್ಲಿದ್ದರು. ಯಾರೋ ಅಪರಿಚಿತ ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಕಬ್ಬಿಣದ ವಸ್ತುವಿನಿಂದ ಬಾಗಿಲು ಮೀಟುತ್ತಿದ್ದ. ನಾನು ಕಿಟಕಿಯಲ್ಲಿ ನೋಡಿ, ಜೋರಾಗಿ ಕಿರುಚಿಕೊಂಡಿದ್ದರಿಂದ ಆತ ಓಡಿಹೋದ ಎಂದು ತಿಳಿಸಿದ್ದಾರೆ. ಈ ಬಗ್ಗೆ ಹೆಬ್ಬಾಳ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಪಿಂಗ್‌ಗೆ ಹೋದ ಯುವತಿ ನಾಪತ್ತೆ



ಮೈಸೂರು, ಮಾ. 24– ಮದುವೆ ಮಾತುಕತೆಯಾಗಿದ್ದ ಯುವಕನೊಂದಿಗೆ ಶಾಪಿಂಗ್‌ಗೆ ಬಂದಿದ್ದ ಯುವತಿ ನಾಪತ್ತೆಯಾಗಿರುವ ಬಗ್ಗೆ ದೂರು ದಾಖಲಾಗಿದೆ. ಗೋಪಾಲಪುರದ ಯುವತಿ ಜೆ. ಅನನ್ಯ(18) ಅವರನ್ನು ಪ್ರೇಮ್‌ಕುಮಾರ್ ಎಂಬ ಯುವಕನೊಂದಿಗೆ ವಿವಾಹ ಮಾಡಲು ಮಾತುಕತೆ ನಡೆದಿತ್ತು. ಮಾ. 22ರಂದು ಮಧ್ಯಾಹ್ನ ಶಾಪಿಂಗ್‌ಗೆಂದು ಅನನ್ಯಳನ್ನು ಪ್ರೇಮ್‌ಕುಮಾರ್ ಬೈಕ್‌ನಲ್ಲಿ ಮೈಸೂರಿಗೆ ಕರೆತಂದಿದ್ದು, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಬಳಿ ಬೈಕ್ ಪಾರ್ಕಿಂಗ್ ಮಾಡುವ ವೇಳೆ, ಬಸ್ ನಿಲ್ದಾಣದಲ್ಲಿರುವ ಸ್ನೇಹಿತೆಯನ್ನು ಕರೆತರುವುದಾಗಿ ತಿಳಿಸಿ ಹೋದ ಅನನ್ಯ ವಾಪಸ್ ಬಂದಿಲ್ಲ ಎಂದು ಪ್ರೇಮ್‌ಕುಮಾರ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ದೇವರಾಜ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ. ಈಕೆಯ ಬಗ್ಗೆ ಮಾಹಿತಿ ಇರುವವರು ದೇವರಾಜ ಠಾಣೆ ದೂರವಾಣಿ ಸಂಖ್ಯೆ 0821–2418306 ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 2418339 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಘಟಿಕೋತ್ಸವ

ವಿವಿಧ ನಿಕಾಯಗಳಲ್ಲಿ ಪದವಿ, ಡಿಪ್ಲೊಮಾ ಪಡೆದ 1,678 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ



ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿಯ 7ನೇ ಘಟಿಕೋತ್ಸವದಲ್ಲಿ ಪದವಿ, ಡಿಪ್ಲೊಮಾ ಪಡೆದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಮೈಸೂರು, ಮಾ.24(ಎಂಕೆ)– ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿಯ 7ನೇ ಘಟಿಕೋತ್ಸವದಲ್ಲಿ ವಿವಿಧ ನಿಕಾಯಗಳಲ್ಲಿ ಪದವಿ, ಡಿಪ್ಲೊಮಾ ಪಡೆದ 1,678 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಬಿಇ–992, ಬಿಸಿಎ–51, ಎಂಟೆಕ್–90, ಎಂಸಿಎ– 114, ಎಂಎಸ್ಸಿ– 140, ಎಂಬಿಎ–282 ಹಾಗೂ ವಿವಿಧ ವಿಭಾಗಗಳಲ್ಲಿ ಡಾಕ್ಟರೇಟ್ ಪದವಿ(ಪಿಹೆಚ್.ಡಿ) ಪಡೆದಿರುವ 9 ವಿದ್ಯಾರ್ಥಿಗಳಿಗೆ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿಯ ಕುಲಾಧಿಪತಿಗಳೂ ಆದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪದವಿ ಪ್ರದಾನ ಮಾಡಿದರು. ವಿವಿಧ ವಿಭಾಗಗಳಲ್ಲಿ ಉತ್ತಮ ಸಾಧನೆ ಮಾಡಿ ರ‍್ಯಾಂಕ್ ಗಳಿಸಿದ 148 ಮಂದಿಯಲ್ಲಿ 64 ಜನರಿಗೆ ಪದಕ ಪ್ರದಾನ ಮಾಡಲಾಯಿತು. ಇವುಗಳಲ್ಲಿ 30 ಚಿನ್ನ ಹಾಗೂ 34 ದತ್ತಿ ಪದಕಗಳೂ ಇದ್ದವು.

ಘಟಿಕೋತ್ಸವ ಭಾಷಣ ಮಾಡಿದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ವಿದ್ಯಾರ್ಥಿಗಳು ಸಂಶೋಧನೆ, ಆವಿಷ್ಕಾರಗಳ ಜೊತೆಗೆ ಉದ್ಯಮಶೀಲತೆ ಬೆಳೆಸಿಕೊಂಡು ನವೋದ್ಯಮಿಗಳಾಗಬೇಕು. ತರಗತಿಗಳಲ್ಲಿ ಓದುವುದಕ್ಕೂ ಕೈಗಾರಿಕೋದ್ಯಮಗಳಲ್ಲಿ ಎದುರಾಗುವ ಸವಾಲುಗಳಿಗೂ ಬಹಳ ವ್ಯತ್ಯಾಸವಿದೆ. ತಮ್ಮಲ್ಲಿರುವ ಕೌಶಲಗಳನ್ನು ಉನ್ನತೀಕರಿಸಿಕೊಳ್ಳಲು ನಿರಂತರವಾಗಿ ಶ್ರಮಿಸುವಂತೆ ಸಲಹೆ ನೀಡಿದರು.

ನಾವಿಂದು ಕೃತಕ ಬುದ್ಧಿಮತ್ತೆ, ಮೆಷಿನ್ ಲರ್ನಿಂಗ್, ದತ್ತಾಂಶ ವಿಜ್ಞಾನ, ಕ್ವಾಂಟಂ ಕಂಪ್ಯೂಟರಿಂಗ್ ಯುಗದಲ್ಲಿದ್ದೇವೆ. ಆರೋಗ್ಯ ಮತ್ತು ಜೀವ ವಿಜ್ಞಾನ ಕ್ಷೇತ್ರದಲ್ಲಿ ಡಿಜಿಟಲ್ ರೂಪಾಂತರತೆ ವೇಗವಾಗಿದೆ. ನಡೆದಿರುವಂತಹ ಸಂದರ್ಭದಲ್ಲಿ ಯುವ ತಂತ್ರಜ್ಞರು ಉದ್ಯೋಗ ಭದ್ರತೆಯ ಜೊತೆಗೆ ಸಮಾಜದಲ್ಲಿ ಬದಲಾವಣೆ ತರುವ ಪ್ರಯತ್ನವನ್ನು ಮಾಡಬೇಕು. ನಾಯಕತ್ವ ಗುಣ ಬೆಳೆಸಿಕೊಂಡು ನವೋದ್ಯಮಿಗಳಾಗಿ ಉದ್ಯೋಗ ಸೃಷ್ಟಿಸಿದರೆ, ದೇಶವನ್ನು ಇನ್ನಷ್ಟು ಸದೃಢ ಆರ್ಥಿಕ ಶಕ್ತಿಯಾಗಿ ಬೆಳೆಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಉತ್ತಮ ತಂತ್ರಜ್ಞರು ಹೊರಹೊಮ್ಮಬೇಕು...

ದೇಶವು 350 ಲಕ್ಷ ಕೋಟಿ ರೂ. ಆರ್ಥಿಕತೆ ಗುರಿಯನ್ನು ಸಾಧಿಸಲು ಉತ್ತಮ ತಂತ್ರಜ್ಞರು ಹೊರಹೊಮ್ಮಬೇಕು. ಡಿಜಿಟಲ್ ಆರ್ಥಿಕತೆಯು 100 ಲಕ್ಷ ಕೋಟಿ ರೂ. ಆದಾಯದ ಗುರಿ ತಲುಪಬೇಕಿದೆ. ಆಟೊಮೇಷನ್ ತಂತ್ರಜ್ಞಾನಗಳು ಉದ್ಯೋಗಗಳನ್ನು ಕಿತ್ತುಕೊಂಡರೂ, ಶೈಕ್ಷಣಿಕ ಹಾಗೂ ಆರ್ಥಿಕ ತಂತ್ರಜ್ಞಾನ ಆಧಾರಿತ ಮಾರುಕಟ್ಟೆಯಿಂದ ಉದ್ಯೋಗಗಳು ಮತ್ತಷ್ಟು ಸೃಷ್ಟಿಯಾಗಲಿವೆ.

- ಡಾ.ಶಾಲಿನಿ ರಜನೀಶ್, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ

2030ರ ವೇಳೆಗೆ ಜಾಗತಿಕ ಆರ್ಥಿಕತೆಗೆ 3,500 ಲಕ್ಷ ಕೋಟಿ ರೂ. ಆದಾಯವನ್ನು ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ನೇರ ಹಾಗೂ ಪರೋಕ್ಷವಾಗಿ ತಂದು ಕೊಡಬಲ್ಲದು. ಕ್ವಾಂಟಂ ಕಂಪ್ಯೂಟರಿಂಗ್ ತಂತ್ರಜ್ಞಾನ ಮಾರುಕಟ್ಟೆಯು 59 ಸಾವಿರ ಕೋಟಿ ರೂ., ರೋಬಾಟಿಕ್ ಕೈಗಾರಿಕೆಗಳು 3.5 ಲಕ್ಷ ಕೋಟಿ ರೂ. ಆದಾಯ ತಂದು ಕೊಡಲಿವೆ. ಹಾಗೆಯೇ ಟೆಲಿ ವೈದ್ಯಕೀಯ ಸೇವೆಗಳು ಗ್ರಾಮೀಣ ಭಾಗಕ್ಕೆ ಶೇ.50ರಷ್ಟು ತಲುಪಲಿದ್ದು, ಜನರು ಇದರ ಪೂರ್ಣ ಪ್ರಮಾಣದ ಸೌಲಭ್ಯ ಪಡೆಯಲಿದ್ದಾರೆ ಎಂದು ತಿಳಿಸಿದರು.

ಹೊಂದಾಣಿಕೆ ಕೊರತೆ: ವಿಶ್ವವಿದ್ಯಾನಿಲಯಗಳು ಶೈಕ್ಷಣಿಕ ಕಲಿಕೆ ಮತ್ತು ಕೈಗಾರಿಕಾ ಅಗತ್ಯತೆಗೆ ಪೂರಕವಾಗಿ ಶಿಕ್ಷಣ ವ್ಯವಸ್ಥೆಯನ್ನು ಸರಿಪಡಿಸಿಕೊಳ್ಳಬೇಕು. ಪ್ರಸ್ತುತ ದಿನಗಳಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ನಾವು ಎದುರಿಸುತ್ತಿರುವ ಸವಾಲುಗಳಲ್ಲಿ ಹೊಂದಾಣಿಕೆ ಸಮಸ್ಯೆ ಕಾಡುತ್ತಿದೆ. ಶಿಕ್ಷಣ ವ್ಯವಸ್ಥೆ ಮತ್ತು ಕೈಗಾರಿಕಾ ಅಗತ್ಯತೆಯ ನಡುವೆ ಹೊಂದಾಣಿಕೆ ಕೊರತೆ ಹೆಚ್ಚಾಗಿದ್ದು, ವಿವಿಗಳು ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಬೇಕು ಎಂದು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಸಿ.ಜಿ.ಬೆಟ್‌ಸೂರಮಠ, ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಬಿ.ಸುರೇಶ್, ಕುಲಪತಿ ಪ್ರೊ.ಎ.ಎನ್.ಸಂತೋಷ್ ಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಪಿ.ನಂಜುಂಡಸ್ವಾಮಿ, ಕುಲಸಚಿವ ಎಸ್.ಎ.ಧನರಾಜ್ ಮತ್ತಿತರರಿದ್ದರು.

ಚಿನ್ನದ ಪದಕ ಪಡೆದವರು...

ಬಿಇ ಪದವಿಯಲ್ಲಿ ಅದಿತಿ ಭಟ್, ವಿ.ನಮ್ರತಾ, ಸಮಿಯ ಸೈಟ್, ಮೇದಿನಿ, ಸೈಫ್ ಖಾನ್, ಕೆ.ಪುನೀತ್, ಡಿ.ಮಂಜುನಾಥ, ವಿ.ದೇವಿಕಾ, ಎಂ.ಚೈತ್ರಾ, ಎ.ಹರ್ಷಿತಾ, ಆಶಿ ಸಿಂಗ್, ಆರ್.ಗೌತಮ್ ಸಾಗರ್, ಮಿಲ್ಲನ್, ಬಿಸಿಎ ನಲ್ಲಿ ಹೆಚ್.ವಿ.ಅನುಷಾ, ಎಂಟೆಕ್ ನಲ್ಲಿ ಆರ್.ಅಕ್ಷರಾ, ಕೆ.ರುಚಿತಾ, ಕೆ.ಜೆ.ಹರ್ಷಜಿತ್, ಮೋದಕ್ ಸಿ. ಬಸಪ್ಪ, ಎಂ.ಡಿ.ಯದುನಂದನ್ ಮತ್ತು ಡಿ.ಎಸ್.ಪೂಜಾ, ಎಂಸಿಎ ಸ್ನಾತಕೋತ್ತರ ಪದವಿಯಲ್ಲಿ ಶ್ರೀಪ್ರಿಯಾ ಎಸ್.ಪಾಠಕ್. ಎಂಎಸ್ಸಿನಲ್ಲಿ ಎಂ ಸೋನು, ಪಿ.ತಶ್ವಿನಿ ನಾಂಜಪ್ಪ, ಹೆಚ್.ಸಿ. ಶುಭದಾ, ಕೆ.ಎ.ಕೀರ್ತನಾ, ಎಂ.ಸ್ಫೂರ್ತಿ, ಎಂಬಿಎ ನಲ್ಲಿ ಬಿ.ಎಲ್.ಗಾನವಿ ಅರಸ್ ಚಿನ್ನದ ಪದಕ ಗಳಿಸಿದರು.

ಪತ್ನಿ ಕೊಂದ ಪತಿಗೆ ಜೀವಾವಧಿ ಶಿಕ್ಷೆ

ಮೈಸೂರು, ಮಾ.24(ಎಂಕೆ)– ಪತ್ನಿಯನ್ನು ಬರ್ಬರವಾಗಿ ಹತ್ಯೆಗೈದಿದ್ದ ಪತಿಗೆ ಜೀವಾವಧಿ ಶಿಕ್ಷೆ ವಿಧಿಸಿ ಮೈಸೂರಿನ 8 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆದೇಶಿಸಿದೆ.

ಹುಣಸೂರು ತಾಲೂಕಿನ ಅತ್ತಿಗುಪ್ಪೆ ಗ್ರಾಮದ ಲವಕುಮಾರ ಶಿಕ್ಷೆಗೆ ಗುರಿಯಾದವನಾಗಿದ್ದು, ಈತ ಕೆ.ಆರ್.ನಗರ ತಾಲೂಕಿನ ನಾರಾಯಣಪುರ ಗ್ರಾಮದ ಪಂಕಜ ಎಂಬುವವರನ್ನು 14 ವರ್ಷಗಳ ಹಿಂದೆ ಮದುವೆಯಾಗಿದ್ದು ಸ್ವಲ್ಪ ಕಾಲ ಗಂಡ–ಹೆಂಡತಿ ಅನ್ಯೋನ್ಯವಾಗಿದ್ದರು.

ನಂತರ ಹೆಂಡತಿ ನಡತೆ ಬಗ್ಗೆ ಅನುಮಾನ ಪಟ್ಟು ಆಕೆಯೊಂದಿಗೆ ಗಲಾಟೆ ಮಾಡುತ್ತಿದ್ದ ಲವಕುಮಾರ, ದೈಹಿಕ, ಮಾನಸಿಕವಾಗಿ ಹಿಂಸೆ ನೀಡಿದ್ದರ ಕುರಿತು 2021ರ ಮೇ 20 ರಂದು ಮೈಸೂರು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬಳಿಕ ಹಿರಿಯರ ಮಧ್ಯಸ್ಥಿಕೆಯಲ್ಲಿ ಗಂಡ–ಹೆಂಡತಿ ಅನ್ಯೋನ್ಯವಾಗಿ ಇರುವುದಾಗಿ ಹೇಳಿ ಇಲವಾಲದಲ್ಲಿ ಮನೆ ಮಾಡಿಕೊಂಡು ವಾಸವಾಗಿದ್ದರು.

2021ರ ಆ.28 ರಂದು ಅನಾರೋಗ್ಯದಿಂದ ಆರೋಪಿ ಲವಕುಮಾರ ತಂದೆ ಕೃಷ್ಣೇಗೌಡ ಮೃತಪಟ್ಟಿದ್ದರಿಂದ ಅತ್ತಿಗುಪ್ಪೆ ಗ್ರಾಮಕ್ಕೆ ಎಲ್ಲರೂ ಬಂದಿದ್ದರು. ಶವಸಂಸ್ಕಾರದ ನಂತರ ಆ ದಿನ ರಾತ್ರಿ ಲವಕುಮಾರ, ಪಂಕಜ ಮತ್ತು ಲವಕುಮಾರನ ತಾಯಿ ರತ್ನಮ್ಮ ಒಟ್ಟಿಗೆ ಮನೆಯ ಹಾಲ್‌ನಲ್ಲಿ ಮಲಗಿದ್ದಾರೆ.

ರಾತ್ರಿ 10.30ರ ವೇಳೆಗೆ ಪಂಕಜ ತನ್ನ ತಂದೆ ಕೃಷ್ಣೇಗೌಡರ ಬಗ್ಗೆ ಕೆಟ್ಟದಾಗಿ ಮಾತನಾಡಿದಳೆಂದು ಕೋಪಗೊಂಡ ಲವಕುಮಾರ, ಮನೆಯ ಕೊಟ್ಟಿಗೆಯಲ್ಲಿ ಇಟ್ಟಿದ್ದ ಮಚ್ಚನ್ನು ತಂದು ಪಂಕಜಳ ಕತ್ತಿಗೆ ಮೂರ್‍ನಾಲ್ಕು ಬಾರಿ ಹೊಡೆದು ಬರ್ಬರವಾಗಿ ಹತ್ಯೆ ಮಾಡಿದ್ದಾನೆ.

ಈ ಸಂಬಂಧ ಅಂದಿನ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ರವಿಕುಮಾರ್, ಕಲಂ 498(ಎ), 302 ಐಪಿಸಿ ಸೆಕ್ಷನ್ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಂತರ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಸದರಿ ಪ್ರಕರಣದ ವಿಚಾರಣೆ ನಡೆಸಿದ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಗುರುರಾಜ್ ಸೋಮಕ್ಕಳವರ್, ಆರೋಪಿಗೆ ಕಲಂ 498(ಎ) ಐಪಿಸಿ ಮತ್ತು ಕಲಂ 302 ಐಪಿಸಿ ಅಡಿಯಲ್ಲಿ ಜೀವಾವಧಿ ಶಿಕ್ಷೆ ಹಾಗೂ 7 ಸಾವಿರ ರೂ. ದಂಡ ವಿಧಿಸಿ ಆದೇಶಿಸಿದ್ದಾರೆ. ಸರ್ಕಾರದ ಪರ ಸರ್ಕಾರಿ ಅಭಿಯೋಜಕರಾದ ಬಿ.ಈ.ಯೋಗೇಶ್ವರ ವಾದ ಮಂಡಿಸಿದ್ದರು.

ವೀಸಾ ಸಮಸ್ಯೆ: ಆಫ್ರಿಕಾದ ಗಬಾನ್‌ನಲ್ಲಿ ಸಿಲುಕಿದ್ದ 21 ಹಕ್ಕಿಪಿಕ್ಕಿಗಳು ಭಾರತಕ್ಕೆ

ದಾವಣಗೆರೆ, ಮಾ24– ಆಯುರ್ವೇದ ಗಿಡಮೂಲಿಕೆಗಳ ವ್ಯಾಪಾರಕ್ಕೆ ಆಫ್ರಿಕಾ ರಾಷ್ಟ್ರ ಗಬಾನ್‌ಗೆ ತೆರಳಿದ್ದ ಹಕ್ಕಿಪಿಕ್ಕಿ ಸಮುದಾಯದ 21 ಜನರು ಸೋಮವಾರ ಭಾರತಕ್ಕೆ ಮರಳಿದ್ದಾರೆ. ಮುಂಬೈ ವಿಮಾನ ನಿಲ್ದಾಣಕ್ಕೆ ಬಂದಿಳಿದ ಎಲ್ಲರೂ ಮಂಗಳವಾರ ದಾವಣಗೆರೆಗೆ ಬರಲಿದ್ದಾರೆ.

ಗಬಾನ್‌ನ ರಾಜಧಾನಿ ಲಿಬ್ರೆವಿಲ್‌ನಿಂದ ಭಾನುವಾರ ಪ್ರಯಾಣ ಬೆಳೆಸಿದ್ದ ಇವರು ಟರ್ಕಿ ದೇಶದ ಇಸ್ತಾಂಬುಲ್ ತಲುಪಿದ್ದರು. ವಿಮಾನ 9 ಗಂಟೆ ವಿಳಂಬವಾಗಿದ್ದರಿಂದ ಸೋಮವಾರ ಬೆಳಿಗ್ಗೆ ಮುಂಬೈಗೆ ಬಂದಿದ್ದಾರೆ ಎಂದು ಕರ್ನಾಟಕ ಹಕ್ಕಿಪಿಕ್ಕಿ ಬುಡಕಟ್ಟು ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಆರ್. ಪುನೀತ್‌ಕುಮಾರ್ ತಿಳಿಸಿದರು.

ಚನ್ನಗಿರಿ ತಾಲೂಕಿನ ಗೋಪನಾಳ್ ಗ್ರಾಮದ 11 ಹಾಗೂ ಶಿವಮೊಗ್ಗದ ಹಕ್ಕಿಪಿಕ್ಕಿ ಕ್ಯಾಂಪಿನ 10 ಜನರು ಆಯುರ್ವೇದ ಗಿಡಮೂಲಿಕೆಗಳ ಮಾರಾಟಕ್ಕೆ ಗಬಾನ್‌ಗೆ ತೆರಳಿದ್ದರು. ಒಂದೂವರೆ ವರ್ಷದಿಂದ ಅಲ್ಲಿಯೇ ನೆಲೆಸಿದ್ದ ಅವರ ವೀಸಾ ವಿಸ್ತರಣೆಯಲ್ಲಿ ತೊಂದರೆ ಉಂಟಾಗಿತ್ತು. ವೀಸಾ ವ್ಯವಸ್ಥೆ ಮಾಡಿಕೊಟ್ಟಿದ್ದ ಗಬಾನ್ ದೇಶದ ಏಜೆಂಟ್ ಬಂಧಿಸಿದ ಅಲ್ಲಿನ ಪೊಲೀಸರು, ಅಕ್ರಮವಾಗಿ ನೆಲೆಸಿದ ಆರೋಪದ ಮೇರೆಗೆ ಹಕ್ಕಿಪಿಕ್ಕಿ ಸಮುದಾಯದವರನ್ನೂ ವಶಕ್ಕೆ ಪಡೆದಿದ್ದರು.

ಮಂಚೇಗೌಡನಕೊಪ್ಪಲಿನ ಮಾರಿಹಬ್ಬದ ಪ್ರಯುಕ್ತ ಕಬಡ್ಡಿ ಪಂದ್ಯಾವಳಿ

ಎಂ.ಜಿ.ಕೊಪ್ಪಲಿನ ಸಿ.ಕೆ ವಾರಿಯರ್ಸ್ ಚಾಂಪಿಯನ್



ಅರಿಲಮ್ಮ ಕಪ್–2025 ವಿಜೇತ ಮಂಚೇಗೌಡನಕೊಪ್ಪಲಿನ ಸಿ.ಕೆ ವಾರಿಯರ್ಸ್ ತಂಡ

ಮೈಸೂರು, ಮಾ.24(ಎಂಕೆ)– ಮೈಸೂರು ಮಂಚೇಗೌಡನಕೊಪ್ಪಲಿನ ಗ್ರಾಮದೇವತೆ ಮಾರಿಹಬ್ಬದ ಪ್ರಯುಕ್ತ ಎಂಜಿಕೆ ಯೂತ್ಸ್ ಸ್ಪೋರ್ಟ್ ಕ್ಲಬ್ ಸಹಯೋಗದೊಂದಿಗೆ ಆಯೋಜಿಸಿದ್ದ ಮೈಸೂರು ವಿಭಾಗ ಮಟ್ಟದ ಕಬಡ್ಡಿ ಪಂದ್ಯಾವಳಿ(ಅರಿಲಮ್ಮ ಕಪ್–2025)ಯಲ್ಲಿ ಮಂಚೇಗೌಡನಕೊಪ್ಪಲಿನ ಸಿ.ಕೆ ವಾರಿಯರ್ಸ್ ಚಾಂಪಿಯನ್ ಆಯಿತು.

ಫೈನಲ್ ಪಂದ್ಯದಲ್ಲಿ 25–19 ಅಂಕದೊಂದಿಗೆ ಸಿ.ಕೆ ವಾರಿಯರ್ಸ್ ಚಾಂಪಿಯನ್ ಜಯಗಳಿಸಿದರೆ, ಪ್ರಬಲ ಪೈಪೋಟಿ ನೀಡಿದ ಗೋಕುಲಂನ ಗೋಲ್ಡನ್ ಈಗಲ್ಸ್ ರನ್ನರ್ ಅಪ್ ಆಯಿತು. ನಂತರ ವಿನ್ನರ್ ಮತ್ತು ರನ್ನರ್ ತಂಡಗಳಿಗೆ ಶಾಸಕ ಕೆ.ಹರೀಶ್ ಗೌಡ ನಗದು ಬಹುಮಾನ ಹಾಗೂ ಟ್ರೋಫಿ ನೀಡಿ ಅಭಿನಂದಿಸಿದರು.


ಬಳಿಕ ಮಾತನಾಡಿದ ಅವರು, ಪ್ರೋ ಕಬ್ಬಡಿ ಮಾದರಿಯಲ್ಲಿ ಗ್ರಾಮದೇವತೆ ಮಾರಿಹಬ್ಬದ ಪ್ರಯುಕ್ತ ಹಮ್ಮಿಕೊಂಡಿದ್ದ ಕಬ್ಬಡಿ ಪಂದ್ಯಾವಳಿ ಕ್ರೀಡಾಭಿಮಾನಿಗಳಲ್ಲಿ ಕ್ರೀಡೆಯ ಕುರಿತ ಆಸಕ್ತಿಯನ್ನು ಹೆಚ್ಚಿಸಿದೆ. ಪ್ರತೀ ಗ್ರಾಮಗಳಲ್ಲಿ ನಡೆಯುವ ಜಾತ್ರೆ, ಉತ್ಸವಗಳಲ್ಲಿ ಕ್ರೀಡೆಗಳ ಆಯೋಜನೆಯಿಂದ ಯುವ ಪೀಳಿಗೆಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಮಂಚೇಗೌಡನಕೊಪ್ಪಲು ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ರವಿ ಮಂಚೇಗೌಡನಕೊಪ್ಪಲು, ಕಾಂಗ್ರೆಸ್ ಮುಖಂಡ ಡೆಲ್ಲಿ ರವಿ, ಸ್ಥಳೀಯ ಮುಖಂಡರಾದ ನಾಗರಾಜು, ನಾರಾಯಣ, ಪ್ರಭಾಕರ್, ಪುಟ್ಟರಾಜು, ಮರಿಸ್ವಾಮಿ, ದರ್ಶನ್, ಚೇತನ್, ರಾಜು, ಪುನೀತ್ ಮತ್ತಿತರರಿದ್ದರು.

9 ಸಾವಿರ ಪೌರಕಾರ್ಮಿಕರು ಸೇರಿದಂತೆ ಎಲ್ಲಾ ಒಳಚರಂಡಿ ಕಾರ್ಮಿಕರು, ವಾಹನ ಚಾಲಕರು, ಲೋಡರ್ಸ್, ಕ್ಲೀನರ್ಸ್

ಕಾಯಂಗೆ ಆಗ್ರಹಿಸಿ ಏ.3ರಂದು ಬೆಂಗಳೂರಲ್ಲಿ ಪೌರಕಾರ್ಮಿಕರ ರಾಜ್ಯಮಟ್ಟದ ಬೃಹತ್ ಸಮಾವೇಶ

ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕ ಮಹಾಸಂಘದ ಬೆಳ್ಳಿಹಬ್ಬದೊಂದಿಗೆ ಸಮಾವೇಶ ಆಯೋಜನೆ ; ಪೂರ್ವಭಾವಿ ಸಭೆಯಲ್ಲಿ ಮಹಾಸಂಘದ ರಾಜ್ಯಾಧ್ಯಕ್ಷರೂ ಆದ ಮಾಜಿ ಮೇಯರ್ ನಾರಾಯಣ್ ಮಾಹಿತಿ



ಮೈಸೂರಿನ ಜಲದರ್ಶಿನಿ ಅತಿಥಿಗೃಹದ ಆವರಣದಲ್ಲಿ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕ ಮಹಾಸಂಘದ 25ನೇ ವಾರ್ಷಿಕೋತ್ಸವ ಆಯೋಜನೆ ಸಂಬಂಧ ಸೋಮವಾರ ಪೂರ್ವಭಾವಿ ಸಭೆ ನಡೆಯಿತು.

ಮೈಸೂರು,ಮಾ.24(ಪಿಎಂ)– ರಾಜ್ಯದ ಸ್ಥಳೀಯ ಸಂಸ್ಥೆಗಳ 9 ಸಾವಿರ ಪೌರ ಕಾರ್ಮಿಕರು, 1,230 ಒಳಚರಂಡಿ ಕಾರ್ಮಿಕರು ಹಾಗೂ ವಾಹನ ಚಾಲಕರು, ಲೋಡರ್ಸ್, ಕ್ಲೀನರ್ಸ್ ಸೇರಿದಂತೆ 6 ಸಾವಿರ ಮಂದಿ ಕಾಯಂ ಮಾಡಬೇಕೆಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಬೆಂಗಳೂರಿನಲ್ಲಿ ಏ.3ರಂದು ಪೌರಕಾರ್ಮಿಕರ ರಾಜ್ಯಮಟ್ಟದ ಬೃಹತ್ ಸಮಾವೇಶ ಆಯೋಜಿಸಲಾಗಿದೆ.

ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕ ಮಹಾಸಂಘದ 25ನೇ ವಾರ್ಷಿಕೋತ್ಸವ ಬೆಳ್ಳಿಹಬ್ಬದ ಪ್ರಯುಕ್ತ ಆಯೋಜಿಸಿರುವ ಈ ಸಮಾವೇಶದಲ್ಲಿ ಐಪಿಡಿ ಸಾಲಪ್ಪ ವರದಿ ಜಾರಿಗೂ ಸರ್ಕಾರವನ್ನು ಆಗ್ರಹಿಸಲಾಗುತ್ತಿದೆ. ಸಮಾವೇಶ ಸಂಬಂಧ ಮೈಸೂರಿನ ಜಲದರ್ಶಿನಿ ಅತಿಥಿಗೃಹದ ಆವರಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಮಹಾಸಂಘದ ರಾಜ್ಯಾಧ್ಯಕ್ಷರೂ ಆದ ಮಾಜಿ ಮೇಯರ್ ನಾರಾಯಣ್ ಈ ವಿಷಯ ತಿಳಿಸಿದರು.

ಸಭೆಯಲ್ಲಿ ಮೈಸೂರು, ಮಂಡ್ಯ ಸೇರಿದಂತೆ ವಿವಿಧ ಜಿಲ್ಲೆಗಳ ಪೌರಕಾರ್ಮಿಕರ ಅಹವಾಲು ಆಲಿಸಿ ಮಾತನಾಡಿದ ನಾರಾಯಣ್, ಕಳೆದ 25 ವರ್ಷಗಳಿಂದ ಮಹಾಸಂಘವು ರಾಜ್ಯದ ಪೌರಕಾರ್ಮಿಕರನ್ನು ಸಂಘಟಿಸಿ ಅವರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿ ಹೋರಾಟ ನಡೆಸಿಕೊಂಡು ಬರುತ್ತಿದೆ. ಆ ಮೂಲಕ ಗುತ್ತಿಗೆ ಪದ್ಧತಿ ರದ್ದು, ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ಸ್ಥಾಪನೆ ಸೇರಿದಂತೆ ಹಲವು ಕೆಲಸಗಳು ಆಗಿವೆ. ದೇಶದ ಬಹುತೇಕ ರಾಜ್ಯಗಳಲ್ಲಿ ಪೌರಕಾರ್ಮಿಕರು ಇಂದಿಗೂ ಗುತ್ತಿಗೆ ಪದ್ಧತಿಯಡಿ ಕೇವಲ 11ರಿಂದ 16 ಸಾವಿರ ವೇತನಕ್ಕೆ ದುಡಿಯುವ ಪರಿಸ್ಥಿತಿ ಇದೆ. ಆದರೆ ರಾಜ್ಯದಲ್ಲಿ ಸಂಘದ ಹೋರಾಟದ ಫಲವಾಗಿ ಗುತ್ತಿಗೆ ಪದ್ಧತಿ ರದ್ದಾಗಿದೆ. ಕಾಯಂಗೊಳಿಸುವ ಪ್ರಕ್ರಿಯೆಗೆ ಚಾಲನೆ ದೊರೆತಿದೆ ಎಂದು ವಿವರಿಸಿದರು.

ರಾಜ್ಯದ ಒಟ್ಟು 38 ಸಾವಿರ ಕಸ ಗುಡಿಸುವ ಪೌರಕಾರ್ಮಿಕರ ಪೈಕಿ ಈಗಾಗಲೇ 29 ಮಂದಿಯ ಕಾಯಂ ಆಗಿದೆ. ಇನ್ನು 9 ಸಾವಿರ ಮಂದಿ ಕಾಯಂ ಪ್ರಕ್ರಿಯೆ ಬಾಕಿ ಉಳಿದಿದೆ. ಜೊತೆಗೆ 1,230 ಮಂದಿ ಒಳಚರಂಡಿ ಕಾರ್ಮಿಕರು ಖಾಯಂ ಕೂಡ ಬಾಕಿ ಉಳಿದಿದೆ. ಅಲ್ಲದೆ, ವಾಹನ ಚಾಲಕರು, ಲೋಡರ್ಸ್, ಕ್ಲೀನರ್ಸ್ ಸೇರಿದಂತೆ ರಾಜ್ಯದಲ್ಲಿ ಸುಮಾರು 6 ಸಾವಿರ ಮಂದಿ ಕಾಯಂ ಆಗಬೇಕೆಂಬ ಬೇಡಿಕೆಗಳನ್ನು ಸರ್ಕಾರದ ಮುಂದಿಡಲಾಗುವುದು ಎಂದರು.

ಜೊತೆಗೆ ಪೊಲೀಸ್ ಇಲಾಖೆ ಮಾದರಿಯಲ್ಲಿ ಪೌರಕಾರ್ಮಿಕರಿಗೆ ಹೆಲ್ತ್ ಕಾರ್ಡ್ ಕೊಡಬೇಕು. ಅಲ್ಲದೆ, ಮರಣ ಹೊಂದಿದವರ ಕುಟುಂಬದ ಸದಸ್ಯರಿಗೆ ಉದ್ಯೋಗ ನೀಡುವ ಜೊತೆಗೆ 10 ಲಕ್ಷ ರೂ. ಪರಿಹಾರ ನೀಡಬೇಕು. ಐಪಿಡಿ ಸಾಲಪ್ಪ ವರದಿ ಜಾರಿಯಾಗಬೇಕೆಂಬ ಬೇಡಿಕೆಗಳು ಸೇರಿವೆ. ಸಾಲಪ್ಪ ವರದಿಯು 500 ಜನಸಂಖ್ಯೆಗೆ ಒಬ್ಬ ಪೌರಕಾರ್ಮಿಕ ಇರಬೇಕೆಂದು ಹೇಳಿದೆ. ಆದರೆ ಈಗ 700 ಜನಸಂಖ್ಯೆಗೆ ಒಬ್ಬ ಪೌರಕಾರ್ಮಿಕ ನಿಯೋಜಿಸಲಾಗುತ್ತಿದೆ. ಇದರಿಂದ ಪೌರಕಾರ್ಮಿಕರ ಮೇಲೆ ಹೆಚ್ಚಿನ ಒತ್ತಡವಾಗುತ್ತಿದೆ. ಹಾಗಾಗಿ ಈ ವರದಿ ಜಾರಿಯಾದರೆ ಪೌರಕಾರ್ಮಿಕರ ಮೇಲಿನ ಒತ್ತಡ ಕಡಿಮೆಯಾಗುವ ಜೊತೆಗೆ ಬೇರೆಯವರಿಗೆ ಉದ್ಯೋಗಾವಕಾಶ ಸಹ ದೊರೆಯಲಿದೆ ಎಂದು ತಿಳಿಸಿದರು.

ಮೈಸೂರು ಜಿಲ್ಲೆಯಿಂದ ಕನಿಷ್ಠ 2 ಸಾವಿರ ಜನ ಬರಲು ವ್ಯವಸ್ಥೆ ಮಾಡಿಕೊಳ್ಳಿ ಎಂದು ಇದೇ ವೇಳೆ ತಿಳಿಸಿದರು. ರಾಜ್ಯ ಮಹಾಸಂಘದ ರಾಜ್ಯ ಉಪಾಧ್ಯಕ್ಷ ಆರ್.ಶಿವಣ್ಣ, ಉನ್ನತ ಸಮಿತಿ ಅಧ್ಯಕ್ಷ ಆರ್ಮುಗಂ, ಕಾರ್ಯದರ್ಶಿ ಯತಿರಾಜ್, ಮೈಸೂರು ಮಹಾನಗರ ಪಾಲಿಕೆ ಕಾಯಂ ಹಾಗೂ ಗುತ್ತಿಗೆ ಪೌರಕಾರ್ಮಿಕರ ಸಂಘದ ಅಧ್ಯಕ್ಷ ಆರ್.ಹರೀಶ್, ಪ್ರಧಾನ ಕಾರ್ಯದರ್ಶಿ ಸಿ.ಆರ್.ರಾಚಯ್ಯ ಸೇರಿದಂತೆ ವಿವಿಧ ಜಿಲ್ಲೆಗಳ ಪೌರಕಾರ್ಮಿಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ವಿಹಾರ್ ಗೇಟ್ 4ರಲ್ಲಿ ಅಂದು ಬೆಳಗ್ಗೆ 11 ಕ್ಕೆ ಸಮಾವೇಶ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾವೇಶ ಉದ್ಘಾಟಿಸಲಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸೇರಿದಂತೆ ಹಲವು ಸಚಿವರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ರಾಜ್ಯ ಸರ್ಕಾರದ ಸಚಿವ ಸಂಪುಟದ ಸಚಿವರಿಗೆ ಅಭಿನಂದನಾ ಸಮಾರಂಭ ಸಹ ಹಮ್ಮಿಕೊಳ್ಳಲಾಗಿದೆ.

ಮೈಸೂರು ಮಿತ್ರ

ನಗರಸಭೆ ವಸತಿ, ವಾಣಿಜ್ಯ ತೆರಿಗೆ ಶೇ.3ರಷ್ಟು ಹೆಚ್ಚಳ

ವಿಶೇಷ ಸಭೆಯಲ್ಲಿ ಸರ್ವ ಸದಸ್ಯರಿಂದ ಒಪ್ಪಿಗೆ



ನಂಜನಗೂಡಿನ ನಗರಸಭೆಯಲ್ಲಿ ವಿಶೇಷ ಸಭೆ ನಡೆಯಿತು.

ನಂಜನಗೂಡು, ಮಾ.24– ಇಲ್ಲಿನ ನಗರಸಭೆ ಸಭಾಂಗಣದಲ್ಲಿ ಸೋಮವಾರ ಅಧ್ಯಕ್ಷ ಶ್ರೀಕಂಠಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯಲ್ಲಿ ವಸತಿ ಹಾಗೂ ವಾಣಿಜ್ಯ ತೆರಿಗೆಯನ್ನು ಶೇ.3ರಷ್ಟು, ಕೈಗಾರಿಕೆಗಳ ಮೇಲೆ ವಿಧಿಸುವ ತೆರಿಗೆಯನ್ನು ಶೇ.5ರಷ್ಟು ಹೆಚ್ಚಿಸಲು ಸರ್ವ ಸದಸ್ಯರು ಒಪ್ಪಿಗೆ ಸೂಚಿಸಿದರು. ಇದರಿಂದಾಗಿ ನಗರದ ನಿವಾಸಿಗಳು ಏ.1 ರಿಂದ ನಗರದ ವಸತಿ ಹಾಗೂ ವಾಣಿಜ್ಯ ತೆರಿಗೆ ಶೇ.3 ರಷ್ಟು ಹೆಚ್ಚಿಗೆ ಭರಿಸಬೇಕಾಗಿದೆ.

ನಗರಸಭೆ ಆಯುಕ್ತ ವಿಜಯ್ ಮಾತನಾಡಿ, ಸರ್ಕಾರದ ಸೂಚನೆಯಂತೆ ಪ್ರತಿ ವರ್ಷ ವಸತಿ, ವಾಣಿಜ್ಯ, ಕೈಗಾರಿಕೆ ತೆರಿಗೆ ಪರಿಷ್ಕರಿಸಬೇಕಾಗಿದ್ದು, ಕನಿಷ್ಠ ಶೇ.3, ಗರಿಷ್ಠ ಶೇ.5ರಷ್ಟು ತೆರಿಗೆ ಹೆಚ್ಚಿಸಬೇಕಾಗಿದೆ. ಸಭೆ ಒಪ್ಪಿಗೆ ಸೂಚಿಸದಿದ್ದರೆ ನಾಗರಿಕರಿಗೆ ತಮ್ಮ ಆಸ್ತಿ, ದಾಖಲಾತಿ ಇ–ಖಾತೆ ಮಾಡಿಸಲು ಸಾಧ್ಯವಿಲ್ಲ ಎಂದರು.

ಸದಸ್ಯೆ ಗಾಯಿತ್ರಿ ಮಾತನಾಡಿ, ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಸಾರ್ವಜನಿಕರು ತೊಂದರೆಗೆ ಒಳಗಾಗಿದ್ದಾರೆ. ವಸತಿ ಹಾಗೂ ವಾಣಿಜ್ಯ ತೆರಿಗೆಯನ್ನು ಶೇ.3 ರಷ್ಟು ಹೆಚ್ಚಿಸಿ, ಕೈಗಾರಿಕಾ ತೆರಿಗೆಯನ್ನು ಶೇ.5ರಷ್ಟು ಹೆಚ್ಚಿಸಬಹುದು ಎಂದು ಸಲಹೆ ನೀಡಿದರು.

ನಗರದ ಕೆ.ಹೆಚ್.ಬಿ.ಕಾಲೋನಿಯ ಉದ್ಯಾನಕ್ಕೆ 'ವಿಶ್ವ ಗುರು ಬಸವಣ್ಣ' ಎಂದು ನಾಮಕರಣ ಮಾಡಿರುವ ಬಗ್ಗೆ ಸಾರ್ವಜನಿಕರಿಂದ 4 ತಕರಾರು ಅರ್ಜಿಗಳು ಬಂದಿದ್ದು, ದಿ.ಪುನೀತ್ ರಾಜ್ ಕುಮಾರ್, ಟಿಪ್ಪು ಸುಲ್ತಾನ್ ಹೆಸರಿಡುವಂತೆ ಒತ್ತಾಯ ಕೇಳಿ ಬಂದಿವೆ ಎಂದು ಆಯುಕ್ತರು ಮಾಹಿತಿ ನೀಡಿದರು.

ಸದಸ್ಯ ಹೆಚ್.ಎಸ್.ಮಹದೇವಸ್ವಾಮಿ ಮಾತನಾಡಿ, ಉದ್ಯಾನಕ್ಕೆ ಮಹಾತ್ಮರ ಹೆಸರನ್ನಿಟ್ಟು ಮತ್ತೆ ಬದಲಾಯಿಸಿದಲ್ಲಿ ಗಲಾಟೆಗೆ ಅವಕಾಶವಾಗುತ್ತದೆ. ಹೀಗಾಗಿ ವಿಶ್ವಗುರು ಬಸವಣ್ಣನವರ ಹೆಸರಿಟ್ಟಿರುವುದು ಸಮಂಜಸವಾಗಿದೆ. ಬದಲಾಯಿಸುವುದು ಬೇಡ ಎಂದರು.

ಸದಸ್ಯ ಯೋಗೀಶ್ ಮಾತನಾಡಿ, ಉದ್ಯಾನವನಕ್ಕೆ ಹೆಸರಿಡುವ ಸಂಬಂಧ 2021ರಲ್ಲಿ ನಗರಸಭೆ ಕೌನ್ಸಿಲ್ ಸಭೆ ಒಪ್ಪಿಗೆ ಪಡೆದು ವಿಶ್ವಗುರು ಬಸವಣ್ಣ ಉದ್ಯಾನವನ ಎಂದು ನಾಮಕರಣಗೊಳಿಸಿ ಬೋರ್ಡ್ ಅಳವಡಿಸಲಾಗಿದೆ. ಇದೀಗ ಕೆಲವರು ಗೊಂದಲ ಸೃಷ್ಟಿಸುವ ಸಲುವಾಗಿ 2024ರಲ್ಲಿ ತಕರಾರು ಅರ್ಜಿ ಸಲ್ಲಿಸಿದ್ದಾರೆ. ಆದ್ದರಿಂದ ಆ ತಕರಾರು ಅರ್ಜಿಗಳಿಗೆ ಮಾನ್ಯತೆ ಕೊಡದೆ ಹಿಂದಿನ ಕೌನ್ಸಿಲ್ ಸಭೆಯ ನಿರ್ಣಯದಂತೆ ವಿಶ್ವಗುರು ಬಸವಣ್ಣರವರ ಹೆಸರನ್ನೇ ಮುಂದುವರಿಸಬೇಕು ಎಂದು ಒತ್ತಾಯಿಸಿದರು.

ಆಯುಕ್ತ ವಿಜಯ್ ಈ ವಿಚಾರವಾಗಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದ್ದು, ಅವರ ತೀರ್ಮಾನ ಕಾದು ನೋಡಿ ನಿರ್ಧರಿಸಲಾಗುವುದು ಎಂದರು.

ಪರಿಸರ ಇಂಜಿನಿಯರ್ ಮೈತ್ರಾದೇವಿ ಮಾತನಾಡಿ, ನಗರದಲ್ಲಿ ಬೀದಿ ನಾಯಿಗಳನ್ನು ನಿಯಂತ್ರಿಸಲು ಸಂತಾನ ಹರಣ ಶಸ್ತ್ರಚಿಕಿತ್ಸೆ ನಡೆಸಲು ಮೈಸೂರಿನ ರೆಟಾ ಸಂಸ್ಥೆಗೆ ಟೆಂಡರ್ ನೀಡಲಾಗಿದ್ದು, ಒಂದು ನಾಯಿಗೆ 1650 ರೂ.ಯಂತೆ ದರ ನಿಗದಿಪಡಿಸಲಾಗಿದೆ ಎಂದರು.

ನಗರಸಭೆ ಸದಸ್ಯರು 31 ಲಕ್ಷ ವೆಚ್ಚದಲ್ಲಿ ಪಂಜಾಬ್‌ನ ಚಂಡೀಘಡಕ್ಕೆ 5 ದಿನಗಳ ಅಧ್ಯಯನ ಪ್ರವಾಸ ಕೈಗೊಳ್ಳುವ ಬಗ್ಗೆ ಸದಸ್ಯರು ತಕರಾರು ತೆಗೆಯದೆ ಒಕ್ಕೊರಳಿನಿಂದ ಒಪ್ಪಿಗೆ ಸೂಚಿಸಿದಾಗ ಸದಸ್ಯ ಕಪಿಲೇಶ್ ಮಾತನಾಡಿ ಈ ವಿಚಾರಕ್ಕೆ ಯಾವುದೇ ತಕರಾರು ತೆಗೆಯುವುದಿಲ್ಲ. ರಾಜ್ಯ ಸರ್ಕಾರ ಶಾಸಕ, ಮಂತ್ರಿಗಳ ಸಂಭಾವನೆ ದುಪ್ಪಟ್ಟು ಮಾಡಿದಾಗ ಒಕ್ಕೊರಳಿನಿಂದ ಒಪ್ಪಿಗೆ ಸೂಚಿಸಿದಂತೆ ಇಂತಹ ವಿಚಾರಗಳಿಗೆ ಸದಸ್ಯರಾರು ತಕರಾರು ತೆಗೆಯುವುದಿಲ್ಲ ಎಂದು ವ್ಯಂಗ್ಯವಾಡಿದ್ದು, ಸದಸ್ಯರ ನಗುವಿಗೆ ಕಾರಣವಾಯಿತು.

ಸಭೆಯಲ್ಲಿ ನಗರಸಭೆ ರೆಹೆನಾ ಬಾನು, ಸದಸ್ಯರಾದ ಯೋಗೇಶ್, ಮಹದೇವಪ್ರಸಾದ್, ಮೀನಾಕ್ಷಿ, ಖಾಲೀದ್, ಸಿದ್ದರಾಜು, ಸಿದ್ದಿಕ್, ಮಂಗಳಮ್ಮ, ಮಹೇಶ್ ಅತ್ತಿಖಾನೆ, ಗಂಗಾಧರ್, ವಿಜಯಲಕ್ಷ್ಮಿ, ನಗರಸಭಾ ಆಯುಕ್ತ ವಿಜಯ್, ನಗರಸಭಾ ಎಇಇ ಮಹೇಶ್, ಸೇರಿದಂತೆ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಕಾಡು ಹಂದಿಗಳ ಬೇಟೆಗಾಗಿ ಇರಿಸಿದ್ದ

ಸಿಡಿಮದ್ದು ಸಿಡಿದು ಹಸುವಿನ ಬಾಯಿ ಛಿದ್ರ

ನಂಜನಗೂಡು, ಮಾ.24– ಕಾಡು ಹಂದಿಗಳ ಬೇಟೆಗಾಗಿ ಇರಿಸಿದ್ದ ಸಿಡಿಮದ್ದು ಸಿಡಿದು ಹಸುವಿನ ಬಾಯಿ ಛಿದ್ರಗೊಂಡಿರುವ ಘಟನೆ ತಾಲೂಕಿನ ತಾಂಡ್ಯ ಕೈಗಾರಿಕಾ ಪ್ರದೇಶದ ವಾಟರ್ ಟ್ಯಾಂಕ್ ಬಳಿ ನಡೆದಿದೆ.

ತಾಲೂಕಿನ ಕೆಂಪಿಸಿದ್ದನಹುಂಡಿ ಗ್ರಾಮದ ಚೆನ್ನನಂಜೇಗೌಡ ಎಂಬುವರಿಗೆ ಸೇರಿದ ಹಸುವಿನ ಬಾಯಿ ಕಿಡಿಗೇಡಿಗಳ ಕೃತ್ಯದಿಂದಾಗಿ ಛಿದ್ರಗೊಂಡು ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿರುವ ದೃಶ್ಯ ಎಲ್ಲರ ಮನಕಲಕುವಂತಿದೆ.

ಕಿಡಿಗೇಡಿಗಳು ಕಾಡು ಹಂದಿಗಳ ಬೇಟೆಗಾಗಿ ಸಿಡಿಮದ್ದು ಇರಿಸಿದ್ದರು ಎನ್ನಲಾಗಿದೆ. ಚೆನ್ನನಂಜೇಗೌಡ ಅವರು ತಾಂಡ್ಯ ಕೈಗಾರಿಕಾ ಪ್ರದೇಶದ ವಾಟರ್ ಟ್ಯಾಂಕ್ ಬಳಿ ತಮ್ಮ ಹಸುವನ್ನು ಮೇಯಲು ಬಿಟ್ಟಿದ್ದ ವೇಳೆ ಸಿಡಿಮದ್ದು ಸ್ಫೋಟಗೊಂಡು ಹಸುವಿನ ಬಾಯಿ ಛಿದ್ರಗೊಂಡಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಚಿರತೆ ದಾಳಿ: ಮೇಕೆಗೆ ಗಾಯ



ಕಂಪಲಾಪುರ, ಮಾ.24– ಚಿರತೆ ದಾಳಿಗೆ ಮೇಕೆ ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ಬಸಲಾಪುರ ಗೇಟ್ ಬಳಿ ಭಾನುವಾರ ನಡೆದಿದೆ.

ಬಸಲಾಪುರ ಗೇಟ್ ನಿವಾಸಿ ಮಹೇಶ್ ಅವರ ಮೇಕೆ ಗಾಯಗೊಂಡಿದ್ದು, ಚಿರತೆ ಮೇಕೆ ಮೇಲೆ ದಾಳಿ ನಡೆಸಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಮಹೇಶ್ ಅವರು ಎಂದಿನಂತೆ ಕೊಟ್ಟಿಗೆಯಲ್ಲಿ ಹಸು, ಕರು ಹಾಗೂ ಮೇಕೆಯನ್ನು ಕಟ್ಟಿ ಹಾಕಿದ್ದರು. ತಡರಾತ್ರಿ ನಾಯಿ ಬೊಗಳಿದ್ದರಿಂದ ಓದಿನಲ್ಲಿ ನಿರತನಾಗಿದ್ದರಿಂದ ಮಹೇಶ್ ಅವರ ಪುತ್ರ ಹೇಮಂತ್ ಬಾಗಿಲು ತೆರೆದು ಕೊಟ್ಟಿಗೆ ನೋಡಿದಾಗ ಚಿರತೆ ಮೇಕೆ ಕುತ್ತಿಗೆ ಹಿಡಿದಿತ್ತು ಎನ್ನಲಾಗಿದೆ. ಈ ವೇಳೆ ನಾಯಿ ಜೋರಾಗಿ ಬೊಗಳಲಾರಂಭಿಸಿದಾಗ ಚಿರತೆ ಕಾಂಪೌಂಡ್ ಹಾರಿ ಪರಾರಿಯಾಗಿದೆ. ಚಿರತೆ ದಾಳಿ ವಿಚಾರ ಅರಣ್ಯ ಇಲಾಖೆಗೆ ತಿಳಿಸಲು ಹತ್ತಾರು ಬಾರಿ ಕರೆ ಮಾಡಿದರೂ ಸ್ಪಂದಿಸಲಿಲ್ಲ ಎಂದು ಹೇಮಂತ್ ಬೇಸರ ವ್ಯಕ್ತಪಡಿಸಿದ್ದಾರೆ. ವಿಷಯ ತಿಳಿದು ಸೋಮವಾರ ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಪರಿಶೀಲನೆ ನಡೆಸಿ ಚಿರತೆ ಸೆರೆಗೆ ಬೋನಿಟ್ಟಿದ್ದಾರೆ.

ಟಿವಿಎಸ್ ಎಕ್ಸೆಲ್‌ಗೆ ಸಾರಿಗೆ ಬಸ್ ಡಿಕ್ಕಿ: ಹಿಂಬದಿ ಸವಾರ ಸಾವು

ನಂಜನಗೂಡು, ಮಾ.24– ಟಿವಿಎಸ್ ಎಕ್ಸೆಲ್‌ಗೆ ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಹಿಂಬದಿ ಸವಾರ ಸಾವನ್ನಪ್ಪಿರುವ ಘಟನೆ ನಗರದ ದೇವಿರಮ್ಮನಹಳ್ಳಿ ವೃತ್ತದ ಬಳಿ ನಡೆದಿದೆ.

ತಾಲೂಕಿನ ಸಿಂಧುವಳ್ಳಿ ಗ್ರಾಮದ ನಿವಾಸಿ ಬೊಮ್ಮೇಗೌಡ (72) ಸಾವನ್ನಪ್ಪಿದ್ದು, ಪುತ್ರ ಮಹೇಶ (41) ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಪಾಯದಿಂದ ಪಾರಾಗಿದ್ದಾರೆ.

ವಿವರ: ಬ್ಯಾಂಕ್‌ನಲ್ಲಿ ಹಣ ತೆಗೆದುಕೊಳ್ಳಲು ಮಹೇಶ್ ತನ್ನ ಟಿವಿಎಸ್ ಎಕ್ಸೆಲ್‌ನಲ್ಲಿ ತಂದೆ ಬೊಮ್ಮೇಗೌಡರನ್ನು ಸಿಂಧುವಳ್ಳಿಯಿಂದ ನಂಜನಗೂಡು ಕಡೆಗೆ ಕರೆದೊಯ್ಯುತ್ತಿದ್ದರು. ನಗರದ ದೇವಿರಮ್ಮನಹಳ್ಳಿ ಸಿಗ್ನಲ್ ದಾಟಿ ಮುಂದೆ ಚಲಿಸುತ್ತಿದ್ದ ಸಂದರ್ಭ ಗುಂಡ್ಲುಪೇಟೆ ಕಡೆಯಿಂದ ಮೈಸೂರು ಕಡೆಗೆ ತೆರಳುತ್ತಿದ್ದ ಸಾರಿಗೆ ಬಸ್ ಮೊಪೆಡ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ಹಿಂಬದಿ ಕುಳಿತ್ತಿದ್ದ ಬೊಮ್ಮೇಗೌಡರ ತೊಡೆಯ ಭಾಗಕ್ಕೆ ಬಸ್‌ಚಕ್ರ ಹರಿದು ತೀವ್ರ ರಕ್ತಸ್ರಾವವಾಗಿ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯ ಸಾವನ್ನಪ್ಪಿದ್ದಾರೆ. ಮಹೇಶ್ ಸಣ್ಣಪುಟ್ಟ ಗಾಯಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ಸಂಚಾರಿ ಪೊಲೀಸ್ ಠಾಣೆ ಎಸ್‌ಐ ಸಿದ್ದರಾಜು, ರವೀಂದ್ರ ಭೇಟಿ ನೀಡಿ ಪರಿಶೀಲಿಸಿ ತನಿಖೆ ಕೈಗೊಂಡಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಠಾಣೆಯಲ್ಲಿ ದೂರು ದಾಖಲಾಗಿದೆ.

ಇಂದು ಜಾತ್ರಾ ಮಹೋತ್ಸವ

ಸರಗೂರು, ಮಾ.24– ತಾಲೂಕಿನ ಸಾಗರೆ ಗ್ರಾಮದಲ್ಲಿ ಮಾರಮ್ಮನವರ ಜಾತ್ರೆ ಹಾಗೂ ಕೊಂಡ ಮಹೋತ್ಸವ ಮಾ.25ರಂದು ಮಂಗಳವಾರ ನಡೆಯಲಿದೆ. ಜಾತ್ರೆಗೆ ಆಗಮಿಸುವ ಭಕ್ತರ ಅನುಕೂಲಕ್ಕಾಗಿ ಸರಗೂರು, ಹ್ಯಾಂಡ್‌ಪೋಸ್ಟ್, ಹೆಚ್.ಡಿ.ಕೋಟೆಯಿಂದ ಸಾಗರೆ ಗ್ರಾಮಕ್ಕೆ ಸಾರಿಗೆ ವ್ಯವಸ್ಥೆ ಮಾಡಲಾಗಿದೆ ಎಂದು ಜಾತ್ರಾ ಮಹೋತ್ಸವ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ವಿಜೃಂಭಣೆಯ ಶ್ರೀದುರ್ಗಾಪರಮೇಶ್ವರಿ ಅಮ್ಮನವರ ರಥೋತ್ಸವ



ಶ್ರೀದುರ್ಗಾಪರಮೇಶ್ವರಿ ಅಮ್ಮನವರ ರಥೋತ್ಸವ ನಡೆಯಿತು.

ಹಂಪಾಪುರ, ಮಾ.24– ಹೆಚ್.ಡಿ.ಕೋಟೆ ತಾಲೂಕಿನ ಹೊಮ್ಮರಗಳ್ಳಿ ಗ್ರಾಮದಲ್ಲಿ ಶ್ರೀದುರ್ಗಾಪರಮೇಶ್ವರಿ ಅಮ್ಮನವರ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸೋಮವಾರ ಮುಂಜಾನೆ ವಿಜೃಂಭಣೆಯಿಂದ ನಡೆಯಿತು.

ಭಾನುವಾರ ರಾತ್ರಿ ಆರಂಭಗೊಂಡ ರಥೋತ್ಸವಕ್ಕೂ ಮುನ್ನ ಅಮ್ಮನವರ ಚಂದ್ರಮಂಡಲ ವಾಹನ ಕಪಿಲಾ ನದಿಗೆ ಹೋಗಿ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಬಳಿಕ ದೇವರನ್ನು ಅಲಂಕರಿಸಿ ಉಯ್ಯಾಲೆ ಆಡಿಸುತ್ತಾ ಅಲಂಕೃತ ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ಈ ವೇಳೆ ಅಮ್ಮನವರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಸಾವಿರಾರು ಭಕ್ತರು ಅಮ್ಮನವರಿಗೆ ಜೈಕಾರ ಹಾಕುತ್ತಾ ದೇವಾಲಯದವರೆಗೂ ರಥ ಎಳೆದು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಅಮ್ಮನವರ ಮೆರವಣಿಗೆ ನಡೆಯಿತು. ಮಧ್ಯಾಹ್ನ 3 ರಿಂದ ರಾತ್ರಿ 8ರವರೆಗೆ ಮಹಿಳೆಯರು ದೇವರಿಗೆ ತಂಬಿಟ್ಟು ಆರತಿ ಮತ್ತು ಹಣ್ಣುಕಾಯಿ ನೈವೇದ್ಯ ಮಾಡಿ ಪೂಜೆ ಸಲ್ಲಿಸಿದರು. ರಥೋತ್ಸವಕ್ಕೆ ಆಗಮಿಸಿದ್ದ ಭಕ್ತರಿಗೆ ಪ್ರಸಾದ ವಿನಿಯೋಗ, ಪಾನಕ, ಮಜ್ಜಿಗೆ ವಿತರಣೆ ಮಾಡಲಾಯಿತು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ–ಉಪಾಧ್ಯಕ್ಷರಿಗೆ ಸನ್ಮಾನ

ಮಹದೇವಸ್ವಾಮಿಯನ್ನು ಬ್ಯಾಂಕ್ ಅಧ್ಯಕ್ಷನನ್ನಾಗಿ ಮಾಡುವೆ: ಮಹದೇವಣ್ಣ



ತಿ.ನರಸೀಪುರ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ ಹಾಗೂ ಉಪಾಧ್ಯಕ್ಷ ಎನ್.ಎನ್.ಮಹದೇವಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಮಾ.24– ಚುನಾವಣೆಯಲ್ಲಿ ನನ್ನ ಬೆನ್ನೆಲುಬಾಗಿ ನಿಂತ ಎನ್.ಎನ್.ಮಹದೇವಸ್ವಾಮಿ ಅವರನ್ನು ಕೊನೆಯ 10 ತಿಂಗಳು ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರನ್ನಾಗಿ ಮಾಡುತ್ತೇನೆ ಎಂದು ತಿ.ನರಸೀಪುರ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ ಭರವಸೆ ನೀಡಿದರು.

ತಾಲೂಕಿನ ನೆರಗ್ಯಾತನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಪಿಎಲ್‌ಡಿ ಬ್ಯಾಂಕ್ ಚುನಾವಣೆಗೂ ಪೂರ್ವದಿಂದಲೂ ಮಹದೇವಸ್ವಾಮಿ ಹಾಗೂ ಸದಸ್ಯರು ಬೆನ್ನೆಲುಬಾಗಿ ನಿಂತು ನನ್ನ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಹೀಗಾಗಿ ಮೊದಲ 4 ವರ್ಷಗಳ ಕಾಲ ನಾನು ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತೇನೆ. ಮಹದೇವಸ್ವಾಮಿ ಅವರನ್ನು ಕೊನೆಯ 10 ತಿಂಗಳ ಕಾಲ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರನ್ನಾಗಿ ಮಾಡುವುದಾಗಿ ಭರವಸೆ ನೀಡಿದರು.


ಸತತ 2ನೇ ಬಾರಿಗೆ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷನಾಗಿ ಆಯ್ಕೆಯಾಗಿರುವುದು ಸಂತಸ ತಂದಿದೆ. ಇದಕ್ಕೆ ಸಹಕರಿಸಿದ ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು ಸೇರಿದಂತೆ ಎಲ್ಲರಿಗೂ ಧನ್ಯವಾದ ಅರ್ಪಿಸುತ್ತೇನೆ. ಈಗಾಗಲೇ ಬ್ಯಾಂಕ್ ಅಧ್ಯಕ್ಷನಾಗಿ ಕಳೆದ 5 ವರ್ಷಗಳ ಕಾಲ ಉತ್ತಮ ಆಡಳಿತ ನಡೆಸಿದ್ದು, ಬ್ಯಾಂಕ್‌ನಿಂದ ರೈತರಿಗಾಗಿ ಸಾಕಷ್ಟು ಉತ್ತಮ ಯೋಜನೆಗಳನ್ನು ನೀಡಿ ಅನುಕೂಲ ಮಾಡಿಕೊಟ್ಟಿದ್ದೇನೆ. ಇದನ್ನು ಈ ಬಾರಿಯೂ ಮುಂದುವರೆಸುವುದಾಗಿ ತಿಳಿಸಿದ ಮಹದೇವಣ್ಣ ಮತ್ತಷ್ಟು ಉತ್ತಮ ಯೋಜನೆಗಳನ್ನು ಜಾರಿಗೊಳಿಸಲಾಗುವುದು. ಈ ಬಾರಿ ನನ್ನ ಮೇಲೆ ವಿಶ್ವಾಸವಿಟ್ಟು ಅಧಿಕಾರ ನೀಡಿದ್ದೀರಾ. ಹೀಗಾಗಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವ ಮೂಲಕ ಬ್ಯಾಂಕ್ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು.

ಉಪಾಧ್ಯಕ್ಷ ಎನ್.ಎನ್.ಮಹದೇವಸ್ವಾಮಿ ಮಾತನಾಡಿ, ಸ್ವಗ್ರಾಮದಲ್ಲಿ ನೀಡಿದ ಸನ್ಮಾನವನ್ನು ನಾನು ಎಂದಿಗೂ ಮರೆಯುವುದಿಲ್ಲ. ರೈತರಿಗೆ ಸಿಗಬೇಕಾದ ಸವಲತ್ತುಗಳನ್ನು ಸಮರ್ಪಕವಾಗಿ ನೀಡುವ ಮೂಲಕ ಅವರ ಋಣ ತೀರಿಸುತ್ತೇನೆ ಎಂದರು. ಇದೇ ವೇಳೆ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ಉಪಾಧ್ಯಕ್ಷ ಎನ್.ಎನ್.ಮಹದೇವಸ್ವಾಮಿ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು.

ಪಿಎಸಿಎಸ್ ಮಾಜಿ ಅಧ್ಯಕ್ಷ, ಜಯಪ್ಪ, ಹಾಲಿ ಸದಸ್ಯ ಡೈರಿ ಗುರುಮೂರ್ತಿ, ಗ್ರಾಪಂ ಮಾಜಿ ಸದಸ್ಯ ದುಂಡಪ್ಪ ಪ್ರಭು, ಮುಖಂಡರಾದ ಸುರೇಶ್, ಮಹದೇವಸ್ವಾಮಿ, ಕುಮಾರ್, ಎನ್.ವಿ.ಕುಮಾರ್, ಎಂ.ಪುಟ್ಟಸ್ವಾಮಿ, ಶಿವನಂಜಪ್ಪ, ಗುರುಸ್ವಾಮಿ, ಪ್ರದೀಪ, ಮಹೇಶ್, ಶಿವಲಿಂಗಪ್ಪ, ಮನೋಜ್, ವೆಂಕಟೇಸ್ವಾಮಿ, ನಟರಾಜು, ಶಿವಕುಮಾರ್, ನಟೇಶ್ ಇನ್ನಿತರರಿದ್ದರು.

ಕೊಯಮುತ್ತೂರು ಕಾಲೋನಿ ಸೊಸೈಟಿ ಕಾಂಗ್ರೆಸ್ ತೆಕ್ಕೆಗೆ

'ಕೈ' ಕಾರ್ಯಕರ್ತರಿಂದ ಸಂಭ್ರಮಾಚರಣೆ



ಕಾಂಗ್ರೆಸ್ ಬೆಂಬಲಿತ ನಿರ್ದೇಶಕರನ್ನು ಸನ್ಮಾನಿಸಲಾಯಿತು.

ಹುಣಸೂರು, ಮಾ.24– ತಾಲೂಕಿನ ಕೊಯಮುತ್ತೂರು ಕಾಲೋನಿ(ಸಿಬಿಟಿ ಕಾಲೋನಿ) ವ್ಯವಸಾಯ ಸೇವಾ ಸಹಕಾರ ಸಂಘದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತರು ಹೆಚ್ಚಿನ ಸ್ಥಾನ ಪಡೆದು ಅಧಿಕಾರ ಹಿಡಿದ ಹಿನ್ನೆಲೆಯಲ್ಲಿ ನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ನಗರದ ಸಂವಿಧಾನ ಸರ್ಕಲ್‌ನಲ್ಲಿ ಜಮಾಯಿಸಿದ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಸೊಸೈಟಿಯಲ್ಲಿ ವಿಜೇತರಾದ ಎಲ್ಲಾ ನಿರ್ದೇಶಕರನ್ನು ಮೆರವಣಿಗೆಯಲ್ಲಿ ಕಾಂಗ್ರೆಸ್ ಕಚೇರಿವರೆಗೆ ಕರೆ ತಂದರು.

ವಿಜೇತರನ್ನು ಸನ್ಮಾನಿಸಿ ಮಾತನಾಡಿದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಎಲ್ಲರೂ ಅವಿರೋಧವಾಗಿ ಆಯ್ಕೆಗೊಂಡಿರುವುದು ಸ್ವಾಗತಾರ್ಹ. ನಾಮಪತ್ರ ಹಿಂಪಡೆದವರಿಗೆ ಮುಂದಿನ ದಿನಗಳಲ್ಲಿ ಅವಕಾಶ ಕಲ್ಪಿಸಲಾಗುವುದು ಎಂದರು.

ನೂತನ ಆಡಳಿತ ಮಂಡಳಿ ಕೃಷಿಕರಿಗೆ ನೆರವಾಗುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಸಕಾಲದಲ್ಲಿ ಸಾಲ ಸೌಲಭ್ಯ ಕಲ್ಪಿಸಬೇಕು, ಯಾವುದೋ ಒಂದು ಸೊಸೈಟಿಯಲ್ಲಿ ಸೋತ ತಕ್ಷಣ ಕಾರ್ಯಕರ್ತರು ಅಧೀರರಾಗಬಾರದು, ಗೆದ್ದಾಗಲೂ ಬೀಗಬಾರದು. ನಮ್ಮ ಕಾರ್ಯಕರ್ತರು, ನಗರಸಭಾ ಸದಸ್ಯರು, ಮುಖಂಡರು ಯಾವುದೇ ಚುನಾವಣೆ ಇರಲಿ, ಯಾರೇ ಅಭ್ಯರ್ಥಿ ಆಗಿರಲಿ, ಅವರ ಗೆಲುವಿಗಾಗಿ ಮತದಾರರನ್ನು ಕರೆ ತಂದು ಮತ ಹಾಕಿಸಬೇಕು. ಮುಖಂಡರ ಕಾಲೆಳೆಯುವ ಪ್ರವೃತ್ತಿ ಬಿಟ್ಟು ಪಕ್ಷಕ್ಕೆ ನಿಷ್ಠರಾಗಿರಿ, ಪಕ್ಷ ನಿಷ್ಠೆ ಇದ್ದರೆ ಒಂದು ದಿನ ಯಾವುದಾದರೂ ಅಧಿಕಾರ ಒಲಿಯಲಿದೆ ಎಂದರು.

ಇದೇ ವೇಳೆ ನೂತನ ನಿರ್ದೇಶಕರಾದ ಹೆಚ್.ಪಿ.ಅಮರ್‌ನಾಥ್, ಸಿ.ಕುಪ್ಪುಸ್ವಾಮಿ, ಮಹದೇವ, ಎ.ಶಿವಲಿಂಗಪ್ಪ, ವೇಲುಮಣಿ, ಜವರನಾಯಕ, ಆರ್.ದೊರೆಸ್ವಾಮಿ ಹಾಗೂ ಡಿ.ಎನ್.ಧನರಾಜ್ ಅವರನ್ನು ಅಭಿನಂದಿಸಿದರು. ಕಾಂಗ್ರೆಸ್ ಅಧ್ಯಕ್ಷರಾದ ನಾರಾಯಣ್, ಪ್ರೇಮಕುಮಾರ್, ಕಾರ್ಯಾಧ್ಯಕ್ಷ ಪುಟ್ಟರಾಜು, ಗ್ರಾಪಂ ಅಧ್ಯಕ್ಷರಾದ ಮಂಗಾಣಿಬಾಬು, ಮಹದೇವ್, ಮಾಜಿ ಅಧ್ಯಕ್ಷೆ ಜಯಲಕ್ಷ್ಮಿ, ಮುಖಂಡರಾದ ಸುರೇಶ್, ರವಿ, ಮಂಜು, ಹೊನ್ನಪ್ಪ, ಮನೋಹರ್, ದೇವರಾಜ್, ಚಿನ್ನಸ್ವಾಮಿ, ಕಾರ್ತಿಕ್, ಚಿಕ್ಕಣ್ಣೇಗೌಡ, ಸುನಿತಾ, ಶಾಂತ, ಕಲ್ಪನ, ಸುಧಾಮಣಿ, ರೇಣುಕಾ, ರಾಘು, ಸ್ವಾಮಿಗೌಡ, ದರ್ಶನ್, ರಾಜೇಂದ್ರ, ಮಂಜು ಮೊದಲಿಯಾರ್, ನಗರಸಭೆ ಸದಸ್ಯರು, ವಿವಿಧ ಘಟಕಗಳ ಪದಾಧಿಕಾರಿಗಳು, ಕಾರ್ಯಕರ್ತರು ಭಾಗವಹಿಸಿದ್ದರು.

ಒಡಂಬಡಿಕೆಯಿಂದ ಅವಿರೋಧ ಆಯ್ಕೆ

ಸೊಸೈಟಿ ಅಭಿವೃದ್ಧಿ ದೃಷ್ಟಿಯಿಂದ ಸ್ಥಳೀಯ ಹಾಗೂ ಸೊಸೈಟಿ ವ್ಯಾಪ್ತಿಯ ಗ್ರಾಮಗಳ ಮುಖಂಡರು, ಮಾಜಿ ಶಾಸಕ ಮಂಜುನಾಥ್ ಒತ್ತಾಸೆ ಹಾಗೂ ಶಾಸಕ ಹರೀಶ್‌ಗೌಡ, ಮತ್ತವರ ಪ್ರತಿನಿಧಿಗಳ ಮನವಿ ಮೇರೆಗೆ ಕಾಂಗ್ರೆಸ್–8, ಜೆಡಿಎಸ್ –4 ಸ್ಥಾನದಂತೆ ಒಡಂಬಡಿಕೆ ಮಾಡಿಕೊಂಡು ಅವಿರೋಧವಾಗಿ ಆಯ್ಕೆಯಾಗಿದ್ದನ್ನು ನಿರ್ದೇಶಕ ಹೆಚ್.ಪಿ.ಅಮರ್‌ನಾಥ್ ಸಭೆಗೆ ತಿಳಿಸಿದರು.

ಬಳಸದ ಅಂಬೇಡ್ಕರ್ ಭವನಗಳನ್ನು ತರಬೇತಿ ಕೇಂದ್ರ ಮಾಡಿ

ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ



ಕಾರ್ಯಕ್ರಮವನ್ನು ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಮಾ.24– ತಾಲೂಕಿನಲ್ಲಿ ಬಳಕೆ ಮಾಡದ ಅಂಬೇಡ್ಕರ್ ಭವನಗಳನ್ನು ತರಬೇತಿ ಕೇಂದ್ರಗಳನ್ನಾಗಿ ಮಾರ್ಪಾಡು ಮಾಡಬೇಕು ಎಂದು ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಹೆಬ್ಬಲಗುಪ್ಪೆ ಗ್ರಾಮದಲ್ಲಿ ಅಂಬೇಡ್ಕರ್ ಪುತ್ಥಳಿ ಅನಾವರಣ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ನಿಮ್ಮ ಮಕ್ಕಳು ಜಿಲ್ಲಾಧಿಕಾರಿ ಮತ್ತು ಇತರ ಅತ್ಯುತ್ತಮ ಸೇವೆಗಳಿಗೆ ಸೇರುವಂತಹ ಶಿಕ್ಷಣ ಪಡೆಯಬೇಕು ಎಂದರು.

ಅಂಬೇಡ್ಕರ್ ಅವರು ಕೇವಲ ಪ.ಜಾತಿ ಮತ್ತು ಪಂಗಡ ಮಾತ್ರವಲ್ಲದೆ ಎಲ್ಲಾ ಶೋಷಿತರಿಗೂ ಸಂವಿಧಾನದ ಮೂಲಕ ಮೀಸಲಾತಿ ಕೊಟ್ಟಿದ್ದಾರೆ. ಕೋರೆಗಾಂವ್ ವಿಜಯೋತ್ಸವ ಮಾಡಿದಾಗ ತೋಳ್ಬಲದಲ್ಲಿ ಗೆದ್ದಿದ್ದರು. ಆದರೆ ಈಗ ಅಕ್ಷರಕ್ಕೆ ಬಲವಿದೆ. ಆದ್ದರಿಂದ ಜ್ಞಾನವಂತರಾಗಿ ಎಂದರು.


ಶಾಸಕ ಅನಿಲ್ ಮಾತನಾಡಿ, ವಿಶ್ವದಲ್ಲೇ ಹೆಚ್ಚು ಪದವಿಗಳನ್ನು ಪಡೆದ ಏಕೈಕ ಜ್ಞಾನಿ ಅಂಬೇಡ್ಕರ್ ಎಂದ ಅವರು ತಾಲೂಕಿನ ಬಹುತೇಕ ಅಂಬೇಡ್ಕರ್ ಭವನಗಳನ್ನು ಗ್ರಂಥಾಲಯಗಳನ್ನಾಗಿ ಮಾಡಿ ಜ್ಞಾನದ ಕೇಂದ್ರಗಳನ್ನಾಗಿ ಮಾರ್ಪಾಡು ಮಾಡಲಾಗುವುದು ಎಂದರು.

ಮೀಸಲಾತಿಯಿಂದ ನಾನು ಶಾಸಕನಾಗಿದ್ದು, ಸಂವಿಧಾನದ ಅಡಿ ಕೆಲಸಗಳನ್ನು ಕಾರ್ಯರೂಪಕ್ಕೆ ತರುವಾಗ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುತ್ತೇನೆ. ಅಂತಹ ವಿಚಾರಗಳನ್ನು ಜಾತಿ ವಿರೋಧಿ ಎಂದು ಬಿಂಬಿಸುವ ಕೆಲಸವನ್ನು ಕಿಡಿಗೇಡಿಗಳು ಮಾಡುತ್ತಿದ್ದಾರೆ. ಇದರಿಂದ ನಾನು ವಿಚಲಿತನಾಗಿಲ್ಲ ಎಂದ ಅವರು ನಂಜನಗೂಡು ಸಂಪರ್ಕ ಕಲ್ಪಿಸುವ ಈ ಗ್ರಾಮದ ಬಹುದೊಡ್ಡ ಸೇತುವೆ ಮತ್ತು ರಸ್ತೆ ಅಭಿವೃದ್ಧಿ ಮಾಡಲು ಕ್ರಮ ವಹಿಸಲಾಗುವುದು ಎಂದರು.

ಶಾಸಕ ದರ್ಶನ್, ಅಂಬೇಡ್ಕರ್ ಪುತ್ಥಳಿ ದಾನಿಗಳಾದ ಎಸ್.ವಿ.ವೆಂಕಟೇಶ್ ಮಾತನಾಡಿದರು. ಮುಖಂಡ ನಟರಾಜು ಮಾತನಾಡಿ, ಗ್ರಾಮದ ಕಬಿನಿ ನದಿಗೆ ಸಂಪರ್ಕ ಸೇತುವೆ, ಪಿಯುಸಿ ಕಾಲೇಜು ಪ್ರಾರಂಭಿಸಬೇಕು, ಸಿಸಿ ರಸ್ತೆ, 200 ಮನೆಗಳನ್ನು ಮಂಜೂರು ಮಾಡಿಸುವಂತೆ ಬೇಡಿಕೆ ಇಟ್ಟರು.

ಈ ವೇಳೆ ಅಂತರಸಂತೆ ಸಾರಾನಾಥ ಬೌದ್ಧ ವಿಹಾರದ ಗೌತಮಿ ಬಂತೇಜಿ, ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ, ಶಿವಣ್ಣ, ಗ್ರಾಪಂ ಅಧ್ಯಕ್ಷೆ ಪುಷ್ಪ, ಉಪಾಧ್ಯಕ್ಷೆ ರೇಣುಕಾ, ಪಪಂ ಸದಸ್ಯ ಪ್ರೇಮ್ ಸಾಗರ್, ಡಾ. ಶಿವಕುಮಾರ್, ಮುಖಂಡರಾದ ಹೆಚ್.ಸಿ.ಮಂಜುನಾಥ್, ವೆಂಕಟಸ್ವಾಮಿ, ಚಿಕ್ಕವೀರನಾಯಕ, ಮರಿದೇವಯ್ಯ, ಬಸವರಾಜು, ಜವರಯ್ಯ, ಮುದ್ದುಮಲ್ಲಯ್ಯ, ಮಲ್ಲೇಶ್, ಎಂ.ಡಿ.ಮಂಚಯ್ಯ, ದೊಡ್ಡ ಯಜಮಾನರಾದ ಕೃಷ್ಣಯ್ಯ, ಸುರೇಶ್, ನಿಂಗಯ್ಯ, ಎಸ್.ಲಿಂಗಯ್ಯ, ಶಿವಪ್ಪ ಇದ್ದರು.

ಬನ್ನೂರು ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಬನ್ನೂರು ಪಿಎಸಿಎಸ್ ಅಧ್ಯಕ್ಷರಾಗಿ ಬಿ.ಎಸ್.ರವೀಂದ್ರ ಕುಮಾರ್, ಉಪಾಧ್ಯಕ್ಷರಾಗಿ ಬಿ.ಕೆ. ನಾರಾಯಣ್ ಆಯ್ಕೆಯಾದರು.

ಬನ್ನೂರು, ಮಾ.24– ಬನ್ನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಿ.ಎಸ್.ರವೀಂದ್ರ ಕುಮಾರ್, ಉಪಾಧ್ಯಕ್ಷರಾಗಿ ಬಿ.ಕೆ.ನಾರಾಯಣ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಛೇರಿಯಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಿ.ಆರ್.ರವೀಂದ್ರ ಕುಮಾರ್ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಬಿ.ಕೆ.ನಾರಾಯಣ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಎಸ್.ಮಂಜು ಘೋಷಿಸಿದರು.

ನಿರ್ದೇಶಕರಾದ ಬಿ.ಸಿ.ಮಾಯಿಗೌಡ, ರಮೇಶ್, ಕೆ.ಎಸ್.ಸಾರಿಕ, ಜ್ಯೋತಿ, ಧರ್ಮಲಿಂಗು, ಕೆ.ಬಸವರಾಜು, ಚಿಕ್ಕಸ್ವಾಮಿ, ಬಿ.ಆರ್.ಹೇಮಂತ್ ಕುಮಾರ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗೆ ಸಹಮತ ಸೂಚಿಸಿ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷ ಬಿ.ಎಸ್.ರವೀಂದ್ರ ಕುಮಾರ್ ಮಾತನಾಡಿ, ಷೇರುದಾರರು ಹಾಗೂ ನಿರ್ದೇಶಕರ ಮಾರ್ಗದರ್ಶನದಲ್ಲಿ ಸಂಘಕ್ಕೆ ಬರುವ ಬಡ್ಡಿ ರಹಿತ ಸಾಲ ಸೇರಿದಂತೆ ಇನ್ನಿತರೆ ಸೌಲಭ್ಯಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನಿಸುತ್ತೇನೆ. ನನ್ನ ಅಧಿಕಾರಾವಧಿಯಲ್ಲಿ ಸಂಘದ ಅಭಿವೃದ್ಧಿಯೆಡೆಗೆ ಹೆಚ್ಚಿನ ಗಮನ ಹರಿಸುತ್ತೇನೆ ಎಂದು ತಿಳಿಸಿದರು.

ಪ್ರೊ.ಡಾ.ಬಿ.ಕೆ.ಜ್ಞಾನಪ್ರಕಾಶ್ ಮಾತನಾಡಿದರು. ಸಂಘದ ಇಓ ಆರ್.ಶೋಭಾ, ಮೇಲ್ವಿಚಾರಕ ಮಂಜೇಶ್‌ಗೌಡ, ನಿವೃತ್ತ ಉಪನ್ಯಾಸಕ ಡಾ.ರಾಮಚಂದ್ರ, ಮಹೇಶ್, ರಾಮಚಂದ್ರ, ಮಲ್ಲೇಗೌಡ, ಮಾಯಿಗೌಡ ಸೇರಿದಂತೆ ಇತರರಿದ್ದರು.

ಮಾ.28ಕ್ಕೆ ತಿ.ನರಸೀಪುರ ಪುರಸಭೆ ಬಜೆಟ್ ಮಂಡನೆ

ಪೂರ್ವಭಾವಿ ಸಭೆಯಲ್ಲಿ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹ



ಪಟ್ಟಣದಲ್ಲಿ ಪುರಸಭೆ ಬಜೆಟ್ ಪೂರ್ವಭಾವಿ ಸಭೆ ನಡೆಯಿತು.

ತಿ.ನರಸೀಪುರ, ಮಾ.24– ಮಾರ್ಚ್ 28 ರಂದು ಪುರಸಭೆ ಬಜೆಟ್ ಮಂಡನೆ ಹಿನ್ನೆಲೆಯಲ್ಲಿ ಪಟ್ಟಣದ ಪುರಸಭೆಯ ಸ್ತ್ರೀ ಶಕ್ತಿ ಭವನದಲ್ಲಿ ಅಧ್ಯಕ್ಷೆ ವಸಂತ ಶ್ರೀಕಂಠ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಲಾಯಿತು.

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿ, ಪಟ್ಟಣದ ಭಗವಾನ್ ಚಿತ್ರ ಮಂದಿರ, ಕುವೆಂಪು, ವಿದ್ಯೋದಯ ಹಾಗೂ ತಿರುಮಕೂಡಲು ಸರ್ಕಲ್‌ಗಳನ್ನು ಅಗಲೀಕರಣಗೊಳಿಸಿ ಅಭಿವೃದ್ಧಿಪಡಿಸಲು ಬಜೆಟ್‌ನಲ್ಲಿ ಹಣ ಮೀಸಲಿಡುವಂತೆ ಸಲಹೆ ನೀಡಿದರು.

ಮಾಜಿ ಪುರಸಭೆ ಸದಸ್ಯ ಎನ್.ಲೋಕೇಶ್ ಮಾತನಾಡಿ, ಪುರಸಭೆ ವ್ಯಾಪ್ತಿಯ ತಿರುಮಕೂಡಲು ಬಳಿ ಆಕರ್ಷಕ ಸ್ವಾಗತ ಕಮಾನುಗಳನ್ನು ನಿರ್ಮಿಸಬೇಕು. ಪಟ್ಟಣ ವ್ಯಾಪ್ತಿಯ ಗೋಪಾಲಪುರ ಗ್ರಾಮದ ಏಕೈಕ ಪಾರ್ಕ್ ಅಭಿವೃದ್ಧಿ ಪಡಿಸಬೇಕು ಹಾಗೂ 23ನೇ ವಾರ್ಡ್‌ನಲ್ಲಿ ಮಳೆ ಬಂದ ವೇಳೆ ಮನೆಗಳಿಗೆ ನೀರು ನುಗ್ಗುತ್ತಿರುವುದರಿಂದ ವಾರ್ಡ್ ನಿವಾಸಿಗಳು ತೀವ್ರ ಸಂಕಷ್ಟ ಅನುಭವಿಸುತ್ತಿದ್ದು, ಕೂಡಲೇ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕೆಂದು ಸಲಹೆ ನೀಡಿದರು.

ಮಣಿಕಂಠಸ್ವಾಮಿ ಮಾತನಾಡಿ, ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮೀಸಲಿಟ್ಟಿರುವ ಹಣ ಸಾಲದಾಗಿದ್ದು, ಅದರ ಮೊತ್ತವನ್ನು ಹೆಚ್ಚಿಸಬೇಕೆಂದು ಒತ್ತಾಯಿಸಿದರೇ, ಬಸವ ಭವನ ನಿರ್ಮಾಣಕ್ಕೆ ನಿವೇಶನ ನೀಡುವಂತೆ ಎಸ್.ಎಂ.ಆರ್.ಪ್ರಕಾಶ್ ಕೋರಿದರು.

18ನೇ ವಾರ್ಡ್‌ನಲ್ಲಿ ಸ್ಮಶಾನ ಸ್ವಚ್ಛತೆ, ಪಟ್ಟಣದ ಸ್ವಚ್ಛತೆ, ಬೀದಿ ದೀಪಗಳಿಗೆ ಹೆಚ್ಚಿನ ಆದ್ಯತೆ ನೀಡಿ ಮೂಲ ಸೌಕರ್ಯ ಕಲ್ಪಿಸಿಕೊಡುವ ಜೊತೆಗೆ ಪ್ರತಿ ವಾರ್ಡ್‌ಗೊಂದು ಗ್ರಂಥಾಲಯ ನಿರ್ಮಿಸಲು ಹಣ ಮೀಸಲಿಡಬೇಕೆಂದು ಸಂತೃಪ್ತಿ ಕುಮಾರ್ ಸಲಹೆ ನೀಡಿದರು.

ತ್ರಿವೇಣಿ ನಗರದಲ್ಲಿ ಕುಡಿಯುವ ನೀರಿನ ಘಟಕ, ಮಹಾನಾಯಕ ವೃತ್ತದ ಬಳಿ ಡೆಕ್ ನಿರ್ಮಾಣ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಕುಡಿಯುವ ನೀರಿನ ಸೌಲಭ್ಯ, ದೊಡ್ಡ ಮೋರಿ ಸ್ವಚ್ಛತೆ, ವಿನಾಯಕ ಕಾಲೋನಿಯಲ್ಲಿ ನಾಯಿಗಳ ಹಾವಳಿ ತಡೆಗೆ ಕ್ರಮ ಕೈಗೊಳ್ಳುವುದು, ತಿರುಮಕೂಡಲು ಸರ್ಕಲ್‌ನಿಂದ ವಿದ್ಯೋದಯ ಕಾಲೇಜು ವೃತ್ತದವರೆಗೆ ಬೀದಿ ದೀಪದ ವ್ಯವಸ್ಥೆ ಮಾಡುವಂತೆ ಸಾರ್ವಜನಿಕರು ಸಲಹೆ ನೀಡಿದರೆ ಸದಸ್ಯೆ ರೂಪಾ ಸಾಂಕ್ರಾಮಿಕ ರೋಗ ಹರಡುವ ಭೀತಿ ಎದುರಾಗಿದ್ದು, ಈ ಬಗ್ಗೆ ಅರಿವು ಮೂಡಿಸುವಂತೆ ಸಲಹೆ ನೀಡಿದರು.

ಅಧ್ಯಕ್ಷೆ ವಸಂತ ಮಾತನಾಡಿ, ಸಾರ್ವಜನಿಕರು ಸಭೆಯಲ್ಲಿ ಉತ್ತಮ ಸಲಹೆ ನೀಡಿದ್ದು, ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಉತ್ತಮ, ಅಭಿವೃದ್ಧಿ ಪರ ಬಜೆಟ್ ಮಂಡಿಸುವುದಾಗಿ ಭರವಸೆ ನೀಡಿದರು.

ಸಭೆಯಲ್ಲಿ ಮಾಜಿ ಅಧ್ಯಕ್ಷ ಎಸ್.ಮದನ್‌ರಾಜ್, ಟಿ.ಎಂ.ನಂಜುಂಡಸ್ವಾಮಿ, ಸದಸ್ಯರಾದ ಮೆಡಿಕಲ್ ನಾಗರಾಜು, ಸಿಸ್ಟಮ್ ಸಿದ್ದು, ಮುಖ್ಯಾಧಿ ಕಾರಿ ಬಿ.ಕೆ.ವಸಂತಕುಮಾರಿ, ಇಂಜಿನಿಯರ್ ನಾಗರಾಜು, ಲೆಕ್ಕಾಧಿಕಾರಿ ವಿನಯ್, ಕಚೇರಿ ವ್ಯವಸ್ಥಾಪಕ ಮಹೇಂದ್ರ, ಆರೋಗ್ಯಾಧಿಕಾರಿ ಮಧು, ರಾಜು, ಸ್ವಾಮಿ, ರಾಮಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

ಆಹ್ವಾನ ನೀಡದೇ ಶಿಷ್ಟಾಚಾರ ಉಲ್ಲಂಘನೆ: ಆರೋಪ

ಪುರಸಭೆಯಲ್ಲಿ ಮುಖ್ಯಾಧಿಕಾರಿ ಸರ್ವಾಧಿಕಾರಿ ಧೋರಣೆ ಮುಂದುವರೆದಿದ್ದು, ಬಜೆಟ್ ಪೂರ್ವಭಾವಿ ಸಭೆಗೆ ತಮಗೆ ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘನೆ ಮಾಡಿದ್ದಾರೆ ಎಂದು ಪುರಸಭೆ ಉಪಾಧ್ಯಕ್ಷೆ ರಾಜೇಶ್ವರಿ ಎಂ.ರಾಘವೇಂದ್ರ ಆರೋಪಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪುರಸಭೆಯಲ್ಲಿ ಸಭೆ, ಕಾರ್ಯಕ್ರಮ ಸೇರಿದಂತೆ ಯಾವುದೇ ನಿರ್ಧಾರ ಕೈಗೊಳ್ಳಬೇಕಾದರೆ ಪೂರ್ವಭಾವಿಯಾಗಿ ಅಧ್ಯಕ್ಷ–ಉಪಾಧ್ಯಕ್ಷರೊಂದಿಗೆ ಚರ್ಚಿಸಿ ಆಗಬೇಕಾದ ಹಾಗೂ ಮಾಡ ಬಹುದಾದ ಕಾರ್ಯಗಳ ಬಗ್ಗೆ ಸಮಾಲೋಚನೆ ನಡೆಸಿ ನಂತರ ಸಭೆ ಆಯೋಜಿಸಬೇಕು. ಆದರೆ ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ ಯಾವುದೇ ನಿಯಮ ಪಾಲಿಸಿಲ್ಲ. ಉಪಾಧ್ಯಕ್ಷೆಯಾದ ನನ್ನೊಂದಿಗೆ ಸಮಾಲೋಚನೆ ನಡೆಸಿಲ್ಲ. ಮನೆಗೆ ನೋಟೀಸ್ ತಲುಪಿಸಿ ಕೈ ತೊಳೆದುಕೊಳ್ಳುವ ಕೆಲಸ ಮಾಡಿದ್ದಾರೆ. ಹಾಗಾಗಿ ಇಂದಿನ ಪೂರ್ವಭಾವಿ ಬಜೆಟ್ ಸಭೆಗೆ ಗೈರಾಗಿದ್ದೇನೆ ಎಂದರು.

ಐಪಿಎಲ್ ಹಂಗಾಮ

ಅಶುತೋಷ್ ಶರ್ಮಾ ಅಬ್ಬರ: ಡೆಲ್ಲಿಗೆ ರೋಚಕ ಜಯ

ವಿಶಾಖಪಟ್ಟಣ, ಮಾ.24– ಅಶುತೋಷ್ ಶರ್ಮಾ ಅಮಮಿಂಚಿನ ಬ್ಯಾಟಿಂಗ್ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್, ಲಕ್ನೋ ಸೂಪರ್ಸ್ ಜೈಂಟ್ಸ್ ವಿರುದ್ಧ 1 ವಿಕೆಟ್‌ಗಳ ರೋಚಕ ಜಯ ಸಾಧಿಸಿ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.

ಇಲ್ಲಿನ ವೈ.ಎಸ್.ರಾಜಶೇಖರರೆಡ್ಡಿ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ಸೂಪರ್ ಜೈಂಟ್ಸ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 209 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ಈ ಗುರಿ ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ 19.3 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 211 ರನ್ ಗಳಿಸುವ ಮೂಲಕ ಇನ್ನೂ 3 ಎಸೆತ ಬಾಕಿ ಇರುವಂತೆಯೇ ಗೆಲುವಿನ ನಗೆ ಬೀರಿತು.

ಡೆಲ್ಲಿ ತಂಡದ ಆರಂಭ ಉತ್ತಮವಾಗಿರಲಿಲ್ಲ. ತಂಡದ ಮೊತ್ತ 7 ರನ್ ಆಗುವಷ್ಟರಲ್ಲಿ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ನಂತರ ಬಂದ ನಾಯಕ ಅಕ್ಷರ್ ಪಟೇಲ್ 22, ಫಾಫ್ ಡುಪ್ಲೆಸಿಸ್ 29 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ನಂತರ ಬಂದ ಟ್ರಿಸ್ಟನ್ ಸ್ಟಬ್ಸ್ ಸಹ 3 ಸಿಕ್ಸರ್, 1 ಬೌಂಡರಿ ಒಳಗೊಂಡ 34 ರನ್ ಗಳಿಸಿ ಔಟಾದರು. ಈ ವೇಳೆ ಕ್ರೀಸ್‌ಗೆ ಆಗಮಿಸಿದ ವಿಪ್ರಾಜ್ ನಿಗಮ್ 15 ಎಸೆತಗಳಲ್ಲಿ 5 ಬೌಂಡರಿ, 2 ಸಿಕ್ಸರ್ ಒಳಗೊಂಡ ಬಿರುಸಿನ 39ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇಂಪ್ಯಾಕ್ಟ್ ಪ್ಲೇಯರ್ ಆಗಿ ಕಣಕ್ಕಿಳಿದು ಒಂದೆಡೆ ವಿಕೆಟ್ ಬೀಳುತ್ತಿದ್ದರೂ, ಮತ್ತೊಂಡೆದೆ ಧೃಡವಾಗಿ ನಿಂತು ಅಬ್ಬರಿಸಿದ ಅಶುತೋಷ್ ಶರ್ಮಾ 31 ಎಸೆತಗಳಲ್ಲಿ ತಲಾ 5 ಸಿಕ್ಸರ್, ಬೌಂಡರಿ ಒಳಗೊಂಡ ಅಜೇಯ 66 ರನ್ ಗಳಿಸಿ ಸೋಲುವ ಹಂತದಲ್ಲಿದ್ದ ತಂಡಕ್ಕೆ ರೋಚಕ ಜಯ ತಂದುಕೊಟ್ಟರು. ಉಳಿದಂತೆ ಮಿಚೆಲ್ ಸ್ಟಾರ್ಕ್ 2, ಕುಲದೀಪ್ ಯಾದವ್ 5 ವಿಕೆಟ್ ಗಳಿಸಿದರು. ಲಕ್ನೋ ಪರ ಶಾರ್ದೂಲ್ ಠಾಕೂರ್, ಮಣಿಮಾರನ್ ಸಿದ್ಧಾರ್ಥ್, ದಿಗ್ವೇಶ್ ರಥಿ, ರವಿ ಬಿಷ್ಣೋಯಿ ತಲಾ 2 ವಿಕೆಟ್ ಪಡೆದರು. ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ಸೂಪರ್ ಜೈಂಟ್ಸ್‌ಗೆ ಆರಂಭಿಕರಾದ ಮಿಚೆಲ್ ಮಾರ್ಷ್, ಐಡನ್ ಮಾರ್ಕಮ್ ಮೊದಲ ವಿಕೆಟ್‌ಗೆ 46 ರನ್ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ ಮಾರ್ಕಮ್ 15 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಜೊತೆಯಾದ ಮಾರ್ಷ್ ಹಾಗೂ ಪೂರನ್ 2ನೇ ವಿಕೆಟ್‌ಗೆ 87 ರನ್‌ಗಳ ಜೊತೆಯಾಟವಾಡಿದರು. ಡೆಲ್ಲಿ ಬೌಲರ್‌ಗಳ ಮೇಲೆ ಸವಾರಿ ಮಾಡಿದ ಮಾರ್ಷ್ 36 ಎಸೆತಗಳಲ್ಲಿ ತಲಾ 6ಸಿಕ್ಸರ್, ಬೌಂಡರಿ ಒಳಗೊಂಡ 72 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಅಬ್ಬರಿಸಿದ ಪೂರನ್ 30 ಎಸೆತಗಳಲ್ಲಿ 7 ಸಿಕ್ಸರ್, 6 ಬೌಂಡರಿ ಒಳಗೊಂಡ 75 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ಡೇವಿಡ್ ಮಿಲ್ಲರ್ 27 ರನ್ ಗಳಿಸಿದರು.



ಲಕ್ನೋ ಪರ ಮಿಚೆಲ್ ಸ್ಟಾರ್ಕ್ 3, ಕುಲದೀಪ್ ಯಾದವ್ 2, ವಿಪ್ರಾಜ್ ನಿಗಮ್, ಮುಖೇಶ್ ಕುಮಾರ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಅಶುತೋಷ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಇಂದಿನ ಪಂದ್ಯ

ಗುಜರಾತ್ ಟೈಟಾನ್ಸ್
V/S
ಪಂಜಾಬ್ ಕಿಂಗ್ಸ್

ಸಮಯ: ಸಂಜೆ 7.30

ಸ್ಥಳ : ನರೇಂದ್ರ ಮೋದಿ ಕ್ರೀಡಾಂಗಣ, ಅಹಮದಾಬಾದ್

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಖಡ್ಗಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಸಲಾರ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಯೂರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ಅಸ್ತ್ರಂ ದಿ ಸೀಕ್ರೆಟ್ (ತ)	4 ಪ್ರದರ್ಶನಗಳು
ಸಂಗಂ	
ಬರ್ಗೆಟ್ ಬಸ್ಯಾ (ಕ)	4 ಪ್ರದರ್ಶನಗಳು
ಲಿಡೋ	
ಫಾರೆಸ್ಟ್(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 2	ಬರ್ಗೆಟ್ ಬಸ್ಯಾ (ಕ): ಬೆ.10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ.
ಸ್ಕ್ರೀನ್ 4	ಡ್ರ್ಯಾಗನ್ (ತ): ಬೆ.10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

INOX LIVE THE MOVIE — ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ.
ಸ್ಕ್ರೀನ್ 2	ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.

PVR CINEMAS — ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವಿವಿಧ ಯೋಜನೆಗಳ ಸೌಲಭ್ಯ ಜನರಿಗೆ ತಲುಪಿದರೆ ಹಿಂದುಳಿದ ತಾಲೂಕುಗಳ ತಲಾದಾಯ ಹೆಚ್ಚಳ

- ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಅಧ್ಯಕ್ಷ ಪ್ರೊ|| ಎಂ.ಗೋವಿಂದರಾವ್ ಅಭಿಮತ
- ಮೈಸೂರಲ್ಲಿ ಸಮಿತಿಯ ಪ್ರಗತಿ ಪರಿಶೀಲನಾ ಸಭೆ; ಅಧಿಕಾರಿಗಳು, ಉದ್ಯಮಿಗಳಿಂದ ಅಭಿಪ್ರಾಯ ಸಂಗ್ರಹ

ಮೈಸೂರು,ಮಾ.24(ಎಂಟಿವೈ)– ಹಿಂದುಳಿದ ತಾಲೂಕುಗಳ ಜನರ ತಲಾ ಆದಾಯ ವೃದ್ಧಿಗೆ ಹೆಚ್ಚಿನ ಯೋಜನೆಗಳನ್ನು ರೂಪಿಸುವ ಮೂಲಕ ಪ್ರಾದೇಶಿಕ ಅಸಮತೋಲನ ನಿವಾರಣೆ ಮಾಡಬೇಕು ಎಂದು ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಅಧ್ಯಕ್ಷರೂ ಆದ ಆರ್ಥಿಕ ತಜ್ಞ ಪ್ರೊ.ಎಂ.ಗೋವಿಂದರಾವ್ ಸಲಹೆ ನೀಡಿದ್ದಾರೆ.

ಮೈಸೂರಿನ ಜಿಪಂ ಸಭಾಂಗಣದಲ್ಲಿ ಸೋಮವಾರ ನಡೆದ ಮೈಸೂರು ವಿಭಾಗ ಮಟ್ಟದ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಾದೇಶಿಕ ಅಸಮತೋಲನ ಹೋಗಲಾಡಿಸಬೇಕಾದರೆ ಗುರುತಿಸಲ್ಪಟ್ಟ ಹಿಂದುಳಿದ ತಾಲೂಕುಗಳ ಜನರ ಆದಾಯ ಹೆಚ್ಚಳಕ್ಕಾಗಿ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಜನರಿಗೆ ತಲುಪಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಪ್ರಾದೇಶಿಕ ಅಸಮತೋಲನ ಸಮಿತಿ, ರಾಜ್ಯದಲ್ಲಿ 2024ರ ಸೆಪ್ಟೆಂಬರ್‌ನಿಂದ ಕೆಲಸ ಆರಂಭಿಸಿದೆ. ನಂಜುಂಡಪ್ಪ ವರದಿಯಲ್ಲಿ 35 ಸೂಚ್ಯಂಕಗಳನ್ನು ಅಧ್ಯಯನ ಮಾಡಿ ವರದಿ ನೀಡಿತ್ತು. ವರದಿಯಂತೆ 31 ಸಾವಿರ ಕೋಟಿ ಹಣ ಖರ್ಚು ಮಾಡಲಾಗಿದೆ. ಅನುದಾನ ಖರ್ಚು ಮಾಡಿದರೆ ಮಾತ್ರ ಅಭಿವೃದ್ಧಿಯಾಗುತ್ತದೆ ಎನ್ನುವುದು ಸರಿಯಲ್ಲ. ಅಲ್ಲಿನ ಜನರ ತಲಾ ಆದಾಯ ಹೆಚ್ಚಾಗಬೇಕು. ಆದರೆ, ಉತ್ತರ ಕರ್ನಾಟಕ ಕಡಿಮೆ ತಲಾ ಆದಾಯ ಹೊಂದಿವೆ. ಪ್ರಾದೇಶಿಕ ಅಸಮತೋಲನ ಹೋಗಲಾಡಿಸಲು ಹೆಚ್ಚು ಹೆಚ್ಚು ಕಾರ್ಖಾನೆಗಳು ಸ್ಥಾಪನೆಯಾಗಿ, ಜನರಿಗೆ ಉದ್ಯೋಗಾವಕಾಶಗಳು ದೊರೆಯುವಂತೆ ಯೋಜನೆಗಳನ್ನು ರೂಪಿಸಬೇಕು ಎಂದು ಅಭಿಪ್ರಾಯಪಟ್ಟರು.



ಮೈಸೂರು ಜಿ.ಪಂ.ಸಭಾಂಗಣದಲ್ಲಿ ಸೋಮವಾರ ನಡೆದ ಮೈಸೂರು ವಿಭಾಗ ಮಟ್ಟದ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯನ್ನು ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಅಧ್ಯಕ್ಷರೂ ಆದ ಆರ್ಥಿಕ ತಜ್ಞ ಪ್ರೊ.ಎಂ.ಗೋವಿಂದರಾವ್ ಉದ್ಘಾಟಿಸಿದರು.

ಸಮಿತಿ ಸದಸ್ಯ ಪ್ರೊ.ಸೂರ್ಯ ನಾರಾಯಣ್ ಮಾತನಾಡಿ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆ ಅಭಿವೃದ್ಧಿ ಹೊಂದಿದ ಜಿಲ್ಲೆಗಳಾದರೂ ಉಡುಪಿ ಜಿಲ್ಲೆಯ ಬ್ರಹ್ಮಾವರದ ಹಲವು ಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಯಗಳಿಲ್ಲ. ಜಿಲ್ಲೆಗಳ ಅಭಿವದ್ಧಿಗೆ ಉತ್ತಮ ಶಿಕ್ಷಣ ಹಾಗೂ ಮೂಲಸೌಲಭ್ಯಗಳನ್ನು ಕಲ್ಪಿಸಬೇಕು ಎಂದರು.

ಸಮಿತಿಯ ನಿರ್ದೇಶಕ ಚಂದ್ರಶೇಖರಯ್ಯ ಮಾತನಾಡಿ, 1956 ರಲ್ಲಿ ಕರ್ನಾಟಕ ಏಕೀಕರಣಗೊಂಡಿತು. ಆಗ ಮೈಸೂರು ಭಾಗ ಅಭಿವೃದ್ಧಿ ಆಗಿತ್ತು. ಆದರೆ ಹೈದರಾಬಾದ್ ಪ್ರಾಂತ್ಯ ಅಭಿವೃದ್ಧಿ ಆಗಿರಲಿಲ್ಲ. 2000ರಲ್ಲಿ ಪ್ರೊ ಡಿ.ಎಂ. ನಂಜುಂಡಪ್ಪ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಅಸಮತೋಲನ ಸಮಿತಿ ರಚನೆಯಾಯಿತು. ಈ ಸಮಿತಿ ಸರ್ಕಾರಕ್ಕೆ ಸಲ್ಲಿಸಿದ್ದ ವರದಿಯಲ್ಲಿ ಅಂದಿನ 175 ತಾಲೂಕುಗಳಲ್ಲಿ 113 ತಾಲೂಕು ಹಿಂದುಳಿದಿರುವುದಾಗಿ ಉಲ್ಲೇಖಿಸಲಾಗಿದೆ. ವರದಿ ಪ್ರಕಾರ ಸರ್ಕಾರ 31 ಸಾವಿರ ಕೋಟಿ ಹಿಂದುಳಿದ ತಾಲೂಕುಗಳ ಅಭಿವದ್ಧಿಗೆ ಬಳಸಬೇಕು. ಉತ್ತರ ಕರ್ನಾಟಕಕ್ಕೆ ಶೇ.60ರಷ್ಟು ಹಾಗೂ ದಕ್ಷಿಣ ಕರ್ನಾಟಕಕ್ಕೆ ಶೇ.40ರಷ್ಟು ಅನುದಾನವನ್ನು ಬಳಸಬೇಕು ಎಂದು ಸೂಚಿಸಿದೆ ಎಂದರು.

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ಸರ್ಕಾರ ಹೊಸ ತಾಲೂಕು ಘೋಷಣೆ ಮಾಡುತ್ತಲೇ ಇದೆ. ಆದರೆ, ಮೂಲ ಸೌಕರ್ಯ ನೀಡುವುದಿಲ್ಲ. ಸರ್ಕಾರದ ಯೋಜನೆಗಳು ಪರಿಣಾಮಕಾರಿಯಾಗಿ ಜನರಿಗೆ ತಲುಪಿದರೆ ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಮಾತನಾಡಿ, ನಾಗರಹೊಳೆ ಅರಣ್ಯ ವ್ಯಾಪ್ತಿಯಲ್ಲಿ ಸಫಾರಿಗೆ ಹೆಚ್ಚು ಆದ್ಯತೆ ಕೊಡಬೇಕು. ಸ್ಥಳೀಯ ಜನರಿಗೆ ಉದ್ಯೋಗ ಸಿಗಬೇಕು. ಕಾರ್ಖಾನೆ ಆರಂಭಕ್ಕೆ ಸರ್ಕಾರ ಸಬ್ಸಿಡಿ ಪ್ಯಾಕೇಜ್ ಕೊಡಬೇಕು ಎಂದರು.

ಉದ್ಯಮಿ ಶಿವಾಜಿರಾವ್ ಮಾತನಾಡಿ, ಮೈಸೂರು ಭಾಗದಲ್ಲಿ ಕೈಗಾರಿಕಾ ಕ್ಲಸ್ಟರ್ ಆರಂಭಿಸಬೇಕು. ಸರ್ಕಾರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು. ಉದ್ಯೋಗ ಅರಸಿ ಜನ ಗುಳೆ ಹೋಗುವುದನ್ನು ತಪ್ಪಿಸಬೇಕು. ಸಂಶೋಧನೆಗೆ ಆದ್ಯತೆ ಕೊಡಬೇಕು ಎಂದು ಕೋರಿದರು.

ಸಭೆಯಲ್ಲಿ ಉದ್ಯಮಿಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಮೈಸೂರು ವಿಭಾಗದ ಜಿಲ್ಲೆಗಳ ಅಧಿಕಾರಿಗಳ ಅಭಿಪ್ರಾಯ, ಸಲಹೆ ಆಲಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ಪ್ರಾದೇಶಿಕ ಸಮತೋಲನ ಸಮಿತಿಯ ಸದಸ್ಯರಾದ ಡಾ.ಎಸ್.ಟಿ. ಬಾಗಲಕೋಟಿ, ಯೋಜನೆ ಇಲಾಖೆಯ ಕಾರ್ಯದರ್ಶಿ,ಸಮಿತಿಯ ಸದಸ್ಯ ಕಾರ್ಯದರ್ಶಿ ಡಾ.ವಿಶಾಲ್ ಆರ್., ಜಿ.ಪಂ. ಸಿಇಓ ಯುಕೇಶ್ ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಹೆಚ್.ಡಿ.ಕೋಟೆ ತಾಲೂಕು ಅಸಮತೋಲನ ನಿವಾರಣೆ ಇನ್ನೂ ಆಗಿಲ್ಲ

ಅಳಲು ತೋಡಿಕೊಂಡ ಶಾಸಕ ಅನಿಲ್ ಚಿಕ್ಕಮಾದು

ಮೈಸೂರು,ಮಾ.24(ಎಂಟಿವೈ)– ಭೌಗೋಳಿಕ ವಿಸ್ತೀರ್ಣ ಮತ್ತು ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಹಂಚಿಕೆ ಮಾಡಿದರೆ ಹಿಂದುಳಿದ ತಾಲೂಕುಗಳ ಅಸಮತೋಲನ ನಿವಾರಣೆಯಾಗುತ್ತದೆ ಎಂದು ಶಾಸಕ ಅನಿಲ್ ಚಿಕ್ಕಮಾದು ಅಭಿಪ್ರಾಯಪಟ್ಟಿದ್ದಾರೆ.

2002ರಲ್ಲಿ ಸಲ್ಲಿಸಲಾದ ನಂಜುಂಡಪ್ಪ ಅಧ್ಯಯನ ವರದಿಯಲ್ಲಿ ಮೈಸೂರು ಭಾಗದ ಚಾಮರಾಜನಗರ ಮತ್ತು ಹೆಚ್.ಡಿ. ಕೋಟೆ ಅತೀ ಹಿಂದುಳಿದ ತಾಲೂಕುಗಳೆಂದು ಗುರುತಿಸಲಾಗಿದೆ. ವರದಿ ಸಲ್ಲಿಕೆಯಾಗಿ ಇಷ್ಟು ವರ್ಷ ಕಳೆದರೂ ಪುನರ್ವಸತಿಗೆ ವಿಶೇಷ ಅನುದಾನ ಬಿಡುಗಡೆಯಾಗಿಲ್ಲ ಇದರಿಂದ ಅಸಮತೋಲನ ನಿವಾರಣೆಗೆ ಹಿನ್ನಡೆಯಾಗಿದೆ ಎಂದರು.

3 ಸಾವಿರ ಹುದ್ದೆ ಖಾಲಿ: ಹೆಚ್.ಡಿ. ಕೋಟೆ ತಾಲೂಕಿನಲ್ಲಿ ವಿವಿಧ ಇಲಾಖೆಗಳಿಂದ 3 ಸಾವಿರ ಹುದ್ದೆ ಖಾಲಿ ಇವೆ. 700 ಶಿಕ್ಷಕರ ಕೊರತೆ ಇದೆ. 300 ಗ್ರಾಮಗಳಿದ್ದು, ಕೇವಲ 80 ಸಾರಿಗೆ ಸಂಸ್ಥೆಯ ಬಸ್‌ಗಳಿವೆ. ನಮ್ಮ ತಾಲೂಕಿಗೆ ಹಳೆಯ ಬಸ್‌ಗಳನ್ನು ನೀಡಲಾಗುತ್ತದೆ ಎಂದು ಆರೋಪಿಸಿದರು.

ಹೆಚ್.ಡಿ.ಕೋಟೆ ದೊಡ್ಡ ತಾಲೂಕಾಗಿದ್ದು, 1650 ಕಿಲೋ ಮೀಟರ್ ವಿಸ್ತೀರ್ಣ ಹೊಂದಿದೆ. ಅದಲ್ಲದೇ ಗಡಿ ತಾಲೂಕಾಗಿದೆ. 400 ಕಿಲೋ ಮೀಟರ್ ವಿಸ್ತೀರ್ಣವಿರುವ ಕೆ.ಆರ್.ನಗರ ತಾಲೂಕಿಗೂ ಕೋಟೆ ತಾಲೂಕಿಗೂ ಒಂದೇ ಪ್ರಮಾಣದ ಅನುದಾನ ನೀಡುವುದು ಎಷ್ಟು ಸರಿ. 1390 ಕಿಲೋ ಮೀಟರ್ ರಸ್ತೆಯಲ್ಲಿ 110 ಕಿಲೋ ಮೀಟರ್ ಮಾತ್ರ ಕಾಂಕ್ರೀಟ್ ರಸ್ತೆ ಇದೆ ಎಂದು ವಿಷಾದಿಸಿದರು.

ಹೆಚ್.ಡಿ.ಕೋಟೆ ತಾಲೂಕಿನಲ್ಲಿ ನಾಲ್ಕು ಜಲಾಶಯಗಳಿದ್ದರೂ 15 ಸಾವಿರ ಎಕರೆ ಪ್ರದೇಶಕ್ಕೆ ನೀರು ಪೂರೈಸಲು ಸಾಧ್ಯವಾಗಿಲ್ಲ. 300 ಕಿಲೋ ಮೀಟರ್ ಕಾಲುವೆ ಅಭಿವೃದ್ಧಿಪಡಿಸಬೇಕಾಗಿದೆ ಇಂದಿಗೂ ಆದಿವಾಸಿ ಜನರು ಗುಡಿಸಲು, ಮಣ್ಣಿನ ಗೋಡೆಯ ಗುಡಿಸಲಲ್ಲಿ ವಾಸ ಮಾಡುತ್ತಿದ್ದಾರೆ. ಅಲ್ಲದೆ, ವಸತಿ ಹೀನರಿಗೆ ಸೂರು ಒದಗಿಸಲು 8 ಸಾವಿರ ಮನೆಗಳ ಅಗತ್ಯವಿದೆ ಎಂದು ತಿಳಿಸಿದರು.

ತಾಲೂಕಿನ ಎಸ್‌ಸಿ ಮತ್ತು ಎಸ್‌ಟಿ ಸಮುದಾಯಕ್ಕೆ ಸೇರಿದ ಶೇ.51ರಷ್ಟು ಜನರಿದ್ದಾರೆ. 2012ರಲ್ಲಿ ಪ್ರೊ.ಮುಜಾಫರ್ ಅಸಾದಿ ಅವರು ಸಲ್ಲಿಸಿದ ವರದಿಯಲ್ಲಿ 4300 ಕುಟುಂಬಗಳಿಗೆ ಹಕ್ಕು ಪತ್ರ ನೀಡಿಲ್ಲ. 12 ಸಾವಿರ ಯುವಕರು ಬೆಂಗಳೂರಿನ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ ತಾಲೂಕಿನಲ್ಲಿ ಯಾವುದೇ ಗಣಿ ಇಲ್ಲ. ಕೈಗಾರಿಕೆಗಳು ಇಲ್ಲದೇ ಸಿಎಸ್‌ಆರ್ ಅನುದಾನ ಸಿಗುವುದಿಲ್ಲ. ಗಡಿ ತಾಲೂಕಿಗೆ 1 ಕೋಟಿ ವಿಶೇಷ ಅನುದಾನ ಕೊಡಲು ಕಾನೂನಿದೆ ಆದರೆ ಅನುದಾನ ಮಾತ್ರಬಂದಿಲ್ಲ ಬಹಳ ಅನ್ಯಾಯವಾಗುತ್ತಿದೆ. ಸರ್ಕಾರದ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸಬೇಕು ಎಂದು ಮನವಿ ಮಾಡಿದರು.

ದಸಂಸ ಕಾರ್ಯಕರ್ತರಿಂದ ಸಚಿವ ಮಹದೇವಪ್ಪ ಮನೆ ಮುತ್ತಿಗೆಗೆ ಯತ್ನ



ಮೈಸೂರಿನ ದಿವಾನ್ಸ್ ರಸ್ತೆಯ ಅಂಬೇಡ್ಕರ್ ಭವನ ಪೂರ್ಣಗೊಳಿಸದ ಸರ್ಕಾರದ ವಿಳಂಬ ಧೋರಣೆ ವಿರೋಧಿಸಿ ದಲಿತ ಪರ ಸಂಘಟನೆ ಕಾರ್ಯಕರ್ತರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಮೈಸೂರಿನ ವಿಜಯನಗರದ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದರು.

ಮೈಸೂರು, ಮಾ.24(ಬಿಎಲ್‌ಯು)– ನಗರದ ದಿವಾನ್ಸ್ ರಸ್ತೆಯಲ್ಲಿರುವ ಅಂಬೇಡ್ಕರ್ ಭವನದ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿ ದಲಿತ ಪರ ಸಂಘಟನೆ ಕಾರ್ಯಕರ್ತರು ಇಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದರು.

ಅಂಬೇಡ್ಕರ್ ಭವನ ನಿರ್ಮಾಣ ಕಾರ್ಯ ಕೈಗೊಂಡು ಹಲವು ವರ್ಷವೇ ಕಳೆದಿದ್ದು, ಈ ತನಕ ಅದನ್ನು ಪೂರ್ಣಗೊಳಿಸುವ ಇಚ್ಛಾಶಕ್ತಿಯನ್ನು ಯಾವುದೇ ಪಕ್ಷದ ಸರ್ಕಾರ ಹೊಂದಿಲ್ಲ. ಸರ್ಕಾರದ ಈ ಧೋರಣೆಯಿಂದ ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದಂತಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಸಚಿವ ಡಾ.ಮಹದೇವಪ್ಪ ಅವರ ವಿಜಯನಗರದ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ ಸಂದರ್ಭದಲ್ಲಿ ಪೊಲೀಸರು ಅವರ ಮನೆ ಬಳಿ ಬ್ಯಾರಿಕೇಡ್ ಹಾಕಿ ಪ್ರತಿಭಟನಾಕಾರರು ಮುಂದೆ ಸಾಗಲು ಬಿಡಲಿಲ್ಲ. ಈ ಸಂದರ್ಭದಲ್ಲಿ ಪೊಲೀಸರು, ಪ್ರತಿಭಟನಾಕಾರರನ್ನು ವಶಕ್ಕೆ ಪಡೆದರು.

ಪ್ರತಿಭಟನೆಯಲ್ಲಿ ದಲಿತ ಸಂಘಟನೆ ಮುಖಂಡರಾದ ಬೆಟ್ಟಯ್ಯಕೋಟೆ, ಶಂಭುಲಿಂಗಸ್ವಾಮಿ, ಚೋರನಹಳ್ಳಿ ಶಿವಣ್ಣ ಸೇರಿದಂತೆ ಹಲವರು ಭಾಗಿಯಾಗಿದ್ದರು.

ನಾಳೆ 'ಅಗಸ್ತ್ಯ ದರ್ಶನ' ಪುಸ್ತಕ ಬಿಡುಗಡೆ

ಮೈಸೂರು,ಮಾ.24(ಎಂಟಿವೈ)– ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸಭಾಂಗಣದಲ್ಲಿ ಮಾ.26ರಂದು ಸಂಜೆ 6.15ಕ್ಕೆ 'ಅಗಸ್ತ್ಯ ದರ್ಶನ' ಪುಸ್ತಕ ಬಿಡುಗಡೆ ಸಮಾರಂಭ ಆಯೋಜಿಸಲಾಗಿದೆ ಎಂದು ಹಿರಿಯ ವಕೀಲ ಓ.ಶಾಮ ಭಟ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಬ್ರಹ್ಮರ್ಷಿ ಅಗಸ್ತ್ಯ ಲೋಪಾಮುದ್ರಾ ಜ್ಞಾನಪೀಠ ಹಾಗೂ ಅಯೋಧ್ಯಾ ಪಬ್ಲಿಕೇಷನ್ಸ್ ವತಿಯಿಂದ ಆಯೋಜಿಸಿರುವ ಪುಸ್ತಕ ಬಿಡುಗಡೆ ಕಾರ್ಯಕ್ರಮದ ಸಾನಿಧ್ಯವನ್ನು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಸ್ವಾಮೀಜಿ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಹಾಗೂ ಮಾತಾ ಅಮೃತಾನಂದಮಯಿ ಮಠದ ಶ್ರೀಬ್ರಹ್ಮಚಾರಿ ಪ್ರಸಾದಾಮೃತ ಚೈತನ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ ಅವರು ಪಾಲ್ಗೊಳ್ಳಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಂಗಳೂರಿನ ಮಿಥಿಕ್ ಸೊಸೈಟಿ ಅಧ್ಯಕ್ಷ ವಿ.ನಾಗರಾಜ್ ವಹಿಸಲಿದ್ದಾರೆ ಎಂದು ತಿಳಿಸಿದರು.

ಭಾರತೀಯ ಜ್ಞಾನ ಪರಂಪರೆಗೆ ಅಪಾರ ಕೊಡುಗೆಯನ್ನು ಋಷಿ ಅಗಸ್ತ್ಯರು ನೀಡಿದ್ದಾರೆ. ದಕ್ಷಿಣ ಭಾರತದ ತಳ ಮತ್ತು ಮೂಲ ಸಂಸ್ಕೃತಿಗೆ ಇವರು ವಿಶೇಷ ಆಯಾಮ ನೀಡಿದ್ದಾರೆ. ಭಾರತೀಯ ಬಹುತ್ವದ ಚಿಂತನೆ, ಬಹುತ್ವದ ಸಮಾಜದಲ್ಲಿ ಏಕತೆ ನಿರ್ಮಿಸುವ ನಿಟ್ಟಿನಲ್ಲಿ ಅಗಸ್ತ್ಯ ಋಷಿಗಳು ತಳಹದಿ ಹಾಕಿಕೊಟ್ಟಿದ್ದಾರೆ. ಬಹುಭಾಷಾ ಪಂಡಿತರು, ಶ್ರೇಷ್ಠ ವಿಜ್ಞಾನಿ, ಸಂಗೀತ ತಜ್ಞರೂ ಹಾಗೂ ಸಿದ್ಧ ಔಷಧಿ ವ್ಯವಸ್ಥೆಯ ಪಿತಾಮಹರೂ ಆಗಿರುವ ಅಗಸ್ತ್ಯ ಋಷಿಗಳ ಕುರಿತು ಪುಸ್ತಕ ಬರೆಯಲಾಗಿದೆ. ಕನ್ನಡದಲ್ಲಿ ಅಗಸ್ತ್ಯ ದರ್ಶನ ಹಾಗೂ ಇಂಗ್ಲೀಷ್‌ನಲ್ಲಿ 'ಅಗಸ್ತ್ಯ– ದಿಯೂನಿಫರ್' ಇವುಗಳ ಮುಖ್ಯ ಬರಹಗಾರರು ಡಾ.ಸುಧಾ ಹಾಗೂ ಹಿರಿಯ ವಕೀಲರಾದ ಓ.ಶಾಮ ಭಟ್ ಅವರು ಸಹ ಲೇಖಕರಾಗಿದ್ದಾರೆ ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಹಿರಿಯ ವಕೀಲ ಓ.ಶಾಮ ಭಟ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಕೃತಿ ಕರ್ತೃ ಡಾ. ಸುಧಾ, ಹಿರಿಯ ವಕೀಲ ಹ.ಮ.ಭಾಸ್ಕರ್, ಪುಸ್ತಕ ಪ್ರಾಧಿಕಾರದ ನಂದೀಶ್ ಹಂಚೆ, ಸ್ವಾಮಿ ಇದ್ದರು.

ಜೆ.ಪಿ. ನಡ್ಡಾ ವಿರುದ್ಧ ಹಕ್ಕುಚ್ಯುತಿ ಮಂಡನೆ ಮಾಡುತ್ತೇನೆ: ಡಿಕೆಶಿ

ಬೆಂಗಳೂರು, ಮಾ.24– ನನ್ನ ಹೆಸರನ್ನು ಎಲ್ಲಾ ಕಡೆ ತೆಗೆದುಕೊಂಡರೆ ತೆಗೆದುಕೊಳ್ಳಲಿ. ನಾನು ಜೆ.ಪಿ ನಡ್ಡಾ ವಿರುದ್ಧ ಹಕ್ಕುಚ್ಯುತಿ ಮಂಡನೆ ಮಾಡುತ್ತೇನೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿದ್ದಾರೆ. ಈ ಕುರಿತು ಮಾತನಾಡಿದ ಅವರು, ಜೆ.ಪಿ.ನಡ್ಡಾಗಿಂತ ನಾನು ಸೆನ್ಸಿಬಲ್ ರಾಜಕಾರಣಿ. ನಾನು 36 ವರ್ಷ ಶಾಸಕ. ನಮ್ಮದು ರಾಷ್ಟ್ರೀಯ ಪಕ್ಷ. ಸಂವಿಧಾನ ಏನು? ಸಂವಿಧಾನ ಏನು ಹೇಳುತ್ತದೆ ಎಂಬ ಪರಿಜ್ಞಾನ ನನಗಿದೆ. ಬಿಜೆಪಿಯವರು ದಾರಿ ತಪ್ಪಿಸುತ್ತಿದ್ದಾರೆ. ಅವರ ಗ್ರಾಫ್ ಇಳಿಯುತ್ತಿದೆ ಎಂದರು.

ಸಂವಿಧಾನ ಬದಲಾವಣೆ ಮಾಡುತ್ತೇವೆ ಎಂದು ನಾನು ಹೇಳಿಲ್ಲ ಇದು ರಾಜಕೀಯ ಪಿತೂರಿ. ಬಿಜೆಪಿ ಅವರಿಗೆ ರಾಜಕೀಯ ಅಷ್ಟೇ. ಮುಸ್ಲಿಂ ಕೋಟಾ ಬಗ್ಗೆ ನ್ಯಾಯಾಲಯ ತೀರ್ಪುಗಳ ಬಗ್ಗೆ ಹೇಳಿದ್ದೇನೆ. ಸಂವಿಧಾನ ಬದಲಾವಣೆ ಬಗ್ಗೆ ಎಲ್ಲಿ ಮಾತನಾಡಿದ್ದೇನೆ ಎಂದು ಪ್ರಶ್ನಿಸಿದರು.

ಪುಸ್ತಕಗಳ ಓದು ಭವಿಷ್ಯದ ಕನಸು ಕಟ್ಟಿಕೊಡುತ್ತದೆ

ವೈದ್ಯ ಡಾ.ರಘುನಂದನ್ ಅಭಿಪ್ರಾಯ



ಹೂಟಗಳ್ಳಿಯ ವಿ ಕೇರ್ ಸಂಸ್ಥೆ ಸಭಾಂಗಣದಲ್ಲಿ ನಡೆದ ತಿಂಗಳ ಪುಸ್ತಕ ಓದು ಕಾರ್ಯಕ್ರಮ

ಮೈಸೂರು, ಮಾ.24(ಬಿಎಲ್‌ಯು)– ಪುಸ್ತಕಗಳ ಓದು ನಮ್ಮ ದೃಷ್ಟಿಕೋನವನ್ನು ಹಿಗ್ಗಿಸುವುದರ ಜೊತೆಗೆ ಭವಿಷ್ಯದ ಬಗ್ಗೆ ಕನಸುಗಳನ್ನು ಕಟ್ಟಿಕೊಡುತ್ತದೆ ಎಂದು ಲೇಖಕರೂ ಆದ ಖ್ಯಾತ ವೈದ್ಯ ಡಾ.ರಘುನಂದನ್ ಅಭಿಪ್ರಾಯಪಟ್ಟರು.

ನಗರದ ಹೂಟಗಳ್ಳಿಯ ವಿ ಕೇರ್ ಸಂಸ್ಥೆ ಸಭಾಂಗಣದಲ್ಲಿ ಭಾನುವಾರ ನಡೆದ ತಿಂಗಳ ಪುಸ್ತಕ ಓದು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರಾಯಶಃ ನಾನು 6ನೇ ತರಗಿತಿಯಲ್ಲಿ ಗ್ರಂಥಾಲಯಕ್ಕೆ ಹೋಗದಿದ್ದರೆ ಓದಿನ ಬಗ್ಗೆ ನನಗೆ ಅಷ್ಟಾಗಿ ಒಲವು ಮೂಡುತ್ತಿರಲಿಲ್ಲ. ವೈದ್ಯನೂ ಆಗುತ್ತಿರಲಿಲ್ಲ. ಈ ಹಿನ್ನೆಲೆ ಪುಸ್ತಕಗಳ ಓದು ಎಷ್ಟರ ಮಟ್ಟಿಗೆ ಮಹತ್ವ ಪಡೆಯುತ್ತದೆ ಎಂದು ನನಗಷ್ಟೆ ಅಲ್ಲದೆ ಬಹಳಷ್ಟು ಜನರಿಗೆ ಮನದಟ್ಟು ಆಗಿದೆ ಈ ಹಿನ್ನೆಲೆ ಪ್ರತಿಯೊಬ್ಬರು ಪುಸ್ತಕಗಳನ್ನು ಓದಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಮಾತನಾಡಿದ ಸಾಮಾಜಿಕ ಚಿಂತಕ ರವಿ ಬಳೆ ಅವರು, ಅಕ್ಷರಭ್ಯಾಸವಿರುವ ಯಾರಾದರೂ ಕಥೆಗಳನ್ನು ತಮ್ಮ ಮನದಲ್ಲಿಯೇ ಓದಿಕೊಳ್ಳಬಹುದು. ಆದರೆ ಶ್ರೋತೃಗಳನ್ನು ಮಾತ್ರ ಮುಗ್ಧರನ್ನಾಗಿಸುವಂತೆ ವಾಚಿಸುವುದೇ ಒಂದು ಕಲೆ ಎಂದು ಹೇಳಿದರು.

ಈ ತಿಂಗಳ ಪುಸ್ತಕ ಓದು ಕಾರ್ಯಕ್ರಮದಲ್ಲಿ ಖ್ಯಾತ ಲೇಖಕಿ ಡಾ.ಅನುಪಮಾ ನಿರಂಜನ್ ಅವರ ದಿನಕ್ಕೊಂದು ಕಥೆ ಮಕ್ಕಳ ಕಥಾ ಮಾಲಿಕೆಯಿಂದ ಆಯ್ದ ಕಥೆಗಳನ್ನು ಸಂಜನಾ, ಉಜ್ವಲಾ, ಕಾನೂನು ವಿದ್ಯಾರ್ಥಿನಿ ಮಹದೇವಮ್ಮ, ಸೂರ್ಯ ವಾಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಒಡನಾಡಿ ಸಂಸ್ಥೆ ನಿರ್ದೇಶಕ ಸ್ಟ್ಯಾನ್ಲಿ ಅವರು, ಪ್ರಗತಿಶೀಲ, ಪ್ರಗತಿಪರ ಧೋರಣೆ, ಬಂಡಾಯ ಮನೋಭಾವ, ನವ್ಯ ಆತ್ಮಶೋಧನೆ ಮತ್ತು ಕಲಾತ್ಮಕತೆ ಸೇರಿದಂತೆ ವಿವಿಧ ಸಾಹಿತ್ಯ ಮನೋಧರ್ಮಗಳು ಡಾ.ಅನುಪಮ ನಿರಂಜನ್ ಅವರ ಕಾದಂಬರಿಗಳಲ್ಲಿ ಮೇಳೈಸಿದೆ ಎಂದು ಹೇಳಿದರು. ಸಂಸ್ಥೆಯ ಸಂಸ್ಥಾಪಕಿ ಡಾ.ಕುಮುದಿನಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂವಿಧಾನ ತಿದ್ದುಪಡಿಯ ಅಗತ್ಯವೂ ಇಲ್ಲ, ಅನಿವಾರ್ಯತೆಯೂ ಇಲ್ಲ



ನವದೆಹಲಿ, ಮಾ.24– ಅಲ್ಪ ಸಂಖ್ಯಾತ ಸಮುದಾಯಗಳಿಗೆ ಸರ್ಕಾರಿ ಗುತ್ತಿಗೆಯಲ್ಲಿ ಮೀಸಲಾತಿ ನೀಡಲು ಸಂವಿಧಾನದ ತಿದ್ದುಪಡಿಯ ಅಗತ್ಯವೂ ಇಲ್ಲ. ಬದಲಾವಣೆಯ ಅನಿವಾರ್ಯತೆಯೂ ಇಲ್ಲ. ಸಂವಿಧಾನದ ಚೌಕಟ್ಟಿನಲ್ಲಿಯೇ ಮೀಸಲಾತಿ ನೀಡಿರುವುದು ಎಂದು ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಸ್ಪಷ್ಟನೆ ನೀಡಿದರು.

ದೆಹಲಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಂವಿಧಾನವನ್ನು ತಿದ್ದುಪಡಿ ತರಲು ಅವಕಾಶವಿದೆಯೇ ಹೊರತು ಬದಲಾವಣೆ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಬದಲಾವಣೆ ಮಾಡಲು ಬಿಡುವುದೂ ಇಲ್ಲ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ತಿದ್ದುಪಡಿಯ ಬದಲು ಬದಲಾವಣೆ ಎಂದು ಹೇಳಿರಬಹುದು ಎಂದರು.

ಸಂವಿಧಾನದ ಆಶಯದಂತೆಯೇ ರಾಜ್ಯದ ಕಾಂಗ್ರೆಸ್ ಸರ್ಕಾರ ಅಲ್ಪ ಸಂಖ್ಯಾತ ಸಮುದಾಯಗಳಿಗೆ ಸರ್ಕಾರಿ ಗುತ್ತಿಗೆಯಲ್ಲಿ ಮೀಸಲಾತಿ ನೀಡಿದೆ. ಸಂವಿಧಾನ ಅನುಚ್ಛೇದ 14, 15(4), 16(4) ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡಲು ಅವಕಾಶವಿದೆ ಎಂದು ಹೇಳಿದರು. ಮುಸ್ಲಿಂ ಸಮುದಾಯಗಳಿಗೆ ಮೀಸಲಾತಿ ಕೇವಲ ನಮ್ಮ ರಾಜ್ಯದಲ್ಲಿ ಮಾತ್ರವಿಲ್ಲ. ಗುಜರಾತ್ ನಲ್ಲೂ ಕೂಡ ಮೀಸಲಾತಿ ನೀಡಿದೆ. ಕೇಂದ್ರ ಸರ್ಕಾರದಲ್ಲಿಯೂ ಕೂಡ 4 ಪಂಗಡಗಳನ್ನು ಹೊರತುಪಡಿಸಿ ಉಳಿದವರಿಗೆ ಮೀಸಲಾತಿ ನೀಡಿದೆ. ಗುಜರಾತ್‌ನಲ್ಲಿ 101 ಸಮುದಾಯಗಳಲ್ಲಿ 23 ಮುಸ್ಲಿಂ ಒಳ ಪಂಗಡಗಳಿಗೆ ಮೀಸಲಾತಿ ನೀಡಲಾಗಿದೆ. ಮುಸ್ಲಿಂ ಸಮುದಾಯಗಳು ಹಿಂದುಳಿದಿವೆ ಎಂದು ಕೆಲವು ಆಯೋಗಗಳು ಕೂಡ ವರದಿ ನೀಡಿದೆ ಎಂದು ಹೇಳಿದರು.

ಸಂಸದರ ವೇತನ ಹೆಚ್ಚಳ

ಏಪ್ರಿಲ್ 1, 2023 ರಿಂದಲೇ ಪೂರ್ವಾನ್ವಯ

ನವದೆಹಲಿ, ಮಾ.24– ಇತ್ತ ರಾಜ್ಯದಲ್ಲಿ ಮುಖ್ಯಮಂತ್ರಿ, ಸಚಿವರು, ಶಾಸಕರ ವೇತನ ಹಾಗೂ ಭತ್ಯೆಯಲ್ಲಿ ಶೇ. 100 ಹೆಚ್ಚಳ ಮಾಡಿದ ಬೆನ್ನಲ್ಲೇ ಅತ್ತ ಸಂಸದರ ವೇತನವೂ ಭಾರಿ ಹೆಚ್ಚಳವಾಗಿದ್ದು, ಏಪ್ರಿಲ್ 1, 2023 ರಿಂದ ಪೂರ್ವಾನ್ವಯವಾಗುಂತೆ ಜಾರಿಗೆ ಬರುವಂತೆ ಕೇಂದ್ರ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.

ಸಂಸದೀಯ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಅಧಿಸೂಚನೆಯಲ್ಲಿ, ಹಾಲಿ ಸಂಸದರ ವೇತನವನ್ನು ಶೇ.24 ರಷ್ಟು ಹೆಚ್ಚಿಸಲಾಗಿದೆ. ಅಲ್ಲದೆ ದಿನಭತ್ಯೆ ಮತ್ತು ಐದು ವರ್ಷಗಳಿಗಿಂತ ಹೆಚ್ಚಿನ ಸೇವೆ ಸಲ್ಲಿಸಿದ ಸಂಸದರಿಗೆ ಪ್ರತಿ ವರ್ಷದ ಪಿಂಚಣಿ ಮತ್ತು ಹೆಚ್ಚುವರಿ ಪಿಂಚಣಿಯನ್ನು ಹೆಚ್ಚಿಸಲಾಗಿದೆ.

ಸಂಸತ್ತಿನ ಸದಸ್ಯರು ಈಗ ತಿಂಗಳಿಗೆ 1 ಲಕ್ಷ ರೂ. ಪಡೆಯುತ್ತಿದ್ದು, ಇನ್ನು ಮುಂದೆ ತಿಂಗಳಿಗೆ 1.24 ಲಕ್ಷ ರೂ. ವೇತನ ಪಡೆಯಲಿದ್ದಾರೆ. ಅವರು ಹಿಂದೆ ಪಡೆಯುತ್ತಿದ್ದ ದಿನಭತ್ಯೆಯನ್ನು ಸಹ 2,000 ರೂ.ಗಳಿಂದ 2,500 ರೂ.ಗಳಿಗೆ ಹೆಚ್ಚಿಸಲಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಮಾಜಿ ಸಂಸತ್ ಸದಸ್ಯರಿಗೆ ಪಿಂಚಣಿಯನ್ನು ತಿಂಗಳಿಗೆ 25,000 ರೂ.ಗಳಿಂದ 31,000 ರೂ.ಗಳಿಗೆ ಹೆಚ್ಚಿಸಲಾಗಿದೆ. ಐದು ವರ್ಷಗಳಿಗಿಂತ ಹೆಚ್ಚಿನ ಸೇವೆ ಸಲ್ಲಿಸಿದ ಪ್ರತಿ ವರ್ಷಕ್ಕೆ ಹೆಚ್ಚುವರಿ ಪಿಂಚಣಿಯನ್ನು ತಿಂಗಳಿಗೆ 2,000 ರೂ.ಗಳಿಂದ 2,500 ರೂ.ಗಳಿಗೆ ಹೆಚ್ಚಿಸಲಾಗಿದೆ.

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821-2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ https://kppp.karnataka.gov.in ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2024-25/ IND1337	ಒಕ್ಕೂಟಕ್ಕೆ ಅಗತ್ಯವಿರುವ ರೋಜಾ ಈ ಝೆಡ್ ರೀಡರ್‌ನ್ನು (Rosa Ez Reader) ಸರಬರಾಜು ಮಾಡಿ ಅಳವಡಿಸುವ ಬಗ್ಗೆ.	28.03.2025 ಮಧ್ಯಾಹ್ನ 12.00 ಗಂಟೆಯವರೆಗೆ
2	KMF/2024-25/ IND1338	ಒಕ್ಕೂಟಕ್ಕೆ ಅಗತ್ಯವಿರುವ ಮುಸುಕಿನ ಜೋಳವನ್ನು ಖರೀದಿಸುವ ಬಗ್ಗೆ.	01.04.2025 ಮಧ್ಯಾಹ್ನ 12.00 ಗಂಟೆಯವರೆಗೆ
3	KMF/2024-25/ SE3330	ಒಕ್ಕೂಟದ ವ್ಯಾಪ್ತಿಯಲ್ಲಿನ ಹಾಲು ಉತ್ಪಾದಕರ ಮಿಶ್ರತಳಿ ಹಸುಗಳು/ಹಸುಗಳು/ಸ್ಥಳೀಯ ಹಸುಗಳು/ಎಮ್ಮೆಗಳಿಗೆ (ಅಂದಾಜು 30000 ಜಾನುವಾರುಗಳಿಗೆ) ಗುಂಪು ವಿಮಾ ಯೋಜನೆಯಡಿ 3 ವರ್ಷದ ಅವಧಿಗೆ ವಿಮೆ ಮಾಡಿಸುವ ಬಗ್ಗೆ.	03.04.2025 ಸಂಜೆ 5.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗವನ್ನು (6366430821,9482231739) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕರ ತಿಳುವಳಿಕೆಗೆ

ನಮ್ಮ ಕಕ್ಷಿದಾರರು ಈ ಕೆಳಗೆ 'ಎ' ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ಶ್ರೀಮತಿ ನಾಗಲಕ್ಷ್ಮಿ ರವರಿಂದ, 'ಬಿ' ಮತ್ತು 'ಸಿ' ಷೆಡ್ಯೂಲ್ ಸ್ವತ್ತುಗಳನ್ನು ಅದರ ಮಾಲೀಕರಾದ ಶ್ರೀಮತಿ ಟಿ.ಎನ್. ವನಿತಾ ಎಂಬುವವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಸ್ವತ್ತುಗಳ ಕ್ರಯಕ್ಕೆ ಸಂಬಂಧಪಟ್ಟಂತೆ ಯಾವುದೇ ವ್ಯಕ್ತಿಯು ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ ಹೊಂದಿದ್ದಲ್ಲಿ ಅಥವಾ ಈ ಕುರಿತು ಯಾರಿಗಾದರೂ ಯಾವುದೇ ರೀತಿಯ ತಕರಾರು ಇದ್ದಲ್ಲಿ ಸೂಕ್ತ ದಾಖಲೆಗಳೊಡನೆ ಈ ತಿಳುವಳಿಕೆಯು ಪ್ರಕಟಗೊಂಡ ಏಳು ದಿನಗಳ ಒಳಗೆ ನಮ್ಮ ಕಛೇರಿಯಲ್ಲಿ ಸಲ್ಲಿಸತಕ್ಕದ್ದು. ಆನಂತರ ಬಂದಂತಹ ಯಾವುದೇ ತಕರಾರುಗಳನ್ನು ಪರಿಗಣಿಸುವುದಿಲ್ಲ.

'ಎ' ಷೆಡ್ಯೂಲ್

ಮೈಸೂರು ನಗರ, ಕೆ.ಆರ್. ಮೊಹಲ್ಲಾ, ಬಿ.ಬಿ. ಲಾಯದಲ್ಲಿರುವ ಪೂರ್ವ ಪಶ್ಚಿಮ 15.24 ಮೀ, ದಕ್ಷಿಣೋತ್ತರ 12.19 ಮೀ ಒಟ್ಟು 185.80 ಚ.ಮೀ, ನಿವೇಶನ ಮತ್ತು ನಿವೇಶನದಲ್ಲಿರುವ 148.61 ಚದರಡಿ ಆರ್.ಸಿ.ಸಿ. ಕಟ್ಟಡ ಸಂಖ್ಯೆ. ನಂ. 1375/2, ಕೆ–11 ವುಳ್ಳ ಸ್ವತ್ತು ಸದರಿ ಸ್ವತ್ತಿಗೆ ಚಕ್ಕುಬಂಧಿ: ಪೂರ್ವಕ್ಕೆ: ಕನ್ಸರ್‌ವೆನ್ಸಿ ಗಲ್ಲಿ ; ಪಶ್ಚಿಮಕ್ಕೆ: ಬಿ.ಬಿ. ಲಾಯ ರಸ್ತೆ ; ಉತ್ತರಕ್ಕೆ: ಮನೆ ನಂ. 1375/1 ; ದಕ್ಷಿಣಕ್ಕೆ: ಕನ್ಸರ್‌ವೆನ್ಸಿ ಗಲ್ಲಿ ಮತ್ತು ಮನೆ ನಂ. 1375/2ಎ,

'ಬಿ' ಷೆಡ್ಯೂಲ್

ಮೈಸೂರು ನಗರ, ಕೆ.ಆರ್.ಮೊಹಲ್ಲಾ, ಬಿ.ಬಿ. ಲಾಯದಲ್ಲಿರುವ ಪೂರ್ವ ಪಶ್ಚಿಮ 15.24 ಮೀ, ದಕ್ಷಿಣೋತ್ತರ 12.19 ಮೀ ಒಟ್ಟು 185.80 ಚ.ಮೀ, ನಿವೇಶನ ಮತ್ತು ನಿವೇಶನದಲ್ಲಿರುವ ಮೊದಲನೇ ಅಂತಸ್ತಿನ 60.38 ಚದರಡಿ ಆರ್.ಸಿ.ಸಿ. ಸ್ವತ್ತಿನ ಸಂಖ್ಯೆ. ನಂ.1375/2ಬಿ, ಕೆ–11/ಬಿ ವುಳ್ಳ ಸ್ವತ್ತು.

'ಸಿ' ಷೆಡ್ಯೂಲ್

ಮೈಸೂರು ನಗರ, ಕೆ.ಆರ್.ಮೊಹಲ್ಲಾ, ಬಿ.ಬಿ. ಲಾಯದಲ್ಲಿರುವ ಪೂರ್ವ ಪಶ್ಚಿಮ 15.24 ಮೀ, ದಕ್ಷಿಣೋತ್ತರ 2.4 ಮೀ ಒಟ್ಟು 37.16 ಚ.ಮೀ, ನಿವೇಶನ ಮತ್ತು ನಿವೇಶನದಲ್ಲಿರುವ 8.36 ಚದರಡಿಯ ಕೆಳ ಅಂತಸ್ತು ಮತ್ತು 8.36 ಚದರಡಿ ವಿಸ್ತೀರ್ಣದ ಮೊದಲನೇ ಮಹಡಿಯುಳ್ಳ ಆರ್.ಸಿ.ಸಿ. ಸ್ವತ್ತಿನ ಸಂಖ್ಯೆ. ನಂ. 1375/2ಎ, ಕೆ–11/ಎ ವುಳ್ಳ ಸ್ವತ್ತು ಸದರಿ ಸ್ವತ್ತಿಗೆ ಚಕ್ಕುಬಂಧಿ:
ಪೂರ್ವಕ್ಕೆ: ಕನ್ಸರ್‌ವೆನ್ಸಿ ಗಲ್ಲಿ ; ಪಶ್ಚಿಮಕ್ಕೆ: ಬಿ.ಬಿ. ಲಾಯ ರಸ್ತೆ ; ಉತ್ತರಕ್ಕೆ: ಮನೆ ನಂ. 1375/2 ; ದಕ್ಷಿಣಕ್ಕೆ: ವಾಣಿವಿಲಾಸ ವೆಲ್‌ಫೇರ್ ಸೆಂಟರ್.

ಸಹಿ/– ಕೆ.ಸಿ. ರವೀಂದ್ರ, ಬಿ.ಎಸ್ಸಿ, ಎಲ್‌ಎಲ್‌ಬಿ., ವಕೀಲರು,
Roll No. KAR 180/1979, ನಂ. 21, ಗಗನಚುಂಬಿ ಜೋಡಿ ರಸ್ತೆ, ಕುವೆಂಪುನಗರ 'ಐ' ಬ್ಲಾಕ್, ಮೈಸೂರು–23
Mob: 9449621105
Date: 21-03-2025

E-mail: itstaff_ulb_malavalli@yahoo.co.in Ph:08231-242073

ಪುರಸಭಾ ಕಾರ್ಯಾಲಯ, ಮಳವಳ್ಳಿ, ಮಂಡ್ಯ ಜಿಲ್ಲೆ – 571430

ಸಂಖ್ಯೆ: ಪುಮ/ಕಂ.ಶಾ/ಹರಾಜು/ಸಿ.ಆರ್/01/2024–25 ದಿನಾಂಕ: 21–03–2025

ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ,

ಮಳವಳ್ಳಿ ಪುರಸಭೆಗೆ ಸೇರಿದ ಈ ಕೆಳಕಂಡಂತೆ ಸಂತೆ ಮೈದಾನದಲ್ಲಿ ಪ್ರತಿ ಶುಕ್ರವಾರ ನಡೆಯುವ ವಾರದ ಸಂತೆ ದಿನ ಸುಂಕ ವಸೂಲಿ ಮಾಡುವ ಹಕ್ಕನ್ನು 2025–26 ನೇ ಸಾಲಿನ ಅವಧಿಗೆ (ದಿನಾಂಕ: 01–04–2025 ರಿಂದ 31/03/2026 ರವರೆಗೆ) ಪಡೆದುಕೊಳ್ಳಲು ದಿನಾಂಕ: 28–03–2025 ರ ಶುಕ್ರವಾರ ಬೆಳಿಗ್ಗೆ 11–00 ಗಂಟೆಗೆ ಮಳವಳ್ಳಿ ಪುರಸಭಾ ಕಛೇರಿ ಆವರಣದಲ್ಲಿ ಬಹಿರಂಗ ಹರಾಜು ಮೂಲಕ ವಿಲೇಗೊಳಿಸಲಾಗುವುದು. ಆಸಕ್ತಿಯುಳ್ಳವರು ದಿನಾಂಕ: 27–03–2025 ರಂದು ಸಂಜೆ 05–00 ಗಂಟೆ ಒಳಗಾಗಿ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಡಿ.ಡಿ. ರೂಪದಲ್ಲಿ ಠೇವಣಿ ಮೊತ್ತವನ್ನು ಕಛೇರಿಗೆ ಸಲ್ಲಿಸಿ ನೋಂದಾಯಿಸಿಕೊಂಡು ಹರಾಜಿನಲ್ಲಿ ಭಾಗವಹಿಸಿ ಹಕ್ಕನ್ನು ಪಡೆದುಕೊಳ್ಳಬಹುದಾಗಿರುತ್ತದೆ.

ಹೆಚ್ಚಿನ ವಿವರ ಹಾಗೂ ಇತರೆ ಷರತ್ತುಗಳನ್ನು ಕಛೇರಿ ಕೆಲಸದ ವೇಳೆಯಲ್ಲಿ ಕಂದಾಯ ಶಾಖೆಯಲ್ಲಿ ಹಾಗೂ www.malavallitown.mrc.gov.in ವೆಬ್ ಸೈಟ್ ನಲ್ಲಿ ತಿಳಿದುಕೊಳ್ಳತಕ್ಕದ್ದು.

ಬಾಬ್ತಿನ ವಿವರ

ಕ್ರ.ಸಂ	ಹರಾಜಿನ ವಿವರ	ಠೇವಣಿ ಮೊತ್ತ	ಸರ್ಕಾರಿ ಸವಾಲ್	ಅವಧಿ
1	ಮಳವಳ್ಳಿ ಪುರಸಭೆ ವ್ಯಾಪ್ತಿಯ ಪುರಸಭೆ ಕಛೇರಿಯ ಪಕ್ಕದಲ್ಲಿರುವ ಆವರಣದಲ್ಲಿ ಪ್ರತಿ ಶುಕ್ರವಾರ ನಡೆಯುವ ಸಂತೆ ಅಂಗಡಿ ಮುಂಗಟ್ಟು ಸುಂಕ ವಸೂಲಾತಿ ಹಕ್ಕು ಮತ್ತು ಮಳವಳ್ಳಿ ಪುರಸಭೆಯ ವ್ಯಾಪ್ತಿಯಲ್ಲಿರುವ ಸಾರ್ವ ಜನಿಕ ಸ್ಥಳ ಹಾಗೂ ರಸ್ತೆ ಬದಿಯಲ್ಲಿ ಸಣ್ಣ ಪುಟ್ಟ ವ್ಯಾಪಾರಸ್ಥರಿಂದ ದಿನವಹಿ ನೆಲಸುಂಕ ವಸೂಲಿ ಮಾಡುವ ಹಕ್ಕು.	2,00,000/–	20,00,000/–	01–04–2025 ರಿಂದ 31–03–2026

ಸಂತೆ ಅಂಗಡಿ ಮುಂಗಟ್ಟು ಪರಿಷ್ಕೃತ ಸುಂಕದ ದರ

ಕ್ರ.ಸಂ	ವಿವರ	ವಸೂಲಿ ದರ	
1	ದಿನಸಿ ಅಂಗಡಿ, ಸಾಂಬಾರ ಪದಾರ್ಥ, ಕಡ್ಲೆ ಕಾಯಿ, ಕಡ್ಲೆ ಪುರಿ	30/–	
2	ತೆಂಗಿನ ಕಾಯಿ ವ್ಯಾಪಾರ	ಸಗಟು 45/–	ಚಿಲ್ಲರೆ 30/–
3	ಹಳೆ ಬಟ್ಟೆ ಮತ್ತು ಹೊಸ ಬಟ್ಟೆ ಅಂಗಡಿ, ಚಪ್ಪಲಿ ಅಂಗಡಿ	30/–	
4	ಬೆಲ್ಲದ ವ್ಯಾಪಾರ, ಈರುಳ್ಳಿ, ಪ್ಲಾಸ್ಟಿಕ್ ಅಂಗಡಿ ಮತ್ತು ಹಣ್ಣಿನ ಅಂಗಡಿ, ತಂಪಾದ ಪಾನೀಯಗಳು, ಐಸ್ ಕ್ರೀಮ್ ಅಂಗಡಿ	30/–	
5	ಬಿದಿರಿನಿಂದ ತಯಾರಾದ ಕುಕ್ಕೆಗಳು, ಮಡಿಕೆ, ಚಾಪೆ, ಮರದ ಹಲಗೆಗಳು, ಹಗ್ಗ ಮೂಗುದಾರ ಪ್ರತಿ ಅಂಗಡಿಗೆ.	30/–	
6	ತರಕಾರಿ ಅಂಗಡಿ, ಹೂವಿನ ಅಂಗಡಿ, ವಿಳ್ಯದೆಲೆ, ಸೊಪ್ಪಿನ ಅಂಗಡಿ, ನಿಂಬೇಹಣ್ಣು ಅಂಗಡಿ	30/–	
7	ಕೋಳಿ ಮಾರಾಟ, ಸೀಗಡಿ, ಕರಿ ಮೀನು	30/–	
8	ಅರಿಶಿನ ಕುಂಕುಮ, ಬಳೆ ಅಂಗಡಿ, ಸುಣ್ಣದ ಅಂಗಡಿ, ಇತರೆ ಚಿಲ್ಲರೆ ಅಂಗಡಿಗಳು ಹಾಗೂ ತಳ್ಳುವ ಗಾಡಿಗಳು ಮತ್ತು ಇತರೆ ಸಣ್ಣ ಪುಟ್ಟ ಅಂಗಡಿಗಳು.	30/–	

ದಿನವಹಿ ರಸ್ತೆ ಬದಿಯಲ್ಲಿ ನಡೆಸುವ ವ್ಯಾಪಾರಸ್ಥರಿಂದ ವಸೂಲಿ ಮಾಡಬೇಕಾದ ಸುಂಕದ ವಿವರಗಳು.
1. ಅಂಗಡಿ ಒಂದಕ್ಕೆ ರೂ. 30–00
2. ತಳ್ಳುವಗಾಡಿ ಒಂದಕ್ಕೆ ರೂ. 30–00

ಹರಾಜಿನ ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಗಳಿಗೆ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/–	ಸಹಿ/–	ಸಹಿ/–	ಸಹಿ/–
ಅಧ್ಯಕ್ಷರು ಪುರಸಭೆ, ಮಳವಳ್ಳಿ	ಉಪಾಧ್ಯಕ್ಷರು ಪುರಸಭೆ, ಮಳವಳ್ಳಿ	ಅಧ್ಯಕ್ಷರು, ಸ್ಥಾಯಿ ಸಮಿತಿ ಪುರಸಭೆ, ಮಳವಳ್ಳಿ	ಮುಖ್ಯಾಧಿಕಾರಿ ಪುರಸಭೆ, ಮಳವಳ್ಳಿ

ಮೈಸೂರು ಮಿತ್ರ
ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2025ಕ್ಕೆ 45 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 46ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳು ಏಪ್ರಿಲ್ 10, 2025 ರೊಳಗೆ ತಲುಪುವಂತೆ ಮಾಡಲು ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಅಂಥೋಣಿ ಡೋವ್: 8951668960
ಪ್ರೇಮಾ: 9880549879
ಕೆ.ಆರ್. ಸರ್ಕಲ್ ಕಚೇರಿ: 0821-2431774
ದೇವರಾಜ ಅರಸ್ ರಸ್ತೆ ಕಚೇರಿ: 0821-2428695

ಕೊಡಗು – ಪ್ರಸಾದ್, ಸೀತಾ ನಿಲಯ, ಮಡಿಕೇರಿ ರೇಂಜ್ ಫಾರೆಸ್ಟ್ ಹತ್ತಿರ, ಹೊಸ ಬಡಾವಣೆ, ಮಡಿಕೇರಿ 9731469871

ಮಂಡ್ಯ – ಕೆ. ಮೋಹನ್‌ರಾಜ್ 8762960325

ಶ್ರೀರಂಗಪಟ್ಟಣ – ವಿನಯ್ ಕಾರೇಕುರ, ಶ್ರೀರಂಗಪಟ್ಟಣ 9686893234

ಹುಣಸೂರು – ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ, ಕಲ್ಕುಣಿಕೆ, ಹುಣಸೂರು. 9448720626

ಚಾಮರಾಜನಗರ – ಸಿದ್ದಲಿಂಗಸ್ವಾಮಿ, ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265657

ಟಿ.ನರಸೀಪುರ – ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590

ಗುಂಡ್ಲುಪೇಟೆ – ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್, ಗುಂಡ್ಲುಪೇಟೆ. 9845995426

ಕೆ.ಆರ್. ನಗರ – ಮಂಜುನಾಥ, ವಾರ್ಡ್ ನಂ.17, ಕನಕನಗರ Extn. ಮುಳ್ಳೂರು ರಸ್ತೆ, ಕೆ.ಆರ್.ಟೌನ್ 9483084345

ಮಳವಳ್ಳಿ – ಶಿವಶಂಕರ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430 9632407806

ಕೊಳ್ಳೇಗಾಲ – ಎಸ್.ರಾಜು, ಮೈಸೂರು ಮಿತ್ರ ರಿಪೋರ್ಟರ್ #101, ಹುರುಳಿಕೇರಿ ಬೀದಿ, ಕೊಳ್ಳೇಗಾಲ 9916621007

ಹಾಸನ – ಆರ್.ಎನ್.ಸೋಮೇಶ್‌ಗೌಡ, ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401175

ಕುಶಾಲನಗರ – ರಘು ಹೆಬ್ಬಾಳೆ, ಮೈಸೂರು ಮಿತ್ರ ರಿಪೋರ್ಟರ್ C/o ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401

ಜಯಪುರ – ಬಿಳಿಗಿರಿ, ಜಯಪುರ 9945479288

ಪಿರಿಯಾಪಟ್ಟಣ – ವಿರೇಶ್, ಪಿರಿಯಾಪಟ್ಟಣ 8660057128

ವಿರಾಜಪೇಟೆ – ಮಂಜುನಾಥ, ವಿರಾಜಪೇಟೆ 9900949353

ಯಳಂದೂರು – ವಿ.ನಾಗರಾಜು, ಮೈತ್ರಿ ಮೆಡಿಕಲ್ಸ್, ಬಳೆಪೇಟೆ, ಯಳಂದೂರು 9844349191

ಕೆ.ಆರ್.ಪೇಟೆ – ಶ್ರೀನಿವಾಸ, ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438

ಹೆಚ್.ಡಿ.ಕೋಟೆ – ಮಂಜುನಾಥ ಎಸ್., ಹೆಚ್.ಡಿ.ಕೋಟೆ 9483574452

ಕೆ.ಎಂ.ದೊಡ್ಡಿ – ಸತೀಶ್ ಎ.ಎಲ್, ಕೆ.ಎಂ.ದೊಡ್ಡಿ 9242120338

ನಂಜನಗೂಡು – ರಂಗಸ್ವಾಮಿ, ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301 9901602226

ಹುಣಸೂರು – ಹೆಚ್.ಆರ್. ಕೃಷ್ಣಕುಮಾರ್ (ಜನ್ ರಾಮೇಗೌಡ), ನಂದಿನಿ ಮಾರಾಟ ಕೇಂದ್ರ ಮಾರುತಿ ಪೆಟ್ರೋಲ್ ಬಂಕ್ ಹತ್ತಿರ ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು 9060406093

ಕೊಳ್ಳೇಗಾಲ – ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849858